(SRI B. D. JATTI)

the Corporation's earnings as well as its net profits have steadily increased as indicated below:

(Rs. in lakhs)

Year		Gross Earnings	Net Profit
1959-60	...	3.33	2.45
1960-61	...	4.46	3.52
1961-62	...	5.98	3. 4
1962-63	...	10.40	4.85

The Corporation has, however, not been able to meet the demand towards the minimum guaranteed dividend of four per annum on its shares as it has yet to grow in strength. Even the other and older Corporations in the other States, except in one or two cases, have not been able to do so without the Government subvention. Further, there is the heavy tax liability involved. It has, therefore, to depend to some extent on the subvention from the Government to make up the deficit. The total subvention so far paid is Rs. 8.37 lakhs and this subvention is repayable to Government when the Corporation earns sufficient profits.

The accounts of the Corporation are subject to audit by the Auditors appointed by the State Government as also those elected by certain class of share-holders. The affairs of the corporation are also audited by the Comptroller and Auditor-General of India. The accounts were last audited up to end of 962-63.

The total amount outstanding on the loan amount is Rs.155.57 lakhs. The recovery of loans is progressing satisfactorily. The total number of defaults accruing so far is about 15 and appropriate action is being taken for recovery in all these cases.

MR. SPEAKER.—Before we adjourn, may I remind the House that we are re-assembling at 3 o' clock today and continue the debate on the Motion of Thanks ? The House will now stand adjourned to re-assemble at 3 o' clock.

The House adjourned for recess at Forty-five Minutes past Ten of the Clock and re-assembled at Three of the Clock.

[MR. SPEAKER in the Chair.]

MOTION OF THANKS TO THE GOVERNOR FOR HIS ADDRESS

(Debate continued.)

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ಮೊನ್ನೆಯ ದಿವಸ ನಾನು ಮಾತನಾಡುತ್ತ ಕೇಂದ್ರ ಸರ್ಕಾರದ ನೌಕರರಿಗೆ ಕೇಂದ್ರ ಸರ್ಕಾರದವರು ಹೆಚ್ಚಿಗೆ ಭತ್ಯಗಳನ್ನು

ಕೊಟ್ಟಿರುವ ವಿಚಾರವನ್ನು ಪ್ರಸ್ತಾಪ ಮಾಡುತ್ತಿದೆ. ಪಕ್ಕ ಪಕ್ಕದಲ್ಲೇ ಕೆಲಸ ಮಾಡತಕ್ಕ ಸಂಸ್ಥಾನ ಮತ್ತು ಕೇಂದ್ರ ಸರ್ಕಾರದ ನೌಕರರ ಸಂಬಳ ಸಾರಿಗೆಗಳಲ್ಲಿ ವ್ಯತ್ಯಾಸವಿದ್ದರೆ ಕೆಲಸ ಬಹಳಮಟ್ಟಿಗೆ ಕುಂಠಿತವಾಗುತ್ತದೆ. ಆದರೆ ನಮ್ಮ ಹಣಕಾಸಿನ ಪರಿಸ್ಥಿತಿಯಲ್ಲಿ ಎಲ್ಲ ನೌಕರರಿಗೂ ಅದೇ ರೀತಿಯ ಸಂಬಳ ಸಾರಿಗೆಗಳನ್ನು ಕೊಡುವುದು ಸಾಧ್ಯವಾಗುವುದಿಲ್ಲ ಎಂದು ಇವತ್ತು ಮಾನ್ಯ ಹಣಕಾಸಿನ ಮಂತ್ರಿಗಳ ಭಾಷಣವನ್ನು ಕೇಳಿದಮೇಲೆ ನನಗಾದರೂ ಅನ್ನಿಸುತ್ತದೆ. ಸಂಸ್ಥಾನ ಸರ್ಕಾರಗಳು ಕೇಂದ್ರದ ಜೊತೆಯಲ್ಲಿ ವ್ಯವಹರಿಸಿ ಇಂಥ ಏರಿಕೆಗಳನ್ನು ಮಾಡುವ ಕಾಲದಲ್ಲಿ ಸಂಸ್ಥಾನದ ನೌಕರರ ಬಗ್ಗೆಯೂ ವಿಚಾರಿಸಿ. ಒಂದು ಪಕ್ಷ ಅವರು ತಮ್ಮ ನೌಕರರ ಸಂಬಳ ಸಾರಿಗೆಗಳನ್ನು ಏರಿಸಿದ್ದೇ ಆದರೆ, ಹಾಗೆಯೇ ಸಂಸ್ಥಾನದಲ್ಲಿರತಕ್ಕ ನೌಕರರ ವೇತನದಲ್ಲಿ ಉಂಟಾಗಬಹುದಾದ ಏರಿಕೆಯ ಫಲವನ್ನೂ ಅವರು ವಹಿಸಿಕೊಳ್ಳಬೇಕು ಎಂಬ ಒಂದು ಕಂಡೀಷನ್ ಹಾಕಿ ಅವರಿಗೆ ಸೂಚಿಸಬೇಕೆಂದು ನಾನು ನಮ್ಮ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ದೇಶದಲ್ಲಿ ಭೂಮಿಯನ್ನು ಭೂರಹಿತ ಸಾಗುವಳಿದಾರರು ಹೆಚ್ಚು ಬೇಗನೆ ಪಡೆದುಕೊಳ್ಳಲು ಅವಕಾಶ ಮಾಡಲಾಗಿದೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಇದನ್ನು ನೋಡಿದಾಗ 'ಕುರಿಬಿದ್ದ ಹಳ್ಳ' ಎಂದು ಏನು ಹೇಳುತ್ತಾರೆ ಆ ರೀತಿ ಆದಂತೆ ಕಾಣುತ್ತದೆ. ಯಾರೋ ಯಾವುದೋ ಕಾಲದಲ್ಲಿ ಹೇಳಿದಂಥ ಮಾತನ್ನು ವಿಚಾರಮಾಡದೆ ಪ್ರತಿಯೊಬ್ಬರೂ ಅದೇ ದಾರಿಯನ್ನು ಹಿಡಿಯತಕ್ಕದ್ದು ಸೂಕ್ತವೇ ಎಂದು ನಾನು ಕೇಳಬೇಕಾಗಿದೆ. ನಮ್ಮಲ್ಲಿರುವ ಕಮ್ಯುನಿಸ್ಟ್ ಪಕ್ಷದವರಿಗೆ ಪ್ರಚಾರಕ್ಕೆ ಇದು ಅನುಕೂಲವಾಗುವ ಹಾಗೆ ಇದೆ. ಏಕೆಂದರೆ ಮಕ್ಕಳು ಅತ್ತರೆ, ಬೆಲ್ಲದ ಚೂರನ್ನೋ ಅಥವಾ ಪೆಪ್ಪರಮೆಂಟನ್ನೋ ಕೊಟ್ಟಾಗ ಕ್ಷಣಿಕವಾಗಿ ಆ ಮಕ್ಕಳು ಅಳುವುದನ್ನು ನಿಲ್ಲಿಸುವ ಹಾಗೆ ಈ ದೇಶದಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವ ಜನಸಂಖ್ಯೆಗೆ ಇರುವ ಸ್ವಲ್ಪ ಭೂಮಿಯನ್ನು ಹಂಚುತ್ತೇವೆ ಎಂದು ಒಂದೆರಡು ಎಕರೆಯನ್ನು ಜಮೀನಿಲ್ಲದವರಿಗೆ ಕೊಟ್ಟರೆ ಶಾಶ್ವತವಾಗಿ ಬಡವರ ಕಷ್ಟವನ್ನೂ ಪರಿಹಾರ ಮಾಡುವುದಕ್ಕೆ ಯಾವ ಏರ್ಪಾಡನ್ನೂ ನಾವು ಮಾಡಿದ ಹಾಗೆ ಆಗುವುದಿಲ್ಲವೆಂದು ನನಗೆ ಕಾಣಿಸುತ್ತದೆ. ಇದಕ್ಕೆ ಬದಲಾಗಿ, ಒಂದು ಕುಟುಂಬ ಸುಖವಾಗಿ ಜೀವನ ಮಾಡಬೇಕಾದರೆ ಯಾವ ಭೂಗುಣಕ್ಕೆ ತಕ್ಕ ಹಾಗೆ ಎಷ್ಟು ಜಮೀನು ಇರಬೇಕೋ ಅಷ್ಟು ಜಮೀನನ್ನೂ, ಭೂರಹಿತ ಸಾಗುವಳಿದಾರರಿಗೆ ಕೊಡಬೇಕು. ಅದಕ್ಕಿಂತ ಕಡಮೆ ಕೊಟ್ಟರೆ ಅದರಿಂದ ಮತ್ತೆ ಹೆಚ್ಚು ಹೆಚ್ಚು ಸಮಸ್ಯೆಗಳನ್ನು ಹುಟ್ಟು ಹಾಕಿದ ಹಾಗೆ ಆಗುತ್ತದೆ. ದೇಶದಲ್ಲಿರತಕ್ಕ ಎಲ್ಲ ಜನರಿಗೂ ಬರೀ ಭೂಮಿಯನ್ನು ಕೊಟ್ಟು ನಾವು ನಿರುದ್ಯೋಗ ಸಮಸ್ಯೆಯನ್ನು ಕಳೆಯುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲವೆಂದು ನನಗೆ ಹೊಳೆಯುತ್ತದೆ.

ಸಹಕಾರ ಪದ್ಧತಿಯಿಂದ ವ್ಯವಸಾಯವನ್ನು ಮಾಡುತ್ತಿದ್ದೇವೆಂದು ಹೇಳುತ್ತಾರೆ. ನಾವು ಸ್ವತಃ ಭೂಮಿಯನ್ನಿಟ್ಟುಕೊಂಡಿರುವವರು 365 ದಿವಸವೂ ಭೂಮಿಯಮೇಲೆ ನಿಗಾ ಇಟ್ಟು ಕಾಲ ಕಾಲಕ್ಕೆ ಕಷ್ಟಪಟ್ಟು ಬೆಳೆಯುವುದರಿಂದಲೇ ನಮಗೆ ತಕ್ಕ ಪ್ರತಿಫಲ ಸಿಕ್ಕದೇ ಇರುವಾಗ ಸಹಕಾರ ಪದ್ಧತಿಯ ಬೇಸಾಯ ಮಾಡುತ್ತೇವೆಂದು ಹತ್ತಾರು ಸಂಸಾರಗಳನ್ನು, ಗ್ರಾಮ ಗ್ರಾಮಗಳನ್ನೂ ಸೃಷ್ಟಿ ಮಾಡತಕ್ಕದ್ದು ಮೂರ್ಖತನದ ಪರಮಾವಧಿ ಎಂದು ನನಗನ್ನಿಸುತ್ತದೆ. ನಾನು ಸ್ವಂತವಾಗಿ ಕೆಲಸ ಮಾಡುವಾಗಲೇ ಅನೇಕ ಸಮಯದಲ್ಲಿ ಸರಿಯಾಗಿ ಕೆಲಸ ಮಾಡುವುದಕ್ಕೆ ಆಗದೆ ಇರುವಾಗ, ಬರೋದ್ಬೋಧನದಿಂದ ಕೆಲಸ ಮಾಡಲು 'ಸಹಕಾರ' ಎಂಬ ಪದವನ್ನು ಸೇರಿಸಿದ ಮಾತ್ರಕ್ಕೆ ನಮ್ಮ ಜನರೆಲ್ಲ ಆ ತತ್ವವನ್ನನುಸರಿಸಿ ಜಮೀನು ಮಾಡುತ್ತಾರೆಂದು ಹೇಳಿದರೆ ಅದು ಬಹಳ ತಿಳಿಗೇಡಿತನದ ಮಾತಾಗುತ್ತದೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುವುದಾದರೆ ಇವತ್ತು ರಷ್ಯ ದೇಶದಲ್ಲಿ ಇಂಥ ಒಂದು ಪದ್ಧತಿಯನ್ನು ಆಚರಣೆಗೆ ತಂದು, ಅವರು ಸಾಕಾದಷ್ಟು ಆಹಾರವನ್ನೂ ಬೆಳೆಯಲಾರದೆ ಅಮೇರಿಕ ದೇಶದಿಂದ ಗೋಧಿಯನ್ನು ತರಿಸತಕ್ಕ ಏರ್ಪಾಡನ್ನು ಮಾಡಿದ್ದಾರೆ. ಅದರಿಂದ ನೀವು ಪಾಠವನ್ನು ಕಲಿಯದೇ ಆ ದಾರಿಗೇ ಹೋಗುವುದು ಬುದ್ಧಿವಂತಿಕೆಯ ಲಕ್ಷಣವಲ್ಲ ಎಂದು ನನಗನ್ನಿಸುತ್ತದೆ.

ನೀರಾವರಿ ಬಾವಿಗಳಿಗೆ ಬೇಕಾದಷ್ಟು ಹಣ ಕೊಟ್ಟಿದ್ದೇವೆ, ಅದರಿಂದ 14 ಸಾವಿರದಷ್ಟು ಬಾವಿಗಳು ಪೂರ್ತಿ ಆಗಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಲೆಕ್ಕದಲ್ಲಿ 14 ಸಾವಿರ ಇರಬಹುದೇ ವಿನಾ ಅಲ್ಲಿಯೇ ಇದ್ದು ನೋಡಿದವರಿಗೆ ಬಹಳ ಕಡಿಮೆ ಬಾವಿಗಳಾಗಿರುವುದು ಗೊತ್ತಾಗುತ್ತದೆ. ಈ ಬಾವಿಗಳನ್ನು ಯಶಸ್ವಿಯಾಗಿ ತೆಗೆದು ಅದರಿಂದ ನೀರಾವರಿಯನ್ನು ಹೆಚ್ಚು ಮಾಡಬೇಕೆಂಬ ತೀವ್ರ ಆಸೆ ಸರ್ಕಾರಕ್ಕೆ ಇರುವುದಾದರೆ ಈ ಬಾವಿಗಳನ್ನು ಸರ್ಕಾರದವರೇ ತೋಡಿ ಅದಕ್ಕೆ ತಗಲುವ ಖರ್ಚನ್ನು ರೈತನಿಂದ 20-25 ವರ್ಷಗಳ ಕಂತುಗಳಲ್ಲಿ ವಸೂಲು ಮಾಡಿದರೆ ಅವನು ಸಂತೋಷಪಡುತ್ತಾನೆ. ನಮ್ಮ ರೈತ ಯಾವಾಗಲೂ ಋಣಮುಕ್ತನಾಗುವುದಕ್ಕೆ ಆಸೆ ಪಡುತ್ತಾನೆ. ಆದುದರಿಂದ ಈ ಒಂದು ಜವಾಬ್ದಾರಿಯನ್ನು ತೆಗೆದುಕೊಂಡು ಬಾವಿಗಳನ್ನು ನೇರ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ವಾಗಿ ಸರ್ಕಾರವೇ ತೆಗೆಸತಕ್ಕ ಏರ್ಪಾಡು ಮಾಡಬೇಕು ಇಲ್ಲವೆ ಹೋದರೆ ಅವನಿಗಿರತಕ್ಕ ನೂರೆಂಟು ತಾಪತ್ರಯಗಳಲ್ಲಿ ನೀವು ಕೊಡತಕ್ಕ ಹಣವನ್ನು ಆಯಾ ಕಾಲದಲ್ಲಿ ಯಾವ ಕೆಲಸಕ್ಕೆ ಆ ಹಣವನ್ನು ಉಪಯೋಗಿಸಬೇಕೋ ಆ ಕೆಲಸಕ್ಕೆ ಉಪಯೋಗಿಸದ ಬೇರೆ ರೂಪದಲ್ಲಿ ಆ ಹಣ ವೆಚ್ಚವಾಗಿ ಹೋಗುವುದರಿಂದ ಈ ಬಾವಿಗಳ ಕೆಲಸ ಬೇಗ ಆಗುವುದಿಲ್ಲ. ಇದನ್ನು ಸರ್ಕಾರ ತೀವ್ರತೆಯಿಂದ ವಿಚಾರಮಾಡಿ ಅವರೇ ಬಾವಿಗಳನ್ನು ತೆಗೆಸಿ ರೈತನಿಗೆ ವಹಿಸತಕ್ಕ ಏರ್ಪಾಡನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಆಹಾರದ ಪರಿಸ್ಥಿತಿಯ ವಿಷಯಕ್ಕೆ ಬಂದರೆ ಈಗ ಹೆಚ್ಚು ಭೂಮಿಯನ್ನು ಸಾಗುವಳಿಗೆ ತಂದಿದ್ದೀರಿ. ಬೇಕಾದಂಥ ಗೊಬ್ಬರ ವಗೈರೆ ಕೊಡುತ್ತಿದ್ದೀರಿ, ಮಧ್ಯಮಾವಧಿ ಮತ್ತು ಅಲ್ಪಾವಧಿ ಸಾಲಗಳನ್ನು ರೈತರಿಗೆ ಒದಗಿಸುತ್ತಿದ್ದೀರಿ. ಆದರೂ ಎಷ್ಟು ಆಹಾರ ಧಾನ್ಯಗಳನ್ನು ಜಾಸ್ತಿ ಬೆಳೆಯುತ್ತಿದ್ದೀರಿ ಎಂದು ಕೇಳುವವಾದರೆ ನಮಗೆ ಹೇಳುವುದಕ್ಕೇ ನಾಚಿಕೆಯಾಗುತ್ತದೆ. ಸರಕಾರದ ಆಡಳಿತವಲ್ಲಿರುವ ಕೆಲವು ಫಾರ್ಮುಗಳಲ್ಲಿ ಒಂದು ಸೇರು ರಾಗಿ ಬೆಳೆಯಲು ಹನ್ನೊಂದು ರೂಪಾಯಿ ಖರ್ಚಾಗಿದೆ ಎಂದು ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯು ಗೊತ್ತುಮಾಡಿಕೊಂಡಿರತಕ್ಕ ವಿಚಾರ ತಿಳಿದು ಬಂದಿದೆ. ಪಟ್ಟಣಗಳಲ್ಲಿ ವಾಸ ಮಾಡತಕ್ಕಂಥ ಜನರ ಹಿತ ರಕ್ಷಣೆ ಮಾಡಲಾಗುತ್ತದೆ. ಆದರೆ ಭೂಮಿಯನ್ನೇ ನಂಬಿಕೊಂಡಿರತಕ್ಕಂಥ, ಅದರ ಆಧಾರದಮೇಲೆಯೇ ಬದುಕತಕ್ಕಂಥ ರೈತರ ಬಗ್ಗೆ ಎಳ್ಳಷ್ಟೂ ಕನಿಕರ ತೋರುತ್ತಿಲ್ಲ. ದಳ್ಳಾಳಿಗಳ ಮೂಲಕ ಒಂದು ಏಜೆನ್ಸಿ ಗೊತ್ತುಮಾಡಿ ಆ ಮೂಲಕ ಆಹಾರ ಧಾನ್ಯಗಳನ್ನು ಹಂಚುವುದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ರೈತನ ಕಷ್ಟ ಪರಿಹಾರಕ್ಕೆ ಏನಾದರೂ ಪರಿಹಾರ ಕಲ್ಪನೆ ಮಾಡದೇ ಹೋದರೆ ದೇಶದಲ್ಲಿ ಶಾಂತಿ ನೆಲೆಸುವುದಕ್ಕೆ ಬಹಳ ಕಷ್ಟವಾಗುತ್ತದೆ.

ವಿದ್ಯುಚ್ಛಕ್ತಿಯ ವಿಚಾರದಲ್ಲಿ ಮಾತನಾಡುತ್ತಾ ಶರಾವತಿ ಯೋಜನೆ ಇನ್ನೇನು ಮುಗಿಯುತ್ತಾ ಬಂದಿದೆ ಎಂದು ಹೇಳಿದ್ದಾರೆ. ಈ ವರ್ಷದ ಮಧ್ಯ ಭಾಗದಲ್ಲಿ ಹೆಚ್ಚು ವಿದ್ಯುಚ್ಛಕ್ತಿ ನಮಗೆ ದೊರೆಯಬಹುದು ಎಂದು ತಾವು ಹೇಳುತ್ತಾ ಇದ್ದೀರಿ. ಆದರೆ ವಿದ್ಯುಚ್ಛಕ್ತಿ ದೊರೆತಾಗ್ಗೆ ಅದನ್ನು ತಕ್ಷಣ ಹಳ್ಳಿಗಾಡಿಗೆ ಒದಗಿಸುವ ಏರ್ಪಾಡು ಮಾಡಬೇಕಾಗಿದೆ. ಅದಕ್ಕೆ ಅವಶ್ಯವಾಗಿರುವ ಲೈನ್ ಎಳೆಯದೆ ಇರತಕ್ಕಂಥಾದ್ದು ಬಹಳ ನಿರಾಶಾದಾಯಕವಾದುದು. ಈವರೆಗೆ ಯಾವ ಏರ್ಪಾಡೂ ಮಾಡಿಕೊಂಡಿಲ್ಲ. ಇಂಥ ಸಂದರ್ಭದಲ್ಲಿ ಕೇರಳದವರು, ತಮಿಳರು ಆಂಧ್ರರು ಅತಿ ಬುದ್ಧಿವಂತಿಕೆಯಿಂದ ಕೃಷ್ಣಾ ನೀರಿನ ಹಂಚಿಕೆಯ ವಿಚಾರದಲ್ಲಿ ಮಾಡಿದ ಹಾಗೆ ನಮ್ಮ ಸಂಪತ್ತು ನಮಗೆ ಇಲ್ಲದ ಹಾಗೆ ಎಲ್ಲಿ ಮಾಡುತ್ತಾರೋ ಎಂದು ಬಹುಮಟ್ಟಿಗೆ ಗಾಬರಿಯಾಗಿದೆ.

ಇನ್ನು ರೈಲು ಮಾರ್ಗದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಸದ್ಯಕ್ಕೆ ಕೇಂದ್ರ ಸರಕಾರದ ಮಂತ್ರಿಮಂಡಲದಲ್ಲಿ ರೇಲ್ವೆ ಸಚಿವರಾಗಿ ನಮ್ಮವರೇ ಇದ್ದಾರೆ. ಆದರೂ ಚಾಮರಾಜನಗರ-ಸತ್ಯಮಂಗಲ ಲೈನು, ಮೈಸೂರಿನಿಂದ ತಿಪಟೂರಿಗೆ ರೈಲು ಹಾಕುವುದಕ್ಕೆ ಸರ್ವೆ ಕೆಲಸ ನಡೆದಿದ್ದರೂ ಇದುವರೆಗೆ ಕಾರ್ಯಗತವಾಗಿಲ್ಲ. ಈ ಲೈನು ಆದಷ್ಟು ಬೇಗ ಆಗುವ ಹಾಗೆ ಸರಕಾರ ಪ್ರಯತ್ನ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಮದ್ಯಪಾನ ನಿರೋಧ ನೀತಿಯ ಬಗ್ಗೆ ಏನೇನೂ ಹೇಳಿಲ್ಲ. ಈ ವರ್ಷ ಮೈನಸ್ ಬಜೆಟ್ ಇದ್ದರೂ ಅದನ್ನು ಎಕ್ಸೆಸ್ ಬಜೆಟ್ಟಾಗಿ ಅರ್ಥ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಮಾಡಿ ಅವರು ಭಾಷಣ ಮಾಡಿದ್ದಾರೆ. ಅವರು ಕೇಳಿಕೊಂಡಿರುವ ಧೋರಣೆಯನ್ನು ನೋಡಿದರೆ ನಾಳೆ ಅಥವಾ ನಾಡಿದ್ದು ಹೊಸ ತೆರಿಗೆ ಹಾಕುವ ಯೋಜನೆ ಮನಸ್ಸಿನಲ್ಲಿ ಇರುವ ತರಹ ಭಾಸವಾಗುತ್ತದೆ. ವಾಸ್ತವವಾಗಿ ಮದ್ಯಪಾನ ನಿರೋಧ ನೀತಿಯಿಂದ ದೇಶಕ್ಕೆ ಎಳ್ಳಷ್ಟೂ ಪ್ರಯೋಜನವಾಗಿಲ್ಲ. ಉತ್ಪತ್ತಿ ಕಡಮೆಯಾಗಿದೆ. ಜನರು ಕಳ್ಳ ಭಟ್ಟಿ ಸಾರಾಯಿ ಕುಡಿದು ಆರೋಗ್ಯ ಕೆಡಿಸಿಕೊಳ್ಳತಕ್ಕಂಥ ಸಂದರ್ಭ ಉಂಟಾಗಿದೆ. ಆದುದರಿಂದ ಮದ್ಯಪಾನ ನೀತಿಯನ್ನು ತೆಗೆದುಹಾಕಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ತಿಳಿಸಲು ಇಷ್ಟಪಡುತ್ತೇನೆ.

ಇನ್ನು ಶಿಕ್ಷಣ ವಿಚಾರದ ಬಗ್ಗೆ ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ನಮ್ಮ ರಾಜ್ಯದ ದುರ್ದೈವದಿಂದ ಶ್ರೀಮಾನ ಕಂಠಿಯವರು ಈ ವಿದ್ಯಾ ಇಲಾಖೆಯನ್ನು ವಹಿಸಿಕೊಂಡನಂತರ ದಿನೇ ದಿನೇ ಬೇಜಾರು ಬರತಕ್ಕಂಥ ಮನಸ್ಸಿಗೆ ಜುಗುಪ್ಸೆ ಉಂಟಾಗತಕ್ಕಂಥ ಒಂದಲ್ಲ ಎರಡಲ್ಲ ಹತ್ತಾರು ನಿದರ್ಶನಗಳು ಇವೆ. ಅದೆಲ್ಲವನ್ನೂ ಹೇಳಬೇಕಾದರೆ ಮೊನ್ನೆ ಶ್ರೀಮಾನ್ ಕೃಷ್ಣ ಅವರು ಮಾತನಾಡಿದಂಥ ಪ್ರತಿಯೊಂದು ಪದವನ್ನೂ ಪುನರುಚ್ಚರಿಸಬೇಕಾಗುತ್ತದೆ. ನಮ್ಮ ಹಳೇ ಮೈಸೂರಿಗೂ ಹೊಸದಾಗಿ ಸೇರಿಕೊಂಡಿರತಕ್ಕಂಥ ಪ್ರದೇಶಕ್ಕೂ ವ್ಯತ್ಯಾಸ ಮಾಡಿದ್ದಾರೆ. ಅವರಲ್ಲೂ ವಿಶ್ವವಿದ್ಯಾನಿಲಯ ಉಪಕುಲಪತಿಗಳ ಸ್ಥಾನದಂಥ ಮಹಾ ಸ್ಥಾನಕ್ಕೆ ನಮ್ಮಲ್ಲಿ ಯಾರೂ ಯೋಗ್ಯರಾದವರು

ಇಲ್ಲವೇ ? ವಿದ್ಯಾ ಮಂತ್ರಿಗಳು ಇದ್ದಕ್ಕಿದ್ದಹಾಗೆ ಬದಲಾವಣೆ ಮಾಡುತ್ತಿರುವುದು ನಾಚಿಕೆಗೇಡು. ಇದರಿಂದ ನಾವು ತಲೆ ತಗ್ಗಿಸಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ಹಳೇ ಮೈಸೂರು ಭಾಗದ ಜನರು ಸಹಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅವರು ಎಷ್ಟು ಬೇಗ ತಮ್ಮ ಸ್ಥಾನ ತ್ಯಜಿಸಿ ಹೋಗುತ್ತಾರೋ ಅಷ್ಟು ಒಳ್ಳೆಯದಾಗುತ್ತದೆ, ದೇಶಕ್ಕೂ ಒಳ್ಳೆಯದಾಗುತ್ತದೆ ಎಂದು ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಸಿ. ಎಸ್. ಹುಲಕೋಟಿ (ಮುಂಡರಗಿ). — ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಪಾಲರವರು ಮಾಡಿದ ಭಾಷಣಕ್ಕಾಗಿ ಅವರಿಗೆ ವಂದನಾರ್ಪಣೆ ಮಾಡಬೇಕೆಂದು ಸೂಚಿಸಿರುವ, ನನ್ನ ಮಿತ್ರರಾದ ಶ್ರೀ ಸಿದ್ದಯ್ಯನವರು ಮಂಡಿಸಿರುವ, ಈ ನಿರ್ಣಯಕ್ಕೆ ನನ್ನ ಹೃತ್ಪೂರ್ವಕ ಬೆಂಬಲ ಅರ್ಪಿಸುತ್ತೇನೆ. ಇದಲ್ಲದೆ ಈ ಸಂದರ್ಭದಲ್ಲಿ ಒಂದೆರಡು ವಿಷಯಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ನಮ್ಮ ರಾಜ್ಯಪಾಲರವರು ತಮ್ಮ ಭಾಷಣದ ಪ್ರಾರಂಭದಲ್ಲಿ ಸದ್ಯಕ್ಕೆ ದೇಶದಲ್ಲಿರುವ ತುರ್ತು ಪರಿಸ್ಥಿತಿಯ ಬಗ್ಗೆ ಪ್ರಸ್ತಾಪಮಾಡಿ ಅದನ್ನು ವಿವರಿಸಿದ್ದಾರೆ. ಚೀನೀ ದಾಳಿಯಿಂದ ಉಂಟಾದ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಇಂಥ ತುರ್ತು ಪರಿಸ್ಥಿತಿಯಲ್ಲಿ ನಾವು ಸುಮ್ಮನೆ ಕುಳಿತುಕೊಳ್ಳದೆ ಅದರ ಬಗ್ಗೆ ವಿಶೇಷ ಕಾಳಜಿಯಿಂದ ನಮ್ಮ ರಾಷ್ಟ್ರದ ಸೈನ್ಯ ಬಲ ಹೆಚ್ಚಿಸುವುದಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಇದಲ್ಲದೆ ಪಾಕಿಸ್ತಾನದಿಂದ ಓಡಿಬಂದ ಹತಭಾಗ್ಯರು ಪುನರಪಿ ನಮ್ಮ ದೇಶವ ಮರೆಹೋಗುತ್ತಿದ್ದಾರೆಂದು ಹೇಳಿದ್ದಾರೆ ಇಂದು ದೇಶದ ಶಾಂತತೆಗೆ ಧಕ್ಕೆ ಬರುವಂತಾಗಿದೆ. ಆದುದರಿಂದ ನಾವು ಮರೆತು ಸುಮ್ಮನೆ ಕುಳಿತುಕೊಳ್ಳುವುದು ಯೋಗ್ಯವಲ್ಲ, ನಾವು ಎಚ್ಚರಿಕೆಯಿಂದ ಕೆಲಸ ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಅದರಲ್ಲೂ ನಮ್ಮ ರಾಜ್ಯದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡು ಉಚಿತ ರೀತಿಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ತೀವ್ರ ಪರಿಹಾರವಾಗಿ, ನಮ್ಮ ರಾಷ್ಟ್ರದ, ದೇಶದ ಬೆಳವಣಿಗೆಗೆ, ಅಭಿವೃದ್ಧಿಗೆ ಹೆಚ್ಚು ನಮ್ಮ ಕರ್ತವ್ಯವನ್ನು ಮಾಡತಕ್ಕದು ಅವಶ್ಯವೆಂದು ನಮಗೆಲ್ಲರಿಗೂ ಅನಿಸುತ್ತದೆ.

ಒಂದು ವಿಷಯವನ್ನು ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ವಿವರಿಸಿರುತ್ತಾರೆ. ಮುಖ್ಯವಾಗಿ ಅವರು ದೇಶದಲ್ಲಿ ಉತ್ಪತ್ತಿ ಬೆಳಸುವ ಬಗ್ಗೆ, ಹೇಳುವಾಗ, ಮೇಜರ್ ಇರ್ರಿಗೇಷನ್, ಮೈನರ ಇರ್ರಿಗೇಷನ್, ಇರ್ರಿಗೇಷನ್ ವೆಲ್ಸ್ ಇವುಗಳೆಲ್ಲಕ್ಕೂ ಹೆಚ್ಚು ಪ್ರಾಶಸ್ತ್ಯ ಕೊಡತಕ್ಕದು ಅವಶ್ಯಕ ; ಅವುಗಳಿಂದ ನಮ್ಮ ರಾಷ್ಟ್ರದ ಉತ್ಪನ್ನವನ್ನು ಹೆಚ್ಚಿಸಲು ಸಹಾಯ ದೊರೆಯುತ್ತದೆ ಎಂಬುದು ಸ್ವಾಭಾವಿಕವಾದ ಮಾತು. ಅಲ್ಲದೆ, ಮುಖ್ಯವಾಗಿ ಹಿಂದುಳಿದ ಪ್ರದೇಶ ನಮ್ಮ ರಾಜ್ಯದಲ್ಲಿ ಇದ್ದೇಇದೆ. ಅದರ ಬೆಳವಣಿಗೆಗೆ ಈ ನೀರಾವರಿ ಯೋಜನೆಗಳು ಮುಖ್ಯವಾದ ಸಾಧನಗಳೆಂದು ನಾನು ಭಾವಿಸುತ್ತೇನೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೃಷ್ಣ-ಗೋದಾವರಿ ವಿಷಯದ ಸಂಬಂಧವಾಗಿ ಹೇಳುತ್ತಾ, ಬಿಜಾಪುರ ಜಿಲ್ಲೆಯಲ್ಲಿ ತಲವಾಟ್ಟಿಯಲ್ಲಿ ಒಂದು ಇರ್ರಿಗೇಷನ್ ಸ್ಕೀಮು ಆಗತಕ್ಕದು ಇದೆ ಮತ್ತು ನಾರಾಯಣಪುರದಲ್ಲಿ ಸಹ ಒಂದು ಸ್ಕೀಮ್ ಆಗತಕ್ಕದ್ದು ಇದೆ ಎಂದು ವಿವರಿಸಿರುತ್ತಾರೆ. ಈ ಬಗ್ಗೆ ಟೆಕ್ನಿಕಲ್ ಸ್ಯಾಂಕ್ಷನ ಸಿಕ್ಕಿದೆ ಎಂದು ತಿಳಿಸೋಣವಾಗಿದೆ. ಅವನ್ನು ತೀವ್ರವಾಗಿ ಮುಂದುವರಿಸಿ, ಕೆಲಸ ನಡೆಸಿದಲ್ಲಿ ನಮ್ಮ ಭಾಗದ ರೈತರಿಗೆ ಹೆಚ್ಚು ಉಪಯೋಗವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಅದೇಪ್ರಕಾರ ನಮ್ಮ ಧಾರವಾಡ ಜಿಲ್ಲೆಯಲ್ಲಿ ಮಲಪ್ರಭಾ ಯೋಜನೆಯ ಬಗ್ಗೆ ಟೆಕ್ನಿಕಲ್ ಸ್ಯಾಂಕ್ಷನ್, ಕ್ಲಿಯರನ್ಸ್ ಸಿಕ್ಕಿದೆ ಎಂದು ಹೇಳೋಣವಾಗಿದೆ. 2-3 ವರ್ಷಗಳಿಂದ ಆ ಕಾರ್ಯ ನಡೆಯುತ್ತಾ ಬಂದಿದ್ದರೂ ಬಹಳ ಮಂದಗತಿಯಿಂದ ಕೆಲಸ ಸಾಗಿರುತ್ತದೆ. ಬಹಳ ಮಂದಗತಿಯಿಂದ ನಡೆಯುತ್ತಿದೆ. ಆ ಕೆಲಸಕ್ಕೆ ಹೆಚ್ಚುಹೆಚ್ಚು ಖರ್ಚು ಬರುವ ಸಂಭವವಿದೆ. ಆದ್ದರಿಂದ ಶಕ್ಯವಿದ್ದಷ್ಟುಮಟ್ಟಿಗೆ ತೀವ್ರಗತಿಯಿಂದ ಮುಂದುವರಿಸಿ ಕೆಲಸ ಮುಗಿಸಿದಲ್ಲಿ ಆ ಭಾಗದ ಜನರಿಗೆ ಹೆಚ್ಚು ಹೆಚ್ಚು ಲಾಭವಾಗುವುದಲ್ಲದೆ, ಅಲ್ಲಿ ಮೇಲಿಂದಮೇಲೆ ಬರುವ ಬರಗಾಲ ತಪ್ಪಿಸಬಹುದು. ಅಲ್ಲಿ ಮೇಲಿಂದಮೇಲೆ ಬರುಗಾಲ ಬರುತ್ತಾ ಇರುವುದರಿಂದ ಅಲ್ಲಿಯ ಜನರು ತಕಾವಿಸಾಲ ಬೇಕು, ಸೊಸೈಟಿ ಸಾಲ ಬೇಕು ಎಂದು ಮೇಲಿಂದಮೇಲೆ ಹೇಳುತ್ತಾ ಬರುತ್ತಾರೆ. ಅದನ್ನು ತಪ್ಪಿಸಲು ನೀರಾವರಿ ಯೋಜನೆಯ ಕೆಲಸ ಬಹಳ ಮುಖ್ಯವಾಗಿರುತ್ತದೆ. ಅದನ್ನು ಬಹಳ ತೀವ್ರಗತಿಯಿಂದ ಸಾಗಿಸಬೇಕು ಎಂದು ನಾನು ಸರಕಾರದವರಿಗೆ ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ.

(ಶ್ರೀ ಸಿ. ಎಸ್. ಹುಲಕೋಟಿ)

ಇದೇ ಪ್ರಕಾರ ನಮ್ಮ ಭಾಗದಲ್ಲಿ ಬಹುಮಟ್ಟಿಗೆ ದುರ್ಭಿಕ್ಷದ ಕ್ಷೇತ್ರವೂ ಇರುವುದು ಎಂದು ಮೇಲಿಂದಮೇಲೆ ಇಲ್ಲಿ ವಿವರಿಸಲಾಗಿದೆ. ಅದು ಸರಕಾರದ ಗಮನದಲ್ಲಿರುತ್ತದೆ. ಅದು ಹೆಚ್ಚು ಹೆಚ್ಚು ಸುಧಾರಣೆಯಾಗಿ, ಅಭಿವೃದ್ಧಿಯಾಗಿ ಉಳಿದ ಪ್ರದೇಶಗಳಂತೆ ಸರಿಯಾದ ಪ್ರಗತಿ ಹೊಂದಬೇಕಾದರೆ, ಅಲ್ಲಿ ನೀರಾವರಿ ಕೆಲಸದ ಅವಶ್ಯಕತೆ ಅಗತ್ಯ ಹೆಚ್ಚಾಗಿ ಇವೆಯೆಂದು ನನಗನಿಸುತ್ತದೆ.

ಸಣ್ಣ ನೀರಾವರಿ ಸ್ವಲ್ಪಮಟ್ಟಿಗೆ ಉಪಯೋಗವಾಗಬಹುದು. ಅದರಿಂದಲೇ ಪ್ರಗತಿ ಹೊಂದುತ್ತೇವೆಂದು ಹೇಳುವುದಕ್ಕಾಗದು. ಅಲ್ಲಿಯೂ ನಮ್ಮ ಧಾರವಾಡ ಜಿಲ್ಲೆಯಲ್ಲಿ ತುಂಗಭದ್ರ ನದಿಯ ಎಡದಂಡೆ ಬಹಳಮಟ್ಟಿಗೆ 30–40 ಮೈಲಿಗಳತನಕ ಇರುತ್ತದೆ. ತುಂಗಭದ್ರ ನದಿಯ ನೀರಿನಿಂದ ನಮ್ಮ ಧಾರವಾಡ ಜಿಲ್ಲೆಯಲ್ಲಿ ಮೇಜರ್ ಇರ್ರಿಗೇಷನ್ನಿಗೆ ಒಂದು ಹನಿ ನೀರು ಸಹ ಉಪಯೋಗವಾಗಿಲ್ಲ. ದುರ್ದೈವದಿಂದ ನಾವು ಮುಂಬೈ ರಾಜ್ಯದಲ್ಲಿದ್ದಾಗ ಆ ಕಾಲಕ್ಕೆ 1944 ನೆಯ ಇಸವಿಯಲ್ಲಿ ಏನು ಒಂದು ಕರಾರು ಆಗಿರುವುದೋ ಆ ಕರಾರಿನ ಕಾಲಕ್ಕೆ ಸರಕಾರದವರು ಅದರ ಬಗ್ಗೆ ಹೆಚ್ಚು ಕಾಳಜಿ ತೆಗೆದುಕೊಳ್ಳದೆ ಇದ್ದುದರಿಂದ ತುಂಗಭದ್ರ ನದಿಯ ನೀರಿನ ಉಪಯೋಗ ನಮಗೆ ಅಷ್ಟು ದೊರೆತಿರುವುದಿಲ್ಲ. ಇದು ಬಹಳ ದುರ್ದೈವದ ಸಂಗತಿ. ನಿಜವಾಗಿ ಹೇಳಬೇಕಾದರೆ ನಮ್ಮ ಆ ಭಾಗದ ಜನರು, ಅಂದರೆ, ರಾಣೆಬೆನ್ನೂರು ತಾಲ್ಲೂಕು, ಬ್ಯಾಡಗಿ ಕೆಲವು ಭಾಗ, ಹಾವೇರಿ ಕೆಲವು ಭಾಗ, ಹಾಗೂ ಸಿರಹಟ್ಟಿಯ ಕೆಲವು ಭಾಗ ಮತ್ತು ಮುಂಡರ್ಗಿ ಮುಖ್ಯ ಭಾಗ ಮತ್ತು ಕೊಪ್ಪಳದ ಕೆಲವು ಗ್ರಾಮಗಳಿಗೆ ಇದರ ಉಪಯೋಗವು ಆಗುವುದು ಎಂದು ಈಗ ಸಾಧಾರಣ ಸರ್ವೆ ಮಾಡಿದ್ದರ ಮೇಲೆ ತಿಳಿದುಬಂದಿರುತ್ತದೆ. ಆದರೆ ದುರ್ದೈವದಿಂದ ಆ ವಿಷಯವನ್ನು ಇಲ್ಲಿ ವಿಸ್ತರಿಸಲಾಗಿಲ್ಲ. ಅದು ಯಾವ ಕಾರಣದಿಂದ ಹಾಗೆಯೇ ಉಳಿದಿರುವುದು ಎಂದು ನನಗೆ ತಿಳಿಯದಾಗಿದೆ. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಈ ಪ್ರಾಜೆಕ್ಟನ್ನು ತೆಗೆದುಕೊಂಡಲ್ಲಿ ಸಾಧಾರಣವಾಗಿ ನಮ್ಮ ಧಾರವಾಡ ಜಿಲ್ಲೆ ಭಾಗದ ಎರಡುವರೆ ಮೂರು ಲಕ್ಷ ಎಕರೆಗೆ ನೀರಾವರಿ ಉಪಯೋಗವಾಗುತ್ತದೆ ಎಂದು ನನಗೆ ತಿಳಿದುಬರುತ್ತದೆ. ಆ ಭದ್ರ ಕೆನಾಲ್ ಪ್ರಾಜೆಕ್ಟಿನಲ್ಲಿ ಹೆಚ್ಚು ನೀರು ಇರುವುದಾಗಿ ಗೊತ್ತಾಗುತ್ತದೆ. ಅದರ ಉಪಯೋಗದ ಬಗ್ಗೆ ವಿವರ ಕೊಟ್ಟಿಲ್ಲ. ಶಿವಮೊಗ್ಗ ಜಿಲ್ಲೆಗೆ ಅದರ ಉಪಯೋಗವಾಗುತ್ತದೆಂದು ತಿಳಿದುಬಂದಿರುತ್ತದೆ. ಈ ಹೆಚ್ಚಿನ ನೀರನ್ನು ಆ ಭಾಗಕ್ಕೆ ಕೊಟ್ಟಲ್ಲಿ ಆ ಜನರ ಪರಿಸ್ಥಿತಿ ಹೆಚ್ಚು ಸುಧಾರಿಸುವುದರಲ್ಲಿ ಏನೂ ಸಂಶಯ ಕಂಡು ಬರುವುದಿಲ್ಲ. ಸಾಧಾರಣವಾಗಿ ಈಗ 4–5 ವರ್ಷಗಳಿಂದ ಆ ಭಾಗದಲ್ಲಿ ಸತತ ಬರಗಾಲ ಕಂಡುಬರುತ್ತಿದೆ. ಮುಖ್ಯವಾಗಿ ಹಾವೇರಿ ಕೆಲವು ಗ್ರಾಮಗಳಲ್ಲಿ, ಸಿರಹಟ್ಟಿ ಕೆಲವು ಭಾಗಗಳಲ್ಲಿ, ಮುಂಡಗೆರೆ ಬಹುತೇಕ ಭಾಗ, ಕೊಪ್ಪಳದ ಕೆಲವು ಭಾಗಗಳು—ಇಲ್ಲಿ 50–60 ವರ್ಷಗಳಿಂದ ಸತತ ಬರಗಾಲ ಬರುತ್ತಾ ಇದೆ. ಜನರು ಕ್ಷೀಣವಾಗಿದ್ದಾರೆ. ಪ್ರತಿವರ್ಷ ಹೆಚ್ಚು ಸೊಸೈಟಿ ಸಾಲ ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು; ತಕಾವಿ ಲೋನ್ ವಸೂಲಿಗೆ ಪ್ರೊಸೀಡಿಂಗ್ಸ್ ತೆಗೆದುಕೊಳ್ಳಬಾರದು ಎಂದು ಮೇಲಿಂದಮೇಲೆ ನಮ್ಮ ಕಡೆಗೆ ಜನರು ಒತ್ತಾಯ ಮಾಡುತ್ತಾ ಇದ್ದಾರೆ. ಹಾಗೆ ಮಾಡಬೇಕೆಂದು ನಾವು ಆಫೀಸರಿಗೆ ಒತ್ತಾಯ ಮಾಡುತ್ತಾ ಇದ್ದೇವೆ. ಇದರಿಂದ ಸರಕಾರಿ ಉತ್ಪನ್ನ ಸಹ ಕಡಿಮೆಯಾಗುವುದಲ್ಲದೆ ಜನರ ಪರಿಸ್ಥಿತಿ ಕೆಟ್ಟು, ಅವರ ಜೀವನ ಕಷ್ಟಕರವಾಗಿ, ಅವರು ಬಹಳ ತೊಂದರೆಗೀಡಾಗಿದ್ದಾರೆ. ಆದ್ದರಿಂದ ನಾನು ಸರಕಾರಕ್ಕೆ ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುವುದೇನೆಂದರೆ ತುಂಗಭದ್ರ ಕಾಲುವೆ ನೀರಿನ ಹಂಚಿಕೆಯಲ್ಲಿ ಆ ಭಾಗಕ್ಕೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ ಎಂದು ಸರ್ವೆ ಮಾಡಿಸಿ ಇನ್‌ವೆಸ್ಟಿಗೇಷನ್ ಮಾಡಿಸಿ ಆ ಪ್ರಾಜೆಕ್ಟನ್ನೂ ಮೇಜರ್ ಇರ್ರಿಗೇಷನ್ ಸ್ಕೀಮಿನಲ್ಲಿ ಸೇರಿಸಬೇಕು ಎಂದು ನಾನು ಬಹು ಕಳಕಳಿಯಿಂದ ಜನರ ಪರವಾಗಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಅದನ್ನು ದುರ್ಲಕ್ಷ್ಯ ಮಾಡಿದಲ್ಲಿ ಜನರು ಬಹಳ ಕೆಟ್ಟ ಪರಿಸ್ಥಿತಿಗೊಳಗಾಗುವ ಸಂಭವವಿದೆ. ಅಲ್ಲಿ ಜನ ಊರು ಬಿಟ್ಟು ಹೋಗುವಂಥ ಪರಿಸ್ಥಿತಿ ಇರುವುದರಿಂದ ಸರಕಾರದವರು ದಯವಿಟ್ಟು ಆ ಕಡೆ ಹೆಚ್ಚು ಗಮನ ಕೊಡಬೇಕು. ಮತ್ತು ಈ ಸಂಬಂಧವಾದ ಸರ್ವೆ ಯಾವ ಸ್ಟೇಜಿಗೆ ಬಂದಿದೆ, ಈ ಸ್ಕೀಮಿನ ಸರ್ವೆ ರಿಪೋರ್ಟು ಆಗಿದೆಯೋ ಎಂಬ ಬಗ್ಗೆ ಮಾಹಿತಿಯನ್ನು ಈ ಮಾನ್ಯಸಭೆಯ ಮುಂದೆ ಇಡಬೇಕು ದಯವಿಟ್ಟು ಮಾನ್ಯ ಕಂದಾಯ ಮಂತ್ರಿಗಳು ಅದನ್ನು ವಿವರಿಸುವುದಾಗಿ ನಂಬುತ್ತೇನೆ.

ಇದೂ ಅಲ್ಲದೆ ನಮ್ಮ ಧಾರವಾಡ ಜಿಲ್ಲೆಯಲ್ಲಿ ಕೆಲವು ಹಳ್ಳಗಳು ಹರಿಯುತ್ತಿವೆ, ಆ ಹಳ್ಳಗಳ ಉಪಯೋಗ ನಮಗೆ ಸಾಕಷ್ಟು ಆಗಿಲ್ಲ. ಕೆಲವು ಮೈನರ್ ಇರ್ರಿಗೇಷನ್ ಸ್ಕೀಮುಗಳನ್ನು ಈಗಾಗಲೆ ಇನ್‌ವೆಸ್ಟಿಗೇಟ್ ಮಾಡಿದ್ದಾರೆ. ಅವುಗಳ ಸರ್ವೆ ಸಹಿತ ಆಗಿದೆ. ಕೆಲವು ಪ್ಲಾನ್ ಎಸ್ಟಿಮೇಟುಗಳೂ ಆಗಿವೆ. ಅವುಗಳನ್ನು ಶಕ್ಯವಿದ್ದಷ್ಟು ಬಡ್ಜೆಟ್‌ನಲ್ಲಿ ಸೇರಿಸಿ ಸಹಾಯಮಾಡಬೇಕೆಂದು ನಾನು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

3–30 P.M.

ತೇಲೂರು ಮೈನರ್ ಇರಿಗೇಷನ್ ಎಂಬ ಇದೆ. ಅವನ್ನೂ ಹೋದ ವರ್ಷ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಸೇರಿಸಲಾಗಿತ್ತು. ಅವನ್ನು ತೀವ್ರ ಗಮನಕ್ಕೆ ತೆಗೆದುಕೊಂಡು ತೀವ್ರಗತಿಯಿಂದ ಕೆಲಸ ಮಾಡುವ ಬಗ್ಗೆ ಸರಕಾರದವರು ತಮ್ಮ ಅಧಿಕಾರಸ್ಥರಿಗೆ ತಿಳಿಸುತ್ತಾರೆಂದು ನಂಬುತ್ತೇನೆ. ಅದೇ ಪ್ರಕಾರ ಕೊಪ್ಪಳ, ಶಿರಹಟ್ಟಿಯಲ್ಲಿ ಅನೇಕ ಸ್ಕೀಂಗಳು ಇವೆ. ಅವನ್ನೂ ಹೆಚ್ಚು ತೀವ್ರ ಗತಿಯಲ್ಲಿ ಸಾಗಿಸುತ್ತೀರಿ, ಅವುಗಳ ಉಪಯೋಗವನ್ನು ಹೆಚ್ಚಿಸುತ್ತೀರಿ ಎಂದು ನಂಬುತ್ತೇನೆ. ಇರಿಗೇಷನ್ ವೆಲ್ಸ್‌ಗೆ ಬೇಕಾದಷ್ಟು ಸೋರ್ಸ್ ಇರುತ್ತದೆ, ಅದಕ್ಕೆ ಸಾಕಾದಷ್ಟು ಹಣ ಒದಗಿಸಿದರೆ ಜನರ ಕಷ್ಟ ಸ್ವಲ್ಪಮಟ್ಟಿಗಾದರೂ ಕಡಮೆಯಾಗುತ್ತದೆ ಎಂದು ನಂಬುತ್ತೇನೆ. ಈ ಬಗ್ಗೆ ಸರಕಾರದವರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ವಿಷಯ, ಸರಕಾರದವರ ಅಗ್ರಿಕಲ್ಚರಲ್ ಸ್ಕೀಮಿನಲ್ಲಿ ಮೆನ್ಯೂರಿಯಲ್ ಡಿಸ್ಟ್ರಿಬ್ಯೂಷನ್ ಎಂಬ ಒಂದು ಸ್ಕೀಂ ಇದೆ. ಅದು ಏನೆಂದರೆ, ಮುನಿಸಿಪಲ್ ಏರಿಯಾದಿಂದ ಗ್ರಾಮಾಂತರ ಪ್ರದೇಶಕ್ಕೆ 5 ಮೈಲಿ ದೂರದಲ್ಲಿ ಗೊಬ್ಬರವನ್ನು ಒಯ್ಯುವುದಕ್ಕೆ ಟ್ರಾನ್ಸ್‌ಪೋರ್ಟ್ ಸಬ್ಸಿಡಿ ಎಂದು ಹಣವನ್ನು ಕೊಡುತ್ತಾ ಇದ್ದಾರೆ. ಆದರೆ ಇದರ ಉಪಯೋಗ ಯಾವ ಪ್ರಕಾರ ಆಗುತ್ತಿದೆ ಎಂಬುದನ್ನು ನನ್ನ ಗಮನಕ್ಕೆ ಬಂದದ್ದನ್ನು ಸರಕಾರದವರಿಗೆ ತಿಳಿಸಲು ಬಯಸುತ್ತೇನೆ. ಅದು ಏನೆಂದರೆ ಈ ಸಬ್ಸಿಡಿ ಯಾರಿಗೆ ಮುಖ್ಯವಾಗಿ ಹಳ್ಳಿಯಲ್ಲಿರುವ ಬಡ ಜನರಿಗೆ ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಾ ಇಲ್ಲ ಮತ್ತು ಶಹರದಿಂದ ಗೊಬ್ಬರವನ್ನು ಹೇರಿಕೊಂಡು ಹೋಗುವ ಶ್ರೀಮಂತರಿಗೆ ಮಾತ್ರ ಸಿಕ್ಕುತ್ತಾ ಇದೆ; ಆದ್ದರಿಂದ, ಬಡಜನರಿಗೆ ಈ ಟ್ರಾನ್ಸ್‌ಪೋರ್ಟ್ ಫೆಸಿಲಟಿ, ಸಬ್ಸಿಡಿ ಸಿಕ್ಕುವಂತೆ ರೂಲ್ಸ್‌ನಲ್ಲಿ, ಅವಶ್ಯಕತೆಯೆನಿಸಿದರೆ ಮಾರ್ಪಾಟು ಸಹ ಮಾಡಬೇಕೆಂದು ನಾನು ಸರಕಾರದವರನ್ನು ಕಳಕಳಿಯಿಂದ ಬಿನ್ನಹ ಮಾಡಿಕೊಳ್ಳುತ್ತೇನೆ. ಉದಾಹರಣೆಯಾಗಿ ಹೇಳುವುದಾದರೆ ಗದುಗಿನಲ್ಲಿ ಆ ರೀತಿ ಕೊಡಲಾಯಿತು. ಈ ಸಾರಿ ಸಹ 58 ಸಾವಿರ ರೂಪಾಯಿ ಒಂದೇ ಹುಬ್ಬಳ್ಳಿ ಗ್ರಾಮದ ಮುನಿಸಿಪಲ್ ಏರಿಯಾದಲ್ಲಿ ಗೊಬ್ಬರ ಸಬ್ಸಿಡಿ ಕೊಡುವ ಬಗ್ಗೆ ಶಿಫಾರಸ್ಸು ಬಂದಿತ್ತು ಅದು ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಬಂದಿತ್ತು ಆಗಲೂ ಸಹ ಈ ವಿಷಯದ ಬಗ್ಗೆ ಹೇಳಲಾಗಿದೆ. ಇಂಥಾದ್ದೆಲ್ಲಾ ಬಡಜನರಿಗೆ ಉಪಯೋಗವಾಗುವಂತೆ ತಕ್ಕ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕೆಲವು ಕೋರ್ಟುಗಳಲ್ಲಿ ಸಾಕಾದಷ್ಟು ಕೆಲಸ ಇರುವುದಿಲ್ಲ. ಇಲ್ಲದೇ ಇದ್ದರೂ ಸಿವಿಲ್ ಜಡ್ಜ್‌ಸ್ ಸಂಖ್ಯೆ ಮಾತ್ರ ಹೆಚ್ಚಾಗಿ ಇರುತ್ತದೆ. ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ನೋಡಬೇಕು, ಅವರು ದಿನದಲ್ಲಿ ಒಂದು ತಾಸು ಒಂದುವರೆ ತಾಸು ಬಂದು ಕೋರ್ಟಿನಲ್ಲಿ ಕೊಡುತ್ತಾ ಇರುತ್ತಾರೆ. ಇದ್ದ ಕೆಲಸವೂ ಸರಿಯಾಗಿ ಆಗುವುದಿಲ್ಲ. ಇದರ ಬಗ್ಗೆ ಹೈಕೋರ್ಟಿನವರಿಗೆ ತಿಳಿಸಿ ಸರಕಾರದವರು ಕೇಸುಗಳ ಡಿಸ್‌ಪೋಸಲ್ ಯಾವ ರೀತಿ ಆಗುತ್ತಿದೆ ಎಲ್ಲಿ ಹೆಚ್ಚು ಜಡ್ಜಿಗಳ ಅವಶ್ಯಕತೆ ಇದೆ ಎಲ್ಲಿ ಅವಶ್ಯಕತೆ ಇಲ್ಲ ಎಂಬುದನ್ನು ನೋಡಿ ಎಲ್ಲಿಗೆ ಬೇಕೋ ಅಲ್ಲಿಗೆ ಹೆಚ್ಚಿನ ಹೊಸ ಹ್ಯಾಂಡ್ಸ್‌ನ್ನು ತೆಗೆದುಕೊಳ್ಳದೇ ಇದ್ದ ಹ್ಯಾಂಡ್ಸ್‌ನ್ನೇ ಉಪಯೋಗಿಸಿದರೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ಹೇಳುತ್ತೇನೆ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಈ ಪರಿಸ್ಥಿತಿ ಇವೆ, ಬಾಕಿ ಕಡೆಯೂ ಹೀಗೆಯೇ ಇರಬಹುದೇನೋ, ಇದನ್ನು ಪರಿಶೀಲನೆ ಮಾಡಿದರೆ ಈಗ ಸರಕಾರದವರಿಗೆ ಹಣದ ಅಡಚಣೆ ಇರುವುದರಿಂದ ಸೇವಿಂಗ್ಸ್ ಸಹಿತ ಆಗುತ್ತದೆ. ಆದ್ದರಿಂದ ಸರಕಾರದವರು ಇವನ್ನು ಪರಿಶೀಲನೆ ಮಾಡಿ ಎಲ್ಲಿ ಶಕ್ಯವಿದೆಯೋ ಅಲ್ಲಿ ಸೇವಿಂಗ್ಸ್ ಮಾಡುವುದು ಅಗತ್ಯ, ಅದನ್ನು ಮಾಡುತ್ತಾರೆ ಎಂದು ನಂಬುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri B. P. KADAM (Karwar).—Mr. Speaker, Sir, in the Motion of Thanks we are discussing the Governor's Address and the policy statements. At the outset I would just like to dilate upon certain motions, because some honourable members casually asked us as to why we did not stage a walk-out when the Kannada speech was being delivered.

Mr. SPEAKER.—It was never asked on the floor of the House. If it was asked outside, it need not be brought it here.

Sri B. P. KADAM.—We the members of the Samithi coming from the Marathi border area have no ill-will against the Kannada language. We have every respect and live for the Kannada language. And I look at it as a language of my brothers and respect it as our own. * * * *

* ** Expunged as ordered by the Chair

Sri B. P. KADAM.—The Chair may delete it.

Mr. SPEAKER.—I will delete it.

Sri B. P. KADAM.—The Hon'ble Member who moved the Motion of Thanks said that this country has really very fine to have a Constitution of Democratic socialism and that the theory of Socialism had further been expanded in the Congress sessions at Avadi and Bubhaneshwar. Then, he raised a frontal attack against Soviet Russia stating that Soviet Russia, in spite of its progress, is a Communist Dictatorship. The Hon'ble Member is not here. I feel he would have done well to visit Soviet Russia and understood it. People there have liberty to do everything, to have everything but they have no liberty to exploit others. That is the only one thing denied to them. That is why Soviet Russia could have all-round progress. In spite of Western Imperialists, this is the first country which has been able to send its own Sputnik to the Moon. I will not dilate upon that.

I will dilate a bit upon democratic socialism achieved in this country. We have been free for the last fifteen to seventeen years. What is the gain of this democratic socialism? With all that this is the only country whose human beings are fighting with dogs for a morsel of food. We know that just outside the compound of rich people's homes, in the City, there are children and elderly human beings waiting with dogs for thrown out leaves. While coming from the railway station, we **** Expunged as ordered by the Chair.
see dogs fighting with children for a morsal of food. This is the picture we see even after sixteen years of democratic socialism. What have we done, except having a Constitution with a pre-amble preaching equality, democratic justice and Socialism? There is nothing further than that.

Our *per capita* income has been shown to have risen a bit, but the standard of living has fallen. India, with all that is the country with the lowest standard of living in the entire world. India, with all its boasts, is the lowest *per capita* milk consuming country in the world. India is selling sugar to the foreigners at 51 nP. per kilo and selling in the internal market at Re. 1 and 30 nP. India is the lowest sugar consuming country in the world. In India the *per capita* consumption of sugar is three pounds, whereas, the *per capita* consumption of sugar in England is 40 lbs. In the villages, what is the sugar distribution per head? Hardly it is 00 grams or so. We have known how women with their babies stand in queues for getting there necessities. What is the democratic socialism achieved here which the Hon'ble Mover of the Motion of Thanks was expanding? We should first better realise the conditions here.

What is the rural indebtedness existing at present? Before the British quit India or at the time of their quitting this country's *per capita* rural indebtedness per family was Rs. 70. Today, the Government report says it is about Rs. 200.

Sir, taxation is the highest in this country. With the advent of the first Five-Year Plan, when all-round failure was there, our leaders said that we are having a Second Five-Year Plan. When the Second Five-Year Plan failed to give us food and we are still begging all over the

world with a begging bowl, our leaders said that we would have a Third Five-Year Plan. In the middle of the Third Five-Year Plan, we are being told that we are going to have the Fourth Five-Year Plan. Thus, these Plans will go on-to the Vth plan.

Sri D. DEVARAJ URS.—I should like to know whether Russia is not importing foodstuffs.

Sri B. P. KADAM.—I know Russia has imported only this year. But the Hon'ble Minister who once hailed Russia should know under what circumstance they had to import. Mr. Krushchev has given answer to his critics; only on account of atmospheric conditions the wheat grown there was spoiled by frost and so they had to import.

If we assess the progress made under the Third Five Year Plan, as stated in the report there is hardly any progress in agriculture sector. In all the sectors though a lot of money has been spent, the expected results have not been achieved. Under the Third Five Year Plan, it was necessary to raise the taxation measure to the tune of about 1,700 crores. But now the Government succeeded to raise the taxation measure to 2,500 crores. This is the only sphere wherein we are making progress. The prices are raising and the Governor has failed to make a reference to it. The rich are getting richer and the money that has been spent under the Five Year Plans has benefitted only 20 per cent of the population and the remaining 80 per cent have been suffering. Even our Prime Minister Jawaharlal Nehru has expressed this view and he is deeply grieved at it. What is the *per capita* income? When Dr. Lohia quoted the figure as two and a half annas in the Lok Sabha, the Hon'ble Home Minister stated it was seven annas and the Prime Minister as twelve annas. Even the great leaders have not been able to reconcile themselves with the progress made. This is the fate of the democratic socialism and this is the fate of our democracy and the mover of Motion of thanks should note all these things.

Coming to the solution of the border problem I feel the Governor would have done well by demanding a speedy solution of the merger of the Border Marathi speaking areas in Maharashtra and Border Kannada speaking areas in Karnatak. In 1956 the Governor in his speech in the first December session of the Legislative Assembly after reorganisation, made a pointed reference to the effect that the Government was seriously considering the merger of the border Kannada areas of Kasargod, Adoni, Akkalkot, etc, in Karnatak. I was there in the Assembly and we stated that equally the border areas of Karwar, Haliyal, Supa, Belguam, etc. should be merged in Maharashtra on the same principle, *i.e.*, taking village Language and contiguity as an unit. Referring to that the Hon'ble Chief Minister Sri S. Nijalingappa stated that, that question was receiving his attention and he was in correspondence with the Governments concerned and he for one would not object to the first demand. Nearly seven years have elapsed and even after this period the Hon'ble Chief Minister has not been able to do anything. That itself shows how weak, and indecisive this Government is. Therefore I say that the Governor ought to have at least expressed his regret over this question.

(SRI B. P. KADAM)

Today, what is the condition of the people in the border areas? They are nothing but slaves. The report of the four-man committee has been furnished long ago but nothing has been done so far. There have been serious atrocities committed on the Marathi people in the border areas. I stated in 1956 and twice earlier in this session that one Narayan Kurdever who was carrying on "Kirtans" in Marathi on the Government prohibition policy and getting assistance was denied all facilities to do his job in Marathi. When he said that he could not speach Kannada and the people could not understand it, the Government told him to stop his "Kirtana" and it was stopped. I stated that a very important Marathi school in Karwar taluk at Kadi ban was being throttled. Very near the school permission has been given to open a saw mill to a big man and that is how the Government have throttled the running of the Marathi school. No opportunity is given for the employment of Marathi knowing people; all facilities have been denied to them. There has been no Marathi A.D.E.I. in Karwar District for the last 3½ years. All the circulars to Marathi schools are sent in Kannada. The people in those areas do not understand Kannada. The people from Supa Taluk represented to the District School Board that they required Marathi schools at Anshe and Nujji and the Tahsildar was requested to submit his report. He submitted that there was need to have Marathi schools there. Even though 16 months have elapsed, nothing has been done. Even the Hon'ble Education Minister is keenly interested in throttling the Marathi schools. He nominated the school Betterment Committee in the place of the former District School Board N. Kanara District. When the proposal was in the air, I gave a representation that in the border areas, the interest of the Marathi schools must be safeguarded and I gave a list of names and requested that at least some among them might be nominated on the committee. He has done nothing not even one is nominated. There is not a single person from Karwar, Supa and Haliyal on that Committee to protect Marathi interest From Supa there is none on the Committee. One person whose mother tongue is not Marathi has been nominated from Haliyal. The person nominated from Karwar is an enemy of Marathi and has been throttling the progress the Marathi language. That is why I say that we the people in the border areas speaking Marathi have been virtually treated as slaves in this State and by this Government. All these days we have agitated non-violently and in a very peaceful manner to get our areas merged in Maharashtra. Still we have not been able to achieve our object and a speedy solution is not forthcoming. If this sort of attitude continues, the people will be compelled to take to other means. We are not the people to submit ourselves to slavery. If the legitimate agitation carried on in a peaceful way is not respected, then other ways are open to them. I say with all respect and I am going to send a copy of my speech to the Hon'ble Home Minister of the Government of India.

MR. SPEAKER.—The Hon'ble Members' time is over.

Sri B. P. KADAM.—I may kindly be given two minutes more. So far no member from my side has spoken.

Mr. SPEAKER.—I can give more time provided the whip of the member mentions it. How can he think that he is the only person speaking from his side ? There are other members who want to speak. I have no objection to give him more time provided his whip is prepared to count the time allotted against his party. I am receiving slips rfom the party as well as from members. There must be some co-ordination. I will give time ; I have not refused but there must be some restraint on the part of members.

Sri B. P. KADAM.—In the Bhalki taluk, the Marathi people have been denied facilities in the Secondary English schools and the hon'ble Member coming from that area tried his very best to present his case for a new school. He approached the Education Minister not less than 50 times, sent nearly 100 telegrams to the Director, Secretary and Minister for Education and the Education Minister is fond of saying: 'the matter is being considered'. This is how the interests of the Marathi areas are being totally neglected by an unsympathetic Government and the people of the area are living in an atmosphere of sheer slavery.

Sir, the development of the border areas is being awfully neglected. Even thoug there is a Rural Communication scheme to have 50 miles road for each taluk since 1959 in Karwar, Supa and Haliyal, nothing has been done. In Karwar Taluk only 2½ miles road work has been taken up and in Supa and Haliyal, nothing has been done. The road from Sadashivagad to Londa is closed since 5 years. Not even a single work pertaining to minor and major irrigation has been taken up. Everywhere, we are negleted. The Finance Minister may turn round and say that the port is being developed. We are not concerned with the port; it is for somebody's benefit. I am mainly concerned with the rural development of the area. I say that the area is being neglected with a vengeance.

Sri B. D. JATTI (Minister for Finance).—That is the only language to which the hon'ble Member is accustomed. Irresponsible statements would not help.

Sri B. P. KADAM.—We are speaking with full facts and sencse of responsibility. What else can we do ?

Sri B. D. JATTI.—You can resign and get out.

Sri B. P. KADAM.—When the time comes shortly we will go to Maharashtra with our territories. We are not imbeciles.

Sri C. J. MUCKANNAPPA.—Sir, I rise to a point of order. When a Member is placing his grievances before the House, is it right on the part of the hon. Finance Minister to get into a temper and shout 'resign and go'. Who is the person to ask him to go. It is the Speaker. If a Member is not behaving properly, the Chair can call him to order and if he persists, he can direct him to leave the House. With all his experience, knowledge and wisdom, both as Minister here and Deputy

(SRI C. J. MUCKANNAPPA)

Minister in the Bombay State, it would be a sad thing indeed, if the Finance Minister were to lose himself so soon and order people to resign. Who is he and what is his status in this respect ..

MR. SPEAKER.—Points of order have to be brief. I understood the point.

Sri C. J. MUCKANNAPPA.—Sir, the Finance Minister has presented the budget in the morning and in the afternoon he has lost his temper. He should have patience enough to face the music.

Sri B. D. JATTI.—I am prepared to face the music. The point is that if the hon ble Member is not prepared to stay in the Mysore State, he has the liberty to go Maharashtra and live there.

Sri B. P. KADAM.—Is the Finance Minister right in asking me to resign and get out ? Who is he to direct me ? What is the offence that I have committed here ? I want an emphatic reply from the Chair just now.

Mr. SPEAKER.—Has the hon'ble Member any precedent to show that he can compel or direct the Chair to give a reply on a point of order on the spot ? A serious point of order has been raised and raised. with a great deal of emotion and temper. I want the temper to cool down. I will take time and give my considered ruling at the appropriate time. But the hon'ble Member cannot order me in the manner he is doing.

Sri B. P. KADAM.—Have I not get the right to seek the protection of the Chair when I am insulted and asked to get out by another Member. Who is a Minister ? Is it not a matter of privilege ?

Mr. SPEAKER.—If anybody is asking the Member to get out, I am here to protect him.

Sri B. P. KADAM.—I have raised a point which the same Governor referred to in his speech in 1956. It is a consistent and a relevant point but the hon'ble Finance Minister instead of bearing with me has lost his balance. I can only say that such an attitude will have serious repurcussions...

Sri B. D. JATTI.—We are accustomed to such threats. Let not the hon'ble Member repeat them.

Sri B. P. KADAM.—I have every right to present my viewpoint. But I cannot be insulted in this manner.

Mr. SPEAKER.—I cannot tolerate anybody being subjected to insults.

Sri B. P. KADAM.—Then let the Finance Minister apologise.

Mr. SPEAKER.—Members must not be very sensitive in a Debate. If Members use a strong language, they must be prepared to receive back in equally and even stronger language. After all, what is the meaning of 'Debate' ? The question has been raised whether the Finance Minister was right in saying 'resign and go' 'Resign' does not mean 'resign from the House'. He has no right to ask somebody else to resign.

Sri C. J. MUCKANNAPPA.—The Finance Minister definitely asked the Hon'ble Member, Sri Kadam, to resign from the House and go to Maharashtra.

MR. SPEAKER.—I am entitled to have a patient and respectful hearing. The hon'ble Member should not interrupt in this manner.

I was saying that if anybody said 'resign and go' it has not a reference to resignation from the House but that the Member should leave the State. It is not an order to leave the House. Who is the person who can send anybody outside the House? Even the executive, that is the Government have no such right. Even a Minister cannot pass such an order. Of course, under certain conditions I can ask a Member to leave the House, now that I am fortified with a sergeant-at-arms (*laughter*). I am trying to see that such a situation does not arise. Here when somebody is asked to resign, it means that it should be done voluntarily by the Member concerned. No one can force the Member to resign if he does not want to. Hence it only amounts to a suggestion to resign. Have not the Members of the Opposition asked the Members of the Treasury Benches to resign? Are they competent to force them to resign?

Did not some of the Members yesterday suggest that the earlier the Education Minister resigned, it was better? What kind of a language is that? I therefore, rule that there is no point of order.

4 00 P.M.

SRI B R. SUNTHANKAR (Belgaum City).—Sir, was it not a contemptuous remark from the Finance Minister?

MR. SPEAKER. That is something different from the point of order. Sri Sunthankar may please advise his friends that there is no point of order.

SRI C. J. MUCKANNAPPA.—Sir, why should another member be ask d to advise? The chair may advise u and not another member.

MR. SPEAKER.—He has got a right to advise at my instance and at my instance the member can also advise.

(*Laughter*).

SRI B. P. KADAM.—Sir, I leave the matter at that. The public at large will pass the verdict on the Minister for Finance. Even though I have no protection here, the truth will be realised elsewhere.

Sir, there was a measure to extend the tenure of land surcharge. I do not know what has happen to that. I heard some whispers that it has given a decent burial. If it is so, it is better. Government will do well to do away with this measure which was causing so much of harassment to the agriculturists.

[MR. DEPUTY SPEAKER in the Chair.]

MR. DEPUTY SPEAKER.—The hon'ble member may conclude now without going to a fresh point

SRI B. P. KADAM.—Yes Sir, I conclude.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೆ, ಈವರೆಗೂ ನಮ್ಮ ಸ್ನೇಹಿತರು ರಾಜ್ಯಪಾಲರ ಭಾಷಣದಲ್ಲಿದ್ದ ನ್ಯೂನತೆಗಳನ್ನೆತ್ತಿ ಆ ಬಗ್ಗೆ ಸೂಕ್ತ ಸಲಹೆಗಳನ್ನು ಇತ್ತಿದ್ದಾರೆ. ನಮ್ಮ ರಾಜ್ಯಪಾಲರು ಈ ಶಾಸನ ಸಭೆಗಳ ಸಂಯುಕ್ತಾಧಿವೇಶನಗಳನ್ನುದ್ದೇಶಿಸಿ ಮಾತನಾಡುವಾಗ ಮೊಟ್ಟಮೊದಲಿಗೆ ಕನ್ನಡದಲ್ಲಿ ಮಾತನಾಡಿದ್ದು ಇಡೀ ಕರ್ಣಾಟಕದ ಇತಿಹಾಸದಲ್ಲೇ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿದಂತಾಗಿದೆ. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಇದನ್ನು ಬಿಟ್ಟರೆ ಇನ್ನುಳಿದ ವಿಚಾರಗಳಲ್ಲಿ ಅವರ ಭಾಷಣ ತುಂಬಾ ನಿಸ್ಸಾರವಾಗಿವೆಯೆಂದು ಹೇಳುತ್ತೇನೆ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಏನೇನು ಕೆಲಸ ಕಾರ್ಯಗಳನ್ನು ಆಗುಗೊಳಿಸಿದೆಯೆಂದು ಹೇಳಿದ್ದಾರೋ ಅವುಗಳ ಪೂರ್ಣಮಾಹಿತಿಯನ್ನು ಮಾತ್ರ ತಿಳಿಸಿಲ್ಲ. ಇದರಿಂದ ಜನರಿಗೆ ಸರ್ಕಾರದಲ್ಲಿ ಒಂದು ಅಪನಂಬಿಕೆಯುಂಟಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ: ರಾಜ್ಯಪಾಲರ ಭಾಷಣವೊಂದು ಸಹಕಾರ ಸಂಘಗಳ ಒಂದು ವರದಿಯನ್ನೊಪ್ಪಿಸಿದಾಗ ಮಾಡತಕ್ಕ ಒಂದು ಭಾಷಣವೇನಿರುತ್ತದೆ ಅದರಂತೆ ಇದೂ ಕೂಡ ಇರುತ್ತದೆ. ಹೋದ ವರ್ಷ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆ ಚೀಣಿಯರು ಬಂಡೆಬ್ಬಿಸಿದ್ದುದನ್ನು ಸ್ಥಗಿತಗೊಳಿಸಲು ಒಂದು ರಾಷ್ಟ್ರೀಯ ರಕ್ಷಣಾ ನಿಧಿಯನ್ನು ಮಾಡಿ ಆ ಬಗ್ಗೆ ಇಲ್ಲಿಯವರೆಗೆ ಸಂಗ್ರಹಮಾಡಿರತಕ್ಕದ್ದು 1,97. 646 ಗ್ರಾಂ ಚಿನ್ನ ಮತ್ತು 83. 802 ಗ್ರಾಂ ಬೆಳ್ಳಿ, ಹಾಗೂ 331. 67 ಲಕ್ಷರೂಪಾಯಿಗಳಷ್ಟು ಹಣ ಒದಗಿಸಲಾಗಿದೆ ಎಂದು ಮತ್ತು ರಾಷ್ಟ್ರೀಯ ರಕ್ಷಣಾನಿಧಿಯ ಹಿತರಕ್ಷಣ ಸಮಿತಿಯು ಸಂಚಾಲಕರಿಗೆ ಸುಮಾರು 1. 73 ಲಕ್ಷರೂಪಾಯಿಗಳ ಮೌಲ್ಯದ ದಾನ ವಸ್ತುಗಳು ಕಳುಹಿಸಲ್ಪಟ್ಟಿವೆಯೆಂದೂ ಮತ್ತು ಇದೇ ಸಂದರ್ಭದಲ್ಲಿ ಏರ್ಪಡಿಸಿದ್ದ ರಕ್ಷಣಾ ನಿಧಿಯ ರ್‍ಯಾಫಲಿನಿಂದ 10. 81 ಲಕ್ಷರೂಪಾಯಿಗಳು ಉಳಿದು ಇನ್ನು 80,000ರೂಪಾಯಿಗಳನ್ನು ಚೀಟಿ ಗೆದ್ದವರಿಗೆ ಬಹುಮಾನವಾಗಿ ಕೊಡಲು ಮೀಸಲಾಗಿಟ್ಟಿದೆ ಎಂದು ತಿಳಿಸಲಾಗಿದೆ. ಆದರೆ ಈ ವಿಚಾರದಲ್ಲಿ ಕೂಡ ಸವಿಸ್ತಾರವಾದ ಮಾಹಿತಿಯನ್ನು ಕೊಟ್ಟಿಲ್ಲ ಆದರೆ ಆ ನೇಫಾ ಗಡಿಯಲ್ಲಿ ನಮ್ಮವರು ಎಷ್ಟು ಜನ ಇದ್ದಾರೆಂಬುದನ್ನು ತಿಳಿಸಿಲ್ಲ. ಅಲ್ಲಿಗೆ ಹೋದವರ ವಿಚಾರವೇನೆಂಬುದನ್ನೂ ತಿಳಿಸದೆ ಇವರು ಅದನ್ನು ಮುಚ್ಚಿಟ್ಟಿದ್ದಾರೆ. ಈ ದಿವಸ ನೇಫಾ ಗಡಿಗೆ ಹೋಗಿ ಹಿಂದಿರುಗದ ಸಂಸಾರದಲ್ಲಿರತಕ್ಕ ಹೆಣ್ಣುಮಕ್ಕಳ ಕುಟುಂಬಕ್ಕೆ ಏನು ರಕ್ಷಣೆ ಕೊಟ್ಟಿದಾರೆ, ಅವರ ಕುಟುಂಬದ ಯೋಗಕ್ಷೇಮಕ್ಕೆ ಏನು ವ್ಯವಸ್ಥೆಮಾಡಿದ್ದಾರೆಂಬುದನ್ನು ತಿಳಿಸಿಲ್ಲ ಮುಂದೆ ಉತ್ತರಕೊಡುವಾಗಲಾದರೂ ಮಾನ್ಯ ಮಂತ್ರಿಗಳು ಈ ಬಗ್ಗೆ ಸವಿಸ್ತಾರವಾದ ಉತ್ತರವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯೋಜನೆಗಳ ವಿಚಾರಕ್ಕೆ ಬಂದರೆ: ಮೂರನೆಯ ಪಂಚವಾರ್ಷಿಕ ಯೋಜನೆಯಬಗ್ಗೆ ಇಡಲಾಗಿದ್ದ 250 ಕೋಟಿ ರೂಪಾಯಿಗಳಲ್ಲಿ ಶೇಕಡ 44 ರಷ್ಟು ಹಣವನ್ನು ಖರ್ಚುಮಾಡಿ ಅಷ್ಟು ಕೆಲಸವನ್ನು ಕಾರ್ಯಗತ ಮಾಡಲಾಗಿದೆಯೆಂದು ಹೇಳಿದ್ದಾರೆ ಆದರೆ ಈ ಯೋಜನೆಗಳಲ್ಲಿ ಅಪವ್ಯಯವಾದ ಹಣದಬಗ್ಗೆ ಏನೂ ಹೇಳಿಲ್ಲ. ಶರಾವತಿ ಯೋಜನೆಯಲ್ಲಿ ಬೇಕಾದಷ್ಟು ಹಣ ಅಪವ್ಯಯವಾಗಿದೆ. ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿಯನ್ನು ಬರಮಾಡಿಕೊಂಡು ಅಷ್ಟೇ ಸಾಲದೆ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳನ್ನೇ ಬರುಮಾಡಿಕೊಂಡು ಅಲ್ಲಿ ಹಣವೇನೂ ಅಪವ್ಯಯವಾಗಿಲ್ಲವೆಂದು ಅವರ ಬಾಯಿಯಿಂದ ಹೇಳಿಸಿಬಿಟ್ಟರು. ಆದರೆ ಇದಕ್ಕೆ ಹಿಂದೆ ಶ್ರೀ ನಿಜಲಿಂಗಪ್ಪನವರೇ ಒಂದಾವರ್ತಿ ಈ ದಿವಸ ಒಂದು ವೈಟ್‌ಪೇಪರನ್ನು ಇಷ್ಯೂಮಾಡಿದಂತೆ, ನನಗೆ ಆ ಶರಾವತಿಯ ಫೈಲುಗಳೆಲ್ಲಾ ಬಂದಿವೆ. ಅವರಲ್ಲಿಸ್ವಲ್ಪ ಹಣ ಅಪವ್ಯಯವಾಗಿದ್ದರೂ ಆಗಿರಬಹುದು ಅದನ್ನೆಲ್ಲಾ ಪರಿಷ್ಕಾರಮಾಡಿ ಈ ಸಭೆಗೆ ಒಂದು ಸವಿಸ್ತಾರ ಹೇಳಿಕೆಯನ್ನು ಕೊಡುವುದಾಗಿ ತಿಳಿಸಿದ್ದರು. ಆದರೆ ಈ ದಿವಸ ಅದನ್ನೆಲ್ಲಾ ಮುಚ್ಚಿಹಾಕಲು ಶ್ರೀ ರಾವ್ ಅವರ ಬಾಯಿಯಲ್ಲಿ ಅಲ್ಲಿ ಹಣವೇನೂ ಅಪವ್ಯಯವಾಗಿಲ್ಲವೆಂದು ಹೇಳಿಸಿಬಿಟ್ಟಿದ್ದಾರೆ. ಆದರೆ ಈಗ ಜನರು ಸರ್ಕಾರದಬಗ್ಗೆ ಬಹಳ ಎಚ್ಚೆತ್ತಿದ್ದಾರೆ. ಸರ್ಕಾರದವರು ಈ ಯೋಜನೆಗಳ ಬಗ್ಗೆ ಆಗಿಂದಾಗ್ಗೆ ಏನೇನು ಕಾರ್ಯಕ್ರಮ ಕೈಗೊಂಡಿದ್ದಾರೆಂಬ ಬಗ್ಗೆ ತಿಳಿದುಕೊಳ್ಳಲು ಅಸೆಂಬ್ಲಿಯ ಸದಸ್ಯರಿಂದ ಆಗಿಂದಾಗ್ಗೆ ಪ್ರಶ್ನೆಗಳನ್ನು ಹಾಕಿಸುತ್ತಲೇ ಇರುತ್ತಾರೆ. ಅದ್ದರಿಂದ ಇನ್ನಾದರೂ ಇಂಥ ಮುಚ್ಚುಮರೆಮಾಡತಕ್ಕ ವಿಚಾರಕ್ಕೆ ಸರ್ಕಾರದವರು ಗಮನ ಕೊಡದೆ ತಪ್ಪಿತಸ್ಥರನ್ನು ಹಿಡಿದು ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ ಆಗತಕ್ಕ ಕೆಲಸಕ್ಕೆ ಅಡಚಣೆಯುಂಟಾಗದ ಹಾಗೆ ಸರ್ಕಾರದವರು ಮುತುವರ್ಜಿ ವಹಿಸಬೇಕೆಂದು ಹೇಳುತ್ತೇನೆ. ಈವರೆಗೂ ಈ ತುರ್ತ ಪರಿಸ್ಥಿತಿಯೆಂಬುದು ಚೀಣಾ ಒಂದಕ್ಕೆ ಅನ್ವಯಿಸುತ್ತಿದ್ದುದು ಇನ್ನು ಮುಂದೆ ಪಾಕಿಸ್ತಾನಕ್ಕೂ ಅನ್ವಯವಾಗುತ್ತದೆ. ಅದನ್ನೂ ಕೂಡ ನಾವು ಸಗಿತಗೊಳಿಸಬೇಕು. ಅದಕ್ಕೂ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ. ಇನ್ನು ನಮ್ಮ ನೆರೆಹೊರೆ ರಾಜ್ಯಗಳಾದ ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ನೀರಾವರಿ ಕಾಂಗಾರಿಗಳು ಬಹಳ ಮುಂದುವರೆದಿವೆ. ಆದರೆ ನಮ್ಮ ರಾಜ್ಯದಲ್ಲೂ ಸಾಕಷ್ಟು ನೈಸರ್ಗಿಕ ಸಂಪತ್ತಿದೆ. ಇಲ್ಲಿಯೂ ಅನೇಕ ನದಿಗಳೂ ಹೊಳೆಗಳೂ ಹರಿಯುತ್ತಿವೆ.

ಇವುಗಳಿಗೆ ಅಲ್ಲಲ್ಲೇ ಕಟ್ಟೆಗಳನ್ನು ಕಟ್ಟಿ ಜನರಿಗೆ ವ್ಯವಸಾಯಕ್ಕೆ ಸೌಲಭ್ಯಗಳನ್ನೊದಗಿಸದೆ ಇರುವುದು ನಮ್ಮ ದುರ್ದೈವ. ಆದರೆ ಇಲ್ಲಿಯವರೆಗೂ ಆ ತುಂಗಭದ್ರ, ಭದ್ರ ಜಲಾಶಯಗಳಲ್ಲಿ ಎಷ್ಟು ನೀರನ್ನು ಈಗಾಗಲೇ ಶೇಖರಣೆಮಾಡಲಾಗಿದೆಯೋ ಅಷ್ಟನ್ನು ಉಪಯೋಗಿಸಿಕೊಳ್ಳುವದಕ್ಕೆ ಅವಕಾಶ ಕಲ್ಪಿಸಿ ಕೊಡಲು ನಮ್ಮ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಇದು ತುಂಬಾ ವಿಷಾದಕರವಾದ ಸಂಗತಿ. ಹೀಗೆ ನಾವು ಹಿಡಿಟ್ಟುಕೊಂಡಿರತಕ್ಕ ನೀರನ್ನೂ ಉಪಯೋಗಮಾಡಲು ಅವಕಾಶವಿಲ್ಲವೇನ್ನುವುದಾದರೆ ಇನ್ನು ನಮಗೆ ಮಳೆಯಾದರೂ ಏತಕ್ಕೆ ಬರಬೇಕು ? ಈ ದಿವಸ ರೈತನಿಗೇನು ಉಪಯೋಗವಾದಂತಾಯಿತು ? ಆದುದರಿಂದ ಇಲ್ಲಿ ಶೇಖರಿಸಿಟ್ಟಿರತಕ್ಕ ನೀರನ್ನು ಉಪಯೋಗಮಾಡಲು ಮೊದಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗೃಹರಕ್ಷಣಾ ದಳಗಳ ಬಗ್ಗೆ ಹೇಳಿದ್ದಾರೆ : ಎನ್. ಸಿ. ಸಿ. ವಿಚಾರವಾಗಿ ಹೇಳಿದ್ದಾರೆ. ಈ ಮೊದಲು ಈ ಗೃಹರಕ್ಷಣಾ ದಳಗಳು ಮುಂಬೈರಾಜ್ಯದಲ್ಲಿ ಚಲಾವಣೆಯಲ್ಲಿದ್ದವು. ಈಗ ಇವುಗಳನ್ನು ರಾಜ್ಯದಲ್ಲೆಲ್ಲಾ ಹರಡಬೇಕೆಂಬ ಉದ್ದೇಶದಿಂದ ಈ ಬಗ್ಗೆ ಒಬ್ಬ ಡೆಪ್ಯುಟಿ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ಲರ ಹುದ್ದೆಯ ಅಧಿಕಾರಿಯೊಬ್ಬರು ಕಮಾಂಡೆಂಟ್ ಜನರಲ್‌ರಾಗಿ ನಿಯುಕ್ತರಾಗಿದ್ದಾರೆಂದು ಹೇಳಿದ್ದಾರೆ. ನನಗೆ ಗೊತ್ತಿರುವಹಾಗೆ ಈಗ ಲಕ್ಷ್ಮೇಶ್ವರದಲ್ಲಿ ಒಂದು ಯೂನಿಟ್ಟಿದೆ. ನಾನು ಅದರ ಅಕ್ವಿಸಿಷೀನ್ ಬಗ್ಗೆ ಅವರಿಗೆ ಒಂದು ಪತ್ರ ಬರೆದಿದ್ದೆ ಅದಕ್ಕೆ ಅವರಿಂದ ನನಗೆ ಇನ್ನೂ ಉತ್ತರ ಬಂದಿಲ್ಲ. ಇಂಥ ಯೂನಿಟ್ಟುಗಳನ್ನು ತೆರೆದರೆಷ್ಟು, ಬಿಟ್ಟರೆಷ್ಟು ? ಇಂಥ ಗೃಹರಕ್ಷಣಾ ದಳಗಳನ್ನು ಸ್ಥಾಪಿಸಿ ಸರ್ಕಾರದವರು ಸಾಧಿಸತಕ್ಕದ್ದಾದರೂ ಏನೆಂದು ಕೇಳುತ್ತೇನೆ ? ಇದಕ್ಕೆ ನೇಮಕವಾಗಿರತಕ್ಕ ಅಧಿಕಾರಿಗಳನ್ನು ಯಾವ ಅಧಾರದ ಮೇಲೆ ನೇಮಕ ಮಾಡಲಾಯಿತು, ಅದೇನು ಪಿ. ಎಸ್. ಸಿ. ಅಧಾರದ ಮೇಲೋ ಅಥವಾ ಸರ್ಕಾರಕ್ಕೆ ಬೇಕಾಗಿದ್ದವರೊಬ್ಬರನ್ನು ನೇಮಿಸಲಾಯಿತೋ ಅದನ್ನು ಇಲ್ಲಿ ತಿಳಿಸಿಲ್ಲ. ಅವರ ಮನಸ್ಸಿಗೆ ಬಂದವರೊಬ್ಬರನ್ನು ನೇಮಿಸಿದ್ದಾರೆಂದು ನಾನು ಹೇಳಬಯಸುತ್ತೇನೆ. ಈ ಗೃಹರಕ್ಷಣಾ ದಳಗಳಿಗೆ ಟ್ರೈನಿಂಗ್ ಬೇಕು. ಆದರೆ ಇಲ್ಲಿಯತನಕ ಇದ್ದ ದಳಗಳು ಮೊನ್ನೆ ಧಾರ್ವಾಡ ಜಿಲ್ಲೆಯ ಅಣ್ಣಾವರ ಜನರನ್ನು ಸುಟ್ಟು ಹಾಕಿದಾಗ, ನಿಡುವಾಣಿಯಲ್ಲಿ ಹರಿಜನರನ್ನು ಸುಟ್ಟುಹಾಕಿದಾಗ, ಬಾಲ್ಕಿಯಲ್ಲಿ ಪೋಲೀಸ್ ಪಾಟೀಲರು 4 ಜನ ಹರಿಜನರನ್ನು ಕಂಬಕ್ಕೆ ಕಟ್ಟಿ ಹೊಡೆದು ಸಾಯಿಸಿದ್ದನ್ನು ಮತ್ತು ರಾಯಚೂರು ಜಿಲ್ಲೆಯಲ್ಲಿ ಇಡಪನೂರು ಗ್ರಾಮದಲ್ಲಿ 20 ಜನರನ್ನು ಹಿಡಿದು ಜೀವಸಹಿತ ಸುಟ್ಟ ವಿಚಾರದಲ್ಲಿ ಈ ಗೃಹರಕ್ಷಣಾ ದಳವವರೇನು ಮಾಡಿದರು ? ಆಗ ಎನ್. ಸಿ. ಸಿ. ಪೋಲೀಸ್ ಪಡೆ ಏನುಮಾಡಿತು, ಅವೆಲ್ಲಿತ್ತು ಎಂಬುದೇ ಗೊತ್ತಾಗಲಿಲ್ಲ. ಆ ವಿಷಯದಲ್ಲಿ ರಾಜ್ಯದಲ್ಲೆಲ್ಲಾ ವಿಶೇಷ ಕಳವಳವುಂಟಾಯಿತು. ಜನರು ಯಾವರೀತಿ ಜೀವರಕ್ಷಣೆ ಮಾಡಿಕೊಳ್ಳಬೇಕು. ಇಂತಹದು ಅಲ್ಲಿ ನಡೆಯುತಿರುತ್ತದೆ ಇದರಿಂದ ಪೋಲೀಸರು ಎಷ್ಟರಮಟ್ಟಿಗೆ ದಕ್ಷತೆಯಿಂದ ಅಲ್ಲಿ ಕೆಲಸಮಾಡುತ್ತಾರೆ ಎಂಬುದು ಗೊತ್ತಾಗುತ್ತದೆ ಅವರು ದಕ್ಷತೆವಹಿಸಿ ಅವರು ಕೆಲಸಮಾಡಬೇಕಾಗಿತ್ತು.

ಇನ್ನು ಪ್ರೊಹಿಬಿಷನ್ ಬಗ್ಗೆ ರಾಜ್ಯಪಾಲರು ಸರಿಯಾದಂಥ ವರದಿಯನ್ನು ಕೊಟ್ಟಿಲ್ಲ ; ಅದರಿಂದ ಮನಸ್ಸಿಗೆ ತುಂಬಾ ಅಸಮಾಧಾನವಾಯಿತು ಎಂಬುದಾಗಿ ಕೆಲವರು ಹೇಳಿದುದನ್ನೂ ನಾನೂ ಅನುಮೋದಿಸುತ್ತೇನೆ. ಈಗ ಒಂದು ಉದಾಹರಣೆಯನ್ನು ಹೇಳುತ್ತೇನೆ. ಸಾರಾಯಿ ಮಾಡುತ್ತಿದ್ದಂಥ ನೂರಾರು ಜನರನ್ನು ಕರೆದು ಅವರನ್ನು ವಿಚಾರ ಮಾಡಿದರೆ ನಾವು ಒಂದು ದಿವಸಕ್ಕೆ 4 ಗ್ಯಾಲನ್ ಸಾರಾಯಿ ತಯಾರುಮಾಡಿದರೆ 300 ರೂಪಾಯಿಗಳನ್ನು ಪೋಲೀಸಿನವರಿಗೆ ಲಂಚಕೊಡಬೇಕು ಎಂದು ಹೇಳುತ್ತಾರೆ. ಹೀಗೆ 150 ಮಂದಿಗಳ ಹತ್ತಿರ ಡಿಮ್ಯಾಂಡ್ ಮಾಡಿದರೆ ಆ ಕಸುಬಿನಲ್ಲಿ ತೊಡಗಿರುವವರು ಯಾವರೀತಿ ಜೀವಿಸಬೇಕು ? ಇದನ್ನು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಓದಿರಬಹುದು. ಅವರು ಮಾಮೂಲು ಕೊಡಬೇಕೆಂದು ಬಂದು ಕೇಳುತ್ತಾರೆ ಅವರು ಬಂದಾಗಲೆಲ್ಲಾ ಅದನ್ನು ತಂಸಿ ಕುಡಿದೇ ಕುಡಿಯುತ್ತಾರೆ. ಒಬ್ಬಾತನಿಗೆ ಭಾರತ್‌ಮಿಲ್‌ನಲ್ಲಿ ಕೇವಲ 12 ಆಣೆ ದಿನಕೂಲಿ ಬರುತ್ತಿರಲಿಲ್ಲ. ಅವನನ್ನು ಎರಡುವರ್ಷಗಳಹಿಂದೆಯೇ ರಿಟ್ರೆಂಚ್ ಮಾಡಿದ್ದಕ್ಕೆ, ಹುಬ್ಬಳ್ಳಿಯಲ್ಲಿ ಪುನಃ ಬಟ್ಟಿಸಾರಾಯಿಯನ್ನು ತಯಾರುಮಾಡುತ್ತಾ ಈಗ ನಾಲ್ಕೈದುಸಾವಿರ ರೂಪಾಯಿಗಳ ಆಸ್ತಿವಂತನಾಗಿ 2½ ಲಕ್ಷ ರೂಪಾಯಿಗಳ ಬೆಲೆಬಾಳುವಂಥ ಜಮೀನು ಸಾಗುವಳಿಗನ್ನುಕೂಲವಾದ 5-6 ಕೆರೆಗಳನ್ನು ಇಟ್ಟುಕೊಂಡಿರತಕ್ಕ ಪರಿಸ್ಥಿತಿ ಅವನಿಗೆ ಉಂಟಾಗಿದೆ, ಪೋಲೀಸರೇ ನಮ್ಮ ಹಿಂದೆ ಕೆಲಸ ಮಾಡುತಿದ್ದಾರೆಂದು ಹೇಳುತ್ತಿದ್ದಾರೆ ಇಂಥಾದ್ದನ್ನು ಹೋಗಲಾಡಿಸುವುದಕ್ಕೆ ಈ ಸರ್ಕಾರ ಏನು ಕ್ರಮವನ್ನು ತಗೆದುಕೊಂಡಿದೆ ? ಗೃಹರಕ್ಷಣ ದಳ ಬೇಕೆಂದು ಹೇಳುತ್ತಾರೆ, ಪ್ರೊಹಿಬಿಷನ್ ಸಂಬಂಧದಲ್ಲಿ ಎಷ್ಟು ಮಂದಿಯನ್ನು ಹಿಡಿಯುವುದಕ್ಕೆ ಅವರು ಸಹಾಯ ಮಾಡಿದ್ದಾರೆ ? ಎನ್.ಸಿ.ಸಿ. ಪಡೆಯವರು ಏನು ದಕ್ಷತೆ ವಹಿಸಿದ್ದಾರೆಂಬ ವಿಷಯವನ್ನು ಹೇಳುತ್ತೇನೆ. ಜನರಿಗೆ ಇವತ್ತಿನ ದಿವಸ ಪೋಲೀಸ್ ರಕ್ಷಣೆ ಬೇಕಾಗಿದೆ ; ಅದು ದೊರೆಯುವಂತೆಯೂ, ಪೋಲೀಸರು ದಕ್ಷತೆಯಿಂದ ಕೆಲಸ ಮಾಡುವಂತೆಯೂ ಸರ್ಕಾರದವರು ಅದಷ್ಟುಮಟ್ಟಿಗೆ ನಿಗಾವಹಿಸಬೇಕು.

(ಶ್ರೀ ಸಿದ್ದಯ್ಯ ಕಾಶೀಮಠ)

ಇನ್ನು ಗ್ರಾಮಪಂಚಾಯಿತಿಗೆ ಹೆಚ್ಚಿನ ಅಧಿಕಾರ ಕೊಡುವ ವಿಷಯ. ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ವರದಿಯ ಪ್ರಕಾರ ವ್ಯವಸ್ಥೆ ಮಾಡಬೇಕೆಂಬ ಉದ್ದೇಶವನ್ನು ಹೊಂದಿದ್ದಾರೆ. ಅದು, ಒಳ್ಳೆಯದು. ಅದು ಮೊದಲು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಅನಂತರ ಜಾರಿಗೆ ಬರಬೇಕು. ನನ್ನ ಮಾನ್ಯ ಸ್ನೇಹಿತರೂ, ವಿರೋಧಪಕ್ಷದ ನಾಯಕರೂ ಆಗಿರುವ ಶ್ರೀಮಾನ್ ಶಿವಪ್ಪನವರು ತಾಲ್ಲೂಕ್ ಬೋರ್ಡ್, ಗ್ರಾಮಪಂಚಾಯಿತಿ ಚುನಾವಣೆಗಳು ಜಾಗ್ರತೆಯಾಗಿ ಆಗಬೇಕೆಂದು ಹೇಳಿದುದನ್ನು ನಾನು ಸಮರ್ಥಿಸುತ್ತೇನೆ. ಈಗ ಚುನಾವಣೆ ಮಾಡದೇಹೋದರೆ ತುಂಬ ಹಣ ಅಪವ್ಯಯವಾಗುತ್ತದೆ. ಅದಕ್ಕಾಗಿ ಜಾಗ್ರತೆ ಚುನಾವಣೆ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಅದರ ಬಗ್ಗೆ ರೂಲ್ಸ್‌ಅನ್ನು ಮಾಡಬೇಕಾದರೂ ಒಂದೆರಡು ವರ್ಷಗಳು ಬೇಕಾಗುತ್ತವೆ. ಹಿಂದಿನಸಾರಿಯೂ ಇವುಗಳ ಚುನಾವಣೆ ಜಾಗ್ರತೆ ಮಾಡಬೇಕೆಂದು ಕೇಳಿಕೊಂಡರೂ ಇದುವರೆಗೆ ಮಾಡಲಿಲ್ಲ. ಇದನ್ನು ವಿಳಂಬಮಾಡದೆ ಗ್ರಾಮಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್ ಚುನಾವಣೆಗಳನ್ನು ಆದಷ್ಟು ಜಾಗ್ರತೆ ನಡೆಸಬೇಕು. ಇದು ಕಾರ್ಯಗತವಾದನಂತರ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ವರದಿಯನ್ನು ಅಂಗೀಕರಿಸಿ ಅದರ ಪ್ರಕಾರ ರಾಜ್ಯದಲ್ಲಿ ಕಾನೂನುಗಳನ್ನು ಜಾರಿಗೆ ತರುವುದು ಒಳ್ಳೆಯದು. ಅದಕ್ಕಾಗಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್‌ಗಳ ಚುನಾವಣೆಗಳನ್ನು ಮುಂದೂಡದೆ ಸಧ್ಯದ ಪರಿಸ್ಥಿತಿಯಲ್ಲಿಯೇ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಅಭಿವೃದ್ಧಿ ಬ್ಲಾಕುಗಳ ವಿಷಯ. ಇವುಗಳ ಅಭಿವೃದ್ಧಿಗಾಗಿ ಮೊದಲನೆಯ ಹಂತದಲ್ಲಿ 1.12 ಲಕ್ಷ, ಎರಡನೆಯ ಹಂತದಲ್ಲಿ 1 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದರಲ್ಲಿ ಎಸ್ಟಾಬ್ಲಿಷ್‌ಮೆಂಟಿಗೆ 5-5 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಇನ್ನು ಮಿಕ್ಕ 50 ಸಾವಿರ ರೂಪಾಯಿಗಳನ್ನು ಅಭಿವೃದ್ಧಿ ಕೆಲಸಕಾರ್ಯಗಳಿಗಾಗಿ ಕೊಟ್ಟಿದ್ದಾರೆ. ಇದು ಬಹಳ ಕಡಮೆ. ಎರಡನೆಯ ಹಂತದಲ್ಲಿ ಎರಡು ಲಕ್ಷ ರೂಪಾಯಿಗಳನ್ನಾದರೂ ಕೊಟ್ಟು ಸಣ್ಣ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸಕ್ಕರೆ ವಿತರಣೆಯ ಬಗ್ಗೆ ಹೇಳುವುದಾದರೆ, ಬೊಂಬಾಯಿ ಕರ್ಣಾಟಕದಲ್ಲಿ ಅದನ್ನು ಸರಿಯಾಗಿ ಹಂಚುತ್ತಿಲ್ಲ. ಈ ಬಗ್ಗೆ ಮೇಲಿಂದ ಮೇಲೆ ಸರ್ಕಾರಕ್ಕೆ ವರದಿ ಮಾಡಿದ್ದರೂ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇದನ್ನು ಸರಿಯಾಗಿ ಹಂಚುತ್ತಿಲ್ಲ. ಇದಕ್ಕಾಗಿ ಸಬ್‌ಆಫೀಸರನ್ನೂ ನೇಮಿಸಿಲ್ಲ. ಅಲ್ಲಿರತಕ್ಕ ಸಿಬ್ಬಂದಿ ಬಹಳ ಕಡಮೆ ಇದೆ. ಆದರಿಂದ ಈ ಕೆಲಸಕ್ಕೆ ಅಲ್ಲಿ ತುಂಬಾ ತೊಂದರೆಯಾಗಿದೆ. ಸರಿಯಾದ ರೀತಿಯಲ್ಲಿ ಹಂಚಿದರೆ ಇರತಕ್ಕ ಸ್ಟಾಕು ಒಂದೆರಡು ತಿಂಗಳುಗಳವರೆಗೆ ಸಾಕಾಗುತ್ತದೆ. ಈರೀತಿ ಹಂಚದೇ ಇರುವುದರಿಂದ ಸಕ್ಕರೆ ಬೆಲೆ ಈಗ ಡಬ್ಬಲ್ ಆಗಿರುವ ಪರಿಸ್ಥಿತಿ ಬಂದಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಕ್ಕರೆ ವಿತರಣೆಯ ಬಗ್ಗೆ, ಸಹಕಾರ ಸಂಘಗಳ ಮೂಲಕ ಈ ಕಾರ್ಯವಾಗಬೇಕು ಎಂದು ಹೇಳಿದ್ದಾರೆ. ಆದರೆ ಇದುವರೆಗೆ ಎಷ್ಟು ಸಹಕಾರ ಸಂಘಗಳಿಗೆ ಹಂಚಿದ್ದಾರೆಂದು ನಾನು ಕೇಳುತ್ತೇನೆ. ಧಾರವಾಡದ ವಿಚಾರದಲ್ಲಿ ನಾನು ಹೇಳುವುದಾದರೆ ಅಲ್ಲಿ ಕೇವಲ ಖಾಸಗೀ ಜನಗಳಿಗೆ ಉತ್ತೇಜನ ಕೊಡುತ್ತಿದ್ದಾರೆಯೇ ಹೊರತು ಸಹಕಾರ ಸಂಘಗಳಿಗೆ ಕೊಡುತ್ತಾ ಇಲ್ಲ. ಆದ್ದರಿಂದ ಧಾರವಾಡದಲ್ಲಿಯೂ ಸಕ್ಕರೆ ವಿತರಣೆಯನ್ನು ಸಹಕಾರ ಸಂಘಗಳ ಮೂಲಕವೇ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆಗಳ ವಿಷಯ. ತುಂಗಭದ್ರಾ ನದಿ, ವರದಾ ನದಿ ಮತ್ತು ಮಲಪ್ರಭಾ ನದಿಗಳು ಸರಾಗವಾಗಿ ಹರಿಯುತ್ತಿದ್ದರೂ ಅದರ ಉಪಯೋಗ ಧಾರವಾಡ ಜಿಲ್ಲೆಗೆ ಆಗುತ್ತಾ ಇಲ್ಲ. ಈ ಮಲಪ್ರಭಾ ಯೋಜನೆಯಿಂದ ಕೇವಲ ಐದಾರು ತಾಲ್ಲೂಕುಗಳಿಗೆ ನೀರು ಸೌಕರ್ಯ ಉಂಟಾಗಬಹುದೆಂಬುದಾಗಿ ನನ್ನ ಅಭಿಪ್ರಾಯ. ಇದೆಲ್ಲಾ ಆಡಂಬರವೇ ಹೊರತು ಯಾವತರಹ ಕೆಲಸವೂ ಇದರಿಂದ ಆಗುವುದಿಲ್ಲ. 10 ವರ್ಷಗಳಾದರೂ ನೀರೇ ಸಿಕ್ಕುತ್ತಿಲ್ಲ. ಧಾರವಾಡ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳ ಮುಖಾಂತರ ನೀರಾವರಿ ಸೌಕರ್ಯವನ್ನು ಒದಗಿಸಿ ಕೊಟ್ಟರೆ ತುರ್ತುಪರಿಸ್ಥಿತಿಯಲ್ಲಿ ಅಭಾವ ಪ್ರದೇಶಗಳಲ್ಲಿರತಕ್ಕ ತೊಂದರೆಯನ್ನು ನೀಗಿಸುವುದಕ್ಕೆ ಅನುಕೂಲವಾಗುತ್ತದೆ. ನೀರಾವರಿ ಸೌಕರ್ಯಗಳನ್ನು ಉತ್ತೇಜನಕರವಾಗಿ ಮಾಡಿದರೆ ಇದರಿಂದ ರಾಜ್ಯದಲ್ಲಿ ಹೆಚ್ಚು ಅನುಕೂಲವಾಗುವುದು. ಸಾರ್ವಜನಿಕ ಸಮಾರಂಭಗಳಲ್ಲಿ ಬೇಕಾದಷ್ಟು ಬಾವಿಗಳನ್ನು ನಿರ್ಮಾಣ ಮಾಡುತ್ತೇವೆಂದು ಸರ್ಕಾರದವರು ಹೇಳುತ್ತಾರೆ. ಆದರೆ, ಎಲ್ಲಾ ಕಡೆಗಳಲ್ಲೂ ಬಾವಿಗಳ ನಿರ್ಮಾಣದ ಬಗ್ಗೆ ಯಾವ ಒಂದು ಅಂದಾಜನ್ನು ಇವರು ಹಾಕಿಕೊಂಡಿಲ್ಲ. ಬಾವಿಗಳ ಸಪ್ತಾಹ ಕಾರ್ಯಕ್ರಮವನ್ನು ಹಾಕಿಕೊಂಡಾಗ್ಗೆ ಬಾವಿಗಳಿಗಾಗಿ ಬಂದದ್ದು ಸುಮಾರು 230 ಅರ್ಜಿಗಳ ಪೈಕಿ ಕೇವಲ 40 ಅರ್ಜಿಗಳನ್ನು ಮಂಜೂರ್‌ಮಾಡಿ ಬಾವಿಗಳನ್ನು ಕೊಟ್ಟಿದ್ದಾಗೆ. ಮಿಕ್ಕ ಅರ್ಜಿಗಳೆಲ್ಲಾ ಅಸಿಸ್ಟೆಂಟ್ ಕಮಿಷನರ್ ಆಫೀಸಿನಲ್ಲಿಯೇ ಬಿದ್ದಿವೆ. ಆದ್ದರಿಂದ ಸರ್ಕಾರದವರು ಈ ಬಾವಿಗೆ ಹೆಚ್ಚು

ಹಣವನ್ನು ಒದಗಿಸಿ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿಗೆ ನೀರಾವರಿ ಸೌಲಭ್ಯವನ್ನು ಮಾಡಿಕೊಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಸ್ವಾಮಿ, ನಮ್ಮ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ಕೃತಜ್ಞತಾ ಸೂಚನೆಯ ಪ್ರಸ್ತಾಪವನ್ನು ಸ್ವಾಗತಿಸುತ್ತಾ, ಮೊದಲನೆಯದಾಗಿ ರಾಜ್ಯಪಾಲರು ಕನ್ನಡದಲ್ಲಿ ಭಾಷಣ ಮಾಡಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸಿ ಒಂದೆರಡು ಸಲಹೆಗಳನ್ನು ಹೇಳುತ್ತೇನೆ. ಆಹಾರಧಾನ್ಯಗಳನ್ನು ಹೆಚ್ಚು ಉತ್ಪತ್ತಿ ಮಾಡಬೇಕೆಂದು ಬಹಳ ಪ್ರಚಾರವೇನೋ ನಡೆಯುತ್ತಿದೆ. ಈ ಬಗ್ಗೆ ಸಾಕಷ್ಟು ಸರ್ಕಾರದವರು ಕಾರ್ಯಕ್ರಮವನ್ನು ಹಾಕಿದ್ದರೂ ಅವು ಯಶಸ್ವಿಯಾಗಿ ನಡೆಯುತ್ತಾ ಇಲ್ಲ. ಆಹಾರಧಾನ್ಯಗಳನ್ನು ರಾಜ್ಯದಲ್ಲಿ ಹೆಚ್ಚು ಉತ್ಪತ್ತಿ ಮಾಡುವುದಕ್ಕೂ ಸಾಧ್ಯವಾಗಿಲ್ಲ. ಈಗ ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ಹಾಸನದಲ್ಲಿ 6 ಸಾವಿರ ಕೆರೆಗಳಿವೆ. ರಾಜ್ಯದ ಎಲ್ಲೋ ಒಂದೊಂದು ತಾಲ್ಲೂಕಿಗೆ ಲಕ್ಷಾಂತರ ರೂಪಾಯಿಗಳನ್ನು ಈ ಬಾಬಿಗೆ ಕೊಡುತ್ತಿದ್ದೀರಿ ಎಂಬುದಾಗಿ ವರ್ತಮಾನ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಇಷ್ಟು ಕೆರೆಗಳಿದ್ದರೂ ಕೆರೆಗಳ ಕಾಮಗಾರಿ ಕೆಲಸಗಳು ಬಹಳ ಕಡಮೆಯಾಗಿ ಆಗುತ್ತಾ ಇವೆ. ಮಲೆನಾಡು ಪ್ರದೇಶಗಳಲ್ಲಿ ಹೆಚ್ಚಿಗೆ ಬಾವಿಗಳಾಗದಿರುವಾಗ ಸಣ್ಣಪುಟ್ಟ ಕೆರೆಗಳನ್ನು ಚೆನ್ನಾಗಿ ಅಭಿವೃದ್ಧಿ ಮಾಡಿದರೆ ಆಹಾರೋತ್ಪತ್ತಿಯನ್ನು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಹೆಚ್ಚು ಬೆಳೆಯನ್ನೂ ಸಹ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಇದರ ಜೊತೆಗೆ ರಾಯಚೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲಗಡಲೆ, ಬತ್ತದ ಬೆಳೆಗಳನ್ನು ತೀವ್ರವಾಗಿ ಬೆಳೆಯುವುದಕ್ಕೆ ಪ್ಯಾಕೇಜ್ ಪ್ರೋಗ್ರಾಂ ಹಾಕಿಕೊಂಡಿರುವಂತೆ ಉಳಿದ ಜಿಲ್ಲೆಗಳಲ್ಲಿ ಯಾವ್ಯಾವ ಮುಖ್ಯ ಬೆಳೆಗಳನ್ನು ಬೆಳೆಯುತ್ತಾರೋ ಆ ಬೆಳೆಗಳನ್ನೆಲ್ಲಾ ತೀವ್ರವಾಗಿ ಅಭಿವೃದ್ಧಿಮಾಡುವುದಕ್ಕೋಸ್ಕರ ಆ ತರಹದಲ್ಲಿ ಎಲ್ಲಾ ಕಡೆಗಳಲ್ಲೂ ಪ್ಯಾಕೇಜ್ ಸ್ಕೀಮುಗಳನ್ನು ಹಾಕಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಆ ಮೇಲೆ ರಾಜ್ಯಪಾಲರ ಭಾಷಣದಲ್ಲಿ ರಸ್ತೆ ಸಾರಿಗೆ ಕಾರ್ಪೊರೇಷನ್ನಿನವರು ಪ್ರಸಕ್ತ ಪಂಚವಾರ್ಷಿಕ ಯೋಜನೆಯಲ್ಲಿ ಮತ್ತಷ್ಟು ಪ್ರದೇಶದಲ್ಲಿ ಬಸ್ ಲೈನುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಸರ್ಕಾರದವರು ರಾಷ್ಟ್ರೀಕರಣ ಮಾಡಿದಂತಹ ಪ್ರದೇಶಗಳಲ್ಲಿ ರಾಷ್ಟ್ರೀಕರಣದಿಂದ ಜನತೆಗೆ ಪ್ರಯೋಜನವಾಗಿದೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕು. ಪ್ರಜಾಪ್ರಭುತ್ವ ಮತ್ತು ಸಮಾಜವಾದವನ್ನು ಒಪ್ಪಿಕೊಂಡಿರತಕ್ಕ ನಾವು ರಾಷ್ಟ್ರೀಕರಣವನ್ನು ಒಪ್ಪಿಕೊಂಡಿದ್ದೇವೆ. ಆದರೆ ರಾಷ್ಟ್ರೀಕರಣ ಮಾಡುವಾಗ ಅದರಿಂದ ಜನತೆಗೆ ಉಪಯೋಗ ಆಗಬೇಕು. ಅದರಿಂದ ಉಪಯೋಗವಾಗದೆ ಒಂದು ತತ್ವದೃಷ್ಟಿಯಿಂದ ರಾಷ್ಟ್ರೀಕರಣ ಮಾಡುವುದು ಸರಿಯಲ್ಲ. ಈಗಾಗಲೇ ಸರ್ಕಾರದವರು ರಾಷ್ಟ್ರೀಕರಣ ಮಾಡಿರತಕ್ಕ ಪ್ರದೇಶದಲ್ಲಿ ಸರಿಯಾದ ಆಡಳಿತವನ್ನು ಸರಿಯಾದ ವ್ಯವಸ್ಥೆಯನ್ನು ಉಂಟುಮಾಡಿ ಅನಂತರ ಉಳಿದ ಪ್ರದೇಶಗಳಲ್ಲಿ ರಾಷ್ಟ್ರೀಕರಣ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಹಾಸನ ಜಿಲ್ಲೆಯಲ್ಲಿ ಬಸ್ ಲೈನುಗಳು ರಾಷ್ಟ್ರೀಕರಣವಾದ ಮೇಲೆ ಅಲ್ಲಿನ ಪ್ರಯಾಣಿಕರಿಗೆ ಆಗಿರತಕ್ಕ ಕಿರುಕುಳ ಮತ್ತು ತೊಂದರೆಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ರಸ್ತೆ ಸಾರಿಗೆ ಶಾಖೆಯನ್ನು ವಹಿಸಿಕೊಂಡಿರತಕ್ಕ ನಮ್ಮ ಮಾನ್ಯ ಮಂತ್ರಿಗಳು ಬರೀ ಪ್ರಯಾಣಿಕರ ಮೇಲೆ ಮಾತ್ರ ತಪ್ಪನ್ನು ಹೊರಿಸಿ ಸಾರ್ವಜನಿಕರದು ತಪ್ಪು ಎನ್ನತಕ್ಕ ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತಿದ್ದಾರೆಯೇ ವಿನಾ ಅಧಿಕಾರಿಗಳು ಏನು ತಪ್ಪು ಮಾಡುತ್ತಾರೆ, ಅಧಿಕಾರಿಗಳೂ ಸಹ ತಪ್ಪು ಮಾಡಿದ್ದಾರೆಯೇ ಇಲ್ಲವೆ ಎನ್ನತಕ್ಕ ವಿಚಾರವನ್ನು ಮಾತ್ರ ಯಾವ ಸಭೆಯಲ್ಲೂ ಹೇಳುವುದಿಲ್ಲ. ಅಧಿಕಾರಿಗಳ ಮೀಟಿಂಗ್‌ನಲ್ಲೂ ಹೇಳುವುದಿಲ್ಲವೋ ಏನೋ ಗೊತ್ತಿಲ್ಲ. ಅದೂ ಕೂಡ ಅನುಮಾನವಾಗಿದೆ. ನಮ್ಮ ಜಿಲ್ಲೆಯಲ್ಲಿ ರಾಷ್ಟ್ರೀಕರಣವಾದ ಮೇಲೆ ಅಲ್ಲಿನ ಜನ ಬಹಳಮಟ್ಟಿಗೆ ನೊಂದಿದ್ದಾರೆ. ಇದರ ಜೊತೆಗೆ ರಸ್ತೆ ಸಾರಿಗೆ ಕಾರ್ಪೊರೇಷನಿನಲ್ಲಿ ಕೆಲಸಕ್ಕೆ ಸೇರಿಕೊಂಡಿರತಕ್ಕ ಬಹಳ ಜನ ಕೆಲಸವಿಲ್ಲದೆ ಸುಮ್ಮನೆ ಓಡಾಡುತ್ತಿರುತ್ತಾರೆ. ಅವರು ಏನು ಕೆಲಸ ಮಾಡುತ್ತಾರೆಯೋ ಅದು ನನಗೆ ಗೊತ್ತಿಲ್ಲ. ಅಂತೂ ಬಸ್ಸುಗಳು ಮಾತ್ರ ಕಾಲಕಾಲಕ್ಕೆ ಸರಿಯಾಗಿ ಓಡುವುದಿಲ್ಲ. ಬಸ್ಸುಗಳು ಸೇರಬೇಕಾದಂತಹ ಸ್ಥಳಗಳನ್ನು ಸರಿಯಾದ ಕಾಲಕ್ಕೆ ಸೇರುವುದಿಲ್ಲ. ಕೆಲವು ವೇಳೆ ಬಸ್ಸುಗಳು ದಾರಿಯ ಮಧ್ಯದಲ್ಲಿ ಹಾಗೆಯೇ ಕೆಟ್ಟು ನಿಂತುಬಿಡುತ್ತವೆ. ಮಕ್ಕಳುಮರಿಗಳನ್ನು ಕಟ್ಟಿಕೊಂಡು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗತಕ್ಕ ಸಂಸಾರಗಳಿಗೆ ಆಗತಕ್ಕಂಥ ತೊಂದರೆ ಅಷ್ಟಿಷ್ಟಲ್ಲ. ಈ ವಿಷಯದಲ್ಲಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇದರ ಜೊತೆಗೆ ಬಸ್ಸುಗಳಲ್ಲಿ ಪ್ರಯಾಣ ಮಾಡಲು ಟಿಕೆಟ್‌ಗಳನ್ನು ಕೊಂಡುಕೊಳ್ಳತಕ್ಕ ವ್ಯವಸ್ಥೆಯಲ್ಲಿರತಕ್ಕ ತೊಂದರೆಯನ್ನೂ ನಾನು ಹೇಳುತ್ತೇನೆ. ಮೊನ್ನೆ ನಾನು ಹಾಸನದಿಂದ ಬೆಂಗಳೂರಿಗೆ ಬರುವಾಗ ಬಸ್ ಸ್ಟ್ಯಾಂಡಿನಲ್ಲಿ ಒಬ್ಬ ಪ್ರಯಾಣಿಕನಿಗೆ ಬೆಳಿಗ್ಗೆ ಏಳೂವರೆ ಗಂಟೆಗೆ ಟಿಕೇಟ್ ಕೊಟ್ಟಿದ್ದರು. ಆದರೆ ಬಸ್ಸು ಏಳೂವರೆ ಗಂಟೆಗೆ ಹೊರಡಲಿಲ್ಲ.

(ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ)

ಎಂಟು ಗಂಟೆಗೆ ಹೊರಟಿತು. ಆಮೇಲೆ ನಮ್ಮ ಬಸ್ಸು ಎಂಟು ಮೈಲಿ ಬಂದಮೇಲೆ ಇನ್‌ಸ್ಪೆಕ್ಟರು ಟಿಕೆಟ್‌ಗಳನ್ನು ಚೆಕ್ ಮಾಡಿದಾಗ ಅತ ಕೊಂಡುಕೊಂಡಿರತಕ್ಕ ಟಿಕೆಟ್ ಅನ್ನು ನೋಡಿ ಈ ಟಿಕೆಟ್ ಈ ಬಸ್ಸಿಗೆ ಸಂಬಂಧಪಟ್ಟದ್ದಲ್ಲ, ಇದು ಬೇರೆ ಬಸ್ಸಿಗೆ ಸಂಬಂಧಪಟ್ಟದ್ದು ಆದ್ದರಿಂದ ಬೇರೆ ಬಸ್ ಚಾರ್ಜ್ ಕೊಡಿ ಟಿಕೇಟ್ ಕೊಂಡುಕೊಳ್ಳಿ ಇಲ್ಲದೆ ಇದ್ದರೆ ಈ ಬಸ್ಸಿನಿಂದ ಇಳಿದುಬಿಡಿ ಎಂದು ಹೇಳಿದರು. ಈ ರೀತಿ ದಾರಿಯ ಮಧ್ಯದಲ್ಲಿ ತೊಂದರೆ ಮಾಡಿದರೆ; ಅಕಸ್ಮಾತ್ ಪ್ರಯಾಣಿಕರ ಹತ್ತಿರ ದುಡ್ಡು ಇಲ್ಲದೆ ಹೋದರೆ ಮುಂದೆ ಅವರ ಗತಿಯೇನು ? ದಾರಿಯ ಮಧ್ಯದಲ್ಲಿ ಯಾರು ದುಡ್ಡು ಕೊಡುತ್ತಾರೆ ? ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಪ್ರಯಾಣಿಕರು ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದರೆ ದಂಡನೆಗೆ ಅರ್ಹರಾಗುತ್ತಾರೆ ಎಂದು ಹೇಳಿದಮೇಲೆ ಬಸ್ ಸ್ಟ್ಯಾಂಡಿನಲ್ಲಿ ಈಗ ಟಿಕೆಟ್ ಕೊಡತಕ್ಕ ವ್ಯವಸ್ಥೆಯಿಂದ ಏನು ಪ್ರಯೋಜನವಿಲ್ಲ ಎಂದು ನಾನು ಹೇಳುತ್ತೇನೆ. ಸಾರ್ವಜನಿಕರಿಂದ ಎಷ್ಟೋ ದೂರುಗಳು ಬಂದರೂ ಪ್ರಯಾಣಿಕರಿಗೆ ಸೌಕರ್ಯವನ್ನು ಒದಗಿಸಿಕೊಡತಕ್ಕ ವಿಚಾರದಲ್ಲಾಗಲೀ ಬಸ್ಸಿನಲ್ಲಿರತಕ್ಕ ನೌಕರರು ಪ್ರಯಾಣಿಕರ ವಿಷಯದಲ್ಲಿ ಯಾವ ರೀತಿ ವರ್ತಿಸುತ್ತಿದ್ದಾರೆ ಎನ್ನತಕ್ಕ ವಿಷಯದಲ್ಲಾಗಲೀ ಸ್ವಲ್ಪವೂ ಗಮನವನ್ನು ಕೊಡುತ್ತಿಲ್ಲ. ನಾನು ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ. ಈಗ ಎರಡು ವರ್ಷಗಳಿಂದಲೂ ಹಾಸನ ಮತ್ತು ಹಳೆಯ ಮೈಸೂರಿನ ಕೆಲವು ಭಾಗಗಳಲ್ಲಿ ರಾಷ್ಟ್ರೀಕರಣವಾಗಿರುವ ಪ್ರದೇಶದಲ್ಲಿ ನಷ್ಟವಾಗುತ್ತಿರುವುದಲ್ಲದೆ ಪ್ರಯಾಣಿಕರಿಗೆ ಸರಿಯಾದ ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ರಾಷ್ಟ್ರೀಕರಣ ಮಾಡಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರಯಾಣಿಕರಿಗೆ ಸರಿಯಾದ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಸಮಾಜ ಕಲ್ಯಾಣ ಇಲಾಖೆಯ ವಿಷಯವನ್ನು ಹೇಳುವುದಾದರೆ ಈ ಇಲಾಖೆಯಲ್ಲಿ ಸಾಕಷ್ಟು ಕೆಲಸಗಳು ನಡೆಯುತ್ತಿದೆಯೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿದ್ದಾರೆ. ಆ ಇಲಾಖೆಯಲ್ಲಿ ಏನು ಕೆಲಸ ನಡೆಯುತ್ತದೆಯೋ ಏನೋ ನನಗಂತೂ ಗೊತ್ತಿಲ್ಲ. ಹರಿಜನರಿಗೆ ಮತ್ತು ಗಿರಿಜನರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನೂ ಒದಗಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಈಗ ಎರಡು ವರ್ಷಗಳಿಂದಲೂ ಭಾಷಣ ಮಾಡುತ್ತಿದ್ದಾರೆ. ಆದರೆ ಅಲ್ಲಿ ಕೆಲಸಗಳು ಆಗಿದ್ದನ್ನು ನೋಡಿದರೆ ಏನು ಕೆಲಸವೂ ಆಗಿಲ್ಲ. ಯಾವ ಕೆಲಸವನ್ನೂ ಮಾಡಿಲ್ಲ. ಈಗ್ಗೆ ಎರಡು ವರ್ಷಗಳ ಹಿಂದೆ ಆ ಇಲಾಖೆಯಲ್ಲಿ ಎಷ್ಟು ಕೆಲಸವಾಗಿತ್ತೋ ಅಷ್ಟೇ. ಸರ್ಕಾರದವರು ಇತ್ತಕಡೆ ಸ್ವಲ್ಪ ಗಮನಿಸಬೇಕು.

ಇನ್ನು ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣವನ್ನೇನೋ ಸರಕಾರದವರು ಖರ್ಚು ಮಾಡುತ್ತಿದ್ದಾರೆ, ಅದನ್ನು ಸ್ವಾಗತ ಮಾಡುತ್ತೇನೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡತಕ್ಕ ಹಣ ಸದ್ವಿನಿಯೋಗವಾಗುವಹಾಗೆ ಖರ್ಚು ಮಾಡಬೇಕು. ಎಷ್ಟೋ ಹರಿಜನ ವಿದ್ಯಾರ್ಥಿಗಳ ಹಾಸ್ಟೆಲುಗಳಿಗೆ ಬೇಕಾದಂತ ಕಟ್ಟಡಗಳಿಲ್ಲ. ಎಷ್ಟೋಕಡೆ ಅನೇಕ ವಿದ್ಯಾರ್ಥಿನಿಲಯಗಳು ಟೌನಿನ ಮಧ್ಯದಲ್ಲಿ ಇವೆ. ಒಂದು ಹರಿಜನ ವಿದ್ಯಾರ್ಥಿಗಳ ಕಾಲೇಜು ವಿದ್ಯಾರ್ಥಿನಿಲಯ ಸುಮಾರು 25ವರ್ಷಗಳಿಂದಲೂ ನಡೆಯುತ್ತಾ ಇದೆ. ಆ ವಿದ್ಯಾರ್ಥಿನಿಲಯ 25 ವರ್ಷಗಳಿಂದ ನಡೆಯುತ್ತಾ ಇದ್ದರೂ ಅದಕ್ಕೆ ಬೇಕಾದ ಒಂದು ಸ್ವಂತ ಕಟ್ಟಡವನ್ನು ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ವಿದ್ಯಾಭ್ಯಾಸಕ್ಕೆ ಎಷ್ಟರಮಟ್ಟಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆಂಬುದು ಇದರಿಂದಲೇ ಗೊತ್ತಾಗುತ್ತದೆ. ಆ ಹಾಸ್ಟಲಿನ ಕಟ್ಟಡದ ಮಾಲೀಕರನ್ನು ರಿಪೇರಿ ಮಾಡಿಸಿಕೊಡಿ ಎಂದು ಕೇಳಿದರೆ ರಿಪೇರಿ ಮಾಡಿಸುವುದಕ್ಕೆ ಸಾಧ್ಯವಿಲ್ಲ, ನಿಮಗೆ ಈ ಕಟ್ಟಡಬೇಕಿಲ್ಲದಿದ್ದರೆ ಬಿಟ್ಟುಬಿಡಿ ಬೇರೆಯವರಿಗೆ ಬಾಡಿಗೆಗೆ ಕೊಡುತ್ತೇನೆ ಎಂದು ಹೇಳುತ್ತಾರೆ. ಇದೇ ರೀತಿ ಎಷ್ಟೋ ಹಾಸ್ಟಲುಗಳಿಗೆ ಸ್ವಂತ ಕಟ್ಟಡಗಳಿಲ್ಲದೆ ತೊಂದರೆಯಾಗಿದೆ. ಆದರೂ ಸಹ ಇಂತಹ ಹಾಸ್ಟಲುಗಳಿಗೆ ಸರ್ಕಾರದವರು ಸ್ವಂತ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಉಪಯೋಗಕ್ಕೆ ಬಾರದ ಎಷ್ಟೋ ಕೆಲಸಗಳಿಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ಇಂಥಾ ಕೆಲಸಗಳಿಗೆ ಸರ್ಕಾರದವರು ಹಣವನ್ನು ಖರ್ಚು ಮಾಡುವುದಿಲ್ಲ. ಇದರಿಂದ ಹರಿಜನರು ಮತ್ತು ಗಿರಿಜನರ ವಿಚಾರದಲ್ಲಿ ನಮ್ಮ ಸರ್ಕಾರದವರಿಗೆ ಇನ್ನೂ ಉದಾಸೀನ ಪ್ರವೃತ್ತಿ ಹೋಗಿಲ್ಲ ಎಂಬುದು ಗೊತ್ತಾಗುತ್ತದೆ. ಈಗ ನಮ್ಮ ರಾಜ್ಯದಲ್ಲಿ ಅನೇಕ ಕಡೆ ಸ್ಕೂಲುಗಳು ಮತ್ತು ಶಿಶುವಿಹಾರಗಳನ್ನು ತೆರೆದಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಎಲ್ಲಿ ನೋಡಿದರೂ ತರಬೇತಾದ ಉಪಾಧ್ಯಾಯರು ಇಲ್ಲ ಎಂದು ಹೇಳುತ್ತಿದ್ದಾರೆ; ಮತ್ತು ಸ್ಕೂಲುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನು ನೋಡಿದರೆ ಈ ಇಲಾಖೆಯ ಆಡಳಿತದಲ್ಲಿ ಲೋಪದೋಷಗಳಿವೆ ಎಂಬುದು ಗೊತ್ತಾಗುತ್ತದೆ. ಈ ಇಲಾಖೆಯಲ್ಲಿ ಡೈರೆಕ್ಟರಿಂದ ಹಿಡಿದು ಜವಾನರವರೆಗೂ ಯಾರಿಗೂ ಹೆದರಿಕೆಯೇ ಇಲ್ಲ. ಬೇಜವಾಬ್ದಾರಿ ಜಾಸ್ತಿ

ಯಾಗಿದೆ. ಇದಕ್ಕೆ ಕಾರಣವೇನೆಂದರೆ ಇಲಾಖೆಯವರು ಸರಿಯಾಗಿ ಕ್ರಮವನ್ನು ತೆಗೆದುಕೊಂಡಿದ್ದರೆ ಆ ರೀತಿಯ ಬೇಜವಾಬ್ದಾರಿ ಇರುತ್ತಾ ಇರಲಿಲ್ಲ. ಈ ರೀತಿ ಬೇಜವಾಬ್ದಾರಿಯಿಂದ ನಡೆಯತಕ್ಕ ಇಲಾಖೆಯಲ್ಲಿ ಎಷ್ಟು ಖರ್ಚು ಮಾಡಿದರೂ ಹಣ ಪೋಲಾಗುತ್ತದೆ. ಸರ್ಕಾರದವರು ಜನತೆ ಕೊಡ ತಕ್ಕ ದುಡ್ಡನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿ ಅದು ಸದ್ವಿನಿಯೋಗವಾಗುವ ಹಾಗೆ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಹರಿಜನರಿಗೆ ಸಂಬಂಧಪಟ್ಟಂತೆ, ಇನ್ನೂ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ನಾನು ತರಬೇಕೆಂದಿದ್ದೇನೆ. ಸುಪ್ರೀಂ ಕೋರ್ಟ್‌ನಲ್ಲಿ ಆಗಿರತಕ್ಕ ತೀರ್ಮಾನವನ್ನು ಜಾರಿಗೆ ತರಬೇಕು. ಪ್ರಮೋಷನ್ ಮೇಕೆನ್ಸಿಯಲ್ಲಿ ಹರಿಜನರಿಗೆ ನ್ಯಾಯವನ್ನು ದೊರಕಿಸಿ ಸರಿಯಾದ ಪರ್ಸೆಂಟೇಜನ್ನು ಕೊಡಬೇಕೆಂದು ಈಗ ಎರಡು ವರ್ಷಗಳಿಂದಲೂ ಸರ್ಕಾರದವರನ್ನು ಕೇಳುತ್ತಿದ್ದೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗ ಅದನ್ನು ಜಾರಿಗೆ ತರುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಇದುವರೆಗೂ ಆ ಕಾರ್ಯ ಹಾಗೆಯೇ ಹಿಂದೆ ಬಿದ್ದಿದೆ. ಅದು ಆ ರೀತಿ ಆಗಬಾರದು. ಆದ್ದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಪ್ರಮೋಷನ್ನಿನ ವಿಚಾರದಲ್ಲಿ ಸಣ್ಣ ಕೆಲಸವಾಗಲೀ ದೊಡ್ಡ ಹುದ್ದೆಯಾಗಲೀ ಹರಿಜನರಿಗೆ ಸಿಕ್ಕಬೇಕಾದಂತಹ ಹುದ್ದೆಯನ್ನು ಕೊಡಿಸಿ ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಐ.ಎ.ಎಸ್. ಮತ್ತು ಐ.ಪಿ.ಎಸ್. ತರಬೇತಿ ಕೇಂದ್ರಗಳನ್ನು ತೆರೆದಿದ್ದಾರೆ. ಇದರಿಂದ ಹರಿಜನರಿಗೆ ಬಹಳ ಅನುಕೂಲವಾಗುತ್ತದೆ. ಆದರೆ ಈ ತರಬೇತಿ ಕೇಂದ್ರಗಳಲ್ಲಿ ನೇಮಕ ವಾಗಿರತಕ್ಕ ಅಧ್ಯಾಪಕವರ್ಗ ಏನಿದೆಯೋ ಅದು ಅಷ್ಟು ಚೆನ್ನಾಗಿಲ್ಲ. ಎರಡು ಮೂರು ವರ್ಷ ಸರ್ವೀಸ್ ಆಗಿರತಕ್ಕ ಲೆಕ್ಚರರುಗಳನ್ನು ಅಲ್ಲಿ ಪಾಠ ಹೇಳುವುದಕ್ಕೆ ನೇಮಕಮಾಡಿದ್ದಾರೆ. ಅಲ್ಲಿ ಪಾಠವನ್ನು ಹೇಳತಕ್ಕ ಲೆಕ್ಚರರುಗಳೇ ಐ.ಎ.ಎ.ಎಸ್. ಮತ್ತು ಐ.ಪಿ.ಸಿ. ಪರೀಕ್ಷೆಗಳಿಗೆ ಕುಳಿತು ಕೊಂಡರೆ ಅವರಿಗೆ ಅದನ್ನು ಪಾಸು ಮಾಡತಕ್ಕ ಯೋಗ್ಯತೆ ಇದೆಯೋ ಇಲ್ಲವೋ ಅದು ಅನುಮಾನಾ ಸ್ಪದವಾಗಿದೆ. ಸರ್ಕಾರದವರು ಖರ್ಚು ಮಾಡತಕ್ಕ ಹಣ ಪೋಲಾಗದೆ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗಬೇಕು. ಆ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ಪಡೆದ ವಿದ್ಯಾರ್ಥಿಗಳಲ್ಲಿ ಕೇವಲ ಎರಡು ಮೂರು ಹುಡುಗರು ಐ.ಎ.ಎಸ್. ಮತ್ತು ಐ.ಪಿ.ಎಸ್. ಪರೀಕ್ಷೆಗಳನ್ನು ಪಾಸು ಮಾಡಿದ್ದಾರೆ. ಎರಡು ಮೂರು ಹುಡುಗರು ಆ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ಪಡೆಯದೇ ಆ ಪರೀಕ್ಷೆಗೆ ಕುಳಿತುಕೊಂಡು ಐ.ಎ.ಎಸ್. ಮತ್ತು ಐ.ಪಿ.ಎಸ್. ಪರೀಕ್ಷೆಗಳನ್ನು ಪಾಸು ಮಾಡಿ ದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಸರ್ಕಾರದವರು ಖರ್ಚು ಮಾಡತಕ್ಕ ಹಣ ದುರುಪ ಯೋಗವಾಗಬಾರದು. ಅದು ಸದ್ವಿನಿಯೋಗವಾಗುವುದಕ್ಕೆ ಬೇಕಾದ ಭದ್ರತೆಯನ್ನು ಮಾಡ ಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ಶ್ರೀಮಾನ್ ಬೀರಪ್ಪ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಟ್ಟು ಎರಡು ವರ್ಷಗಳಾದುವು. ಅದನ್ನು ಜಾರಿಗೆ ತರುವುದಕ್ಕೋಸ್ಕರ ಅದನ್ನು ಈ ಸಭೆಯಲ್ಲಿ ಚರ್ಚೆಗೆ ತರದೆ ಹಾಗೆಯೇ ಇಟ್ಟಿದ್ದಾರೆ. ಹರಿಜನರ ಬಗ್ಗೆ ಎಷ್ಟು ತಾತ್ಸಾರವಿದೆ ಎನ್ನುವುದನ್ನು ಇದು ತೋರಿಸುತ್ತದೆ. ಈ ವರದಿಯ ಚರ್ಚೆಗೆ ಅವಕಾಶಮಾಡಿಕೊಟ್ಟು ಅದರಲ್ಲಿ ಸಲಹೆಮಾಡಿರತಕ್ಕದ್ದನ್ನು ಆದಷ್ಟು ಬೇಗ ಜಾರಿಗೆ ತರಬೇಕೆಂದು ಪ್ರಾರ್ಥಿಸುತ್ತೇನೆ.

4-30 P.M.

Economic aid ಎಂದರೆ ಕೋಳಿ, ಎಮ್ಮೆ, ಹಸು, ಇವುಗಳನ್ನು ಹರಿಜನರಿಗೆ ಕೊಡುತ್ತಿದ್ದಾರೆ. ಒಂದು ಸಂಸಾರಕ್ಕೆ ಒಂದು ಕೋಳಿ, ಕುರಿ, ಎಮ್ಮೆ ಕೊಟ್ಟರೆ ಅದರಿಂದ ಅವನ ಆರ್ಥಿಕಸ್ಥಿತಿ ಉತ್ತಮ ವಾಗುವುದಿಲ್ಲ. ಆದ್ದರಿಂದ ಈ ಯೋಜನೆಯನ್ನು ದಯವಿಟ್ಟು ರದ್ದುಮಾಡಿ ಅದಕ್ಕೆ ಬದಲು ತಾಲ್ಲೂಕ್ ಅಥವಾ ಜಿಲ್ಲಾ ಮುಖ್ಯಸ್ಥಳಗಳಲ್ಲಿ ಒಂದೋ ಎರಡೋ ಗ್ರಾಮಾಂತರ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿ ಹರಿಜನರಿಗೆ ತರಬೇತಿಯನ್ನು ಕೊಟ್ಟು ಅವರಿಗೆ ಒಂದು ಕಸುಬು ಬರುವ ಹಾಗೆ ವ್ಯವಸ್ಥೆ ಮಾಡಿಕೊಡಬೇಕು. ದರಖಾಸ್ತಿನಲ್ಲಿ ಜಮೀನು ಸಿಕ್ಕತಕ್ಕದ್ದು ಕಡಮೆಯಾಗಿರುವುದರಿಂದ ಅವರಿಗೆ ಗ್ರಾಮಾಂತರ ಕೈಗಾರಿಕೆಗಳಲ್ಲಿ ತರಬೇತಿಯನ್ನು ಕೊಟ್ಟು ಅವರ ಜೀವನಕ್ಕೆ ಒಂದು ದಾರಿ ಮಾಡಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರವಾಸೋದ್ಯಮವನ್ನು ನಮ್ಮ ರಾಜ್ಯದಲ್ಲಿ ಅಭಿವೃದ್ಧಿಮಾಡಬೇಕೆಂದು ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ಆದರೆ ಪ್ರವಾಸೋದ್ಯಮ ಸಾಕಷ್ಟು ಅಭಿವೃದ್ಧಿಯಾಗಿಲ್ಲ. ಬೇಲೂರು ಮತ್ತು ಹಳೇಬೀಡು ದೇವಸ್ಥಾನಗಳು ಜಗತ್‌ಪ್ರಸಿದ್ಧವಾಗಿವೆ. ಇಲ್ಲಿಗೆ ಜಗತ್ತಿನ ನಾನಾಕಡೆಗ

(ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ)

ಳಿಂದ ಪ್ರವಾಸಿಗಳು ಬರುತ್ತಾರೆ. ಈ ಸ್ಥಳದಲ್ಲಿ ಇವರು ಉಳಿದುಕೊಳ್ಳುವುದಕ್ಕೆ ಜಾಗವಿಲ್ಲ. ಹಳೇಬೀಡು ದೇವಸ್ಥಾನಕ್ಕೆ ಲೈಟುಗಳಿಲ್ಲ, ಈ ದೇವಸ್ಥಾನಗಳು ಕೇಂದ್ರಸರ್ಕಾರಕ್ಕೆ ಸೇರಿರುತ್ತವೆ. ಬೇಲೂರಿನಲ್ಲಿ ರಾಜ್ಯಸರ್ಕಾರದ ಒಂದು ಪ್ರವಾಸಮಂದಿರವಿದೆ. ಅದರಲ್ಲಿ ಐದಾರು ಕೊಠಡಿಗಳಿವೆ. ಒಂದೊಂದು ಬಸ್ಸಿನಲ್ಲಿ ಬರುವ ಪ್ರವಾಸಿಗರು ಇಲ್ಲಿ ಉಳಿದುಕೊಳ್ಳುವುದು ಹಾಗಿರಲಿ, ಕೊನೆಯ ಪಕ್ಷ ಸ್ವಲ್ಪಹೊತ್ತು ವಿಶ್ರಾಂತಿ ಪಡೆಯುವುದಕ್ಕಾದರೂ ಅವಕಾಶವಿಲ್ಲವೆಂದರೆ ಪ್ರವಾಸೋದ್ಯಮದಿಂದ ಏನೂ ಪ್ರಯೋಜನವಿಲ್ಲ. ಮಾನ್ಯ ಗೃಹಸಚಿವರು ಈ ಬಗ್ಗೆ ಬಹಳ ಕುತೂಹಲಗಳಾಗಿದ್ದಾರೆ. ಅವರು ಬೇಲೂರಿಗೆ ದಯಮಾಡಿಸಿದ್ದಾಗ ಬೇಲೂರು ಮತ್ತು ಹಳೇಬೀಡಿನ ಜನರು ಈ ವಿಷಯವನ್ನು ಅವರಲ್ಲಿ ಪ್ರಸ್ತಾಪಮಾಡಿ ಪ್ರವಾಸಮಂದಿರದ ಅಗತ್ಯವನ್ನು ತಿಳಿಸಿರುತ್ತಾರೆ. ಅಲ್ಲಿರುವ ಕಷ್ಟವನ್ನು ನೋಡಲಾರದೆ ಲೋಕೋಪಯೋಗಿ ಮಂತ್ರಿಗಳು ಹಳೇಬೀಡಿಗೆ ಬಂದಾಗ ಎರಡು ಕೊಠಡಿಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದರು. ಅದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಇವು ಕೇಂದ್ರಸರ್ಕಾರದ ಅಧೀನದಲ್ಲಿರುವುದರಿಂದ ರಾಜ್ಯಸರ್ಕಾರವು ಕೇಂದ್ರಕ್ಕೆ ಒತ್ತಾಯಮಾಡಿ ಬೇಲೂರಿನಲ್ಲಿ ಒಂದು upper grade rest house ಆಗುವಂತೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ಪ್ರಥಮವಾಗಿ ಕನ್ನಡದಲ್ಲಿ ತಮ್ಮ ಭಾಷಣವನ್ನು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಮ್ಮ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ.

ಸ್ವಾಮಿ, ರಾಜ್ಯಪಾಲರ ಭಾಷಣ, ಸೊಸೈಟಿಗಳಲ್ಲಿ ವರ್ಷೇ ವರ್ಷೇ ನಡೆಯತಕ್ಕ ಜನರಲ್ ಬಾಡಿಮೀಟಿಂಗ್ ಸಂದರ್ಭದಲ್ಲಿ ಒಪ್ಪಿಸುವ ಒಂದು ಪುಟ್ಟ ವರದಿಯಂತಿದೆ ಎಂದರೆ ತಪ್ಪಾಗಲಾರದು. ಸಹಕಾರಸಂಘಗಳಲ್ಲಿ ಒಂದು ಮಾಮೂಲಿ ವರದಿಯನ್ನು ಇಟ್ಟುಕೊಂಡಿರುತ್ತಾರೆ. ಅದರಲ್ಲಿ ಸದಸ್ಯರ ಸಂಖ್ಯೆ ಎಷ್ಟು, ಬಂಡವಾಳವೆಷ್ಟು, ಕುರ್ಚಿ, ಮೇಜು, ಎಷ್ಟಿವೆ, ಹಳೆಯ ಗೋಣಿಚೀಲ ಎಷ್ಟಿವೆ. ಇತ್ಯಾದಿ ವಿವರಗಳನ್ನೊಳಗೊಂಡ ಒಂದು ಪಟ್ಟಿಯನ್ನು ಇಟ್ಟುಕೊಂಡಿರುತ್ತಾರೆ. ಅದೇ ರೀತಿಯಲ್ಲಿಯೇ ರಾಜ್ಯಪಾಲರ ಭಾಷಣವೂ ಇದೆ ಎಂದರೆ ತಪ್ಪಾಗಲಾರದು. ಇದರಲ್ಲಿ ಕೊಟ್ಟಿರುವ ರಾಷ್ಟ್ರೀಯರಕ್ಷಣಾನಿಧಿ, ಯೋಜನಾಕಾರ್ಯಕ್ರಮ ಇವುಗಳ ಬಗ್ಗೆ ನೋಡಿದರೆ ದೇಶಕ್ಕೆ ಆಪತ್ತು ಬಂದಾಗ ಪ್ರತಿಯೊಬ್ಬ ಪ್ರಜೆಯೂ ತನ್ನಶಕ್ತಿಮೀರಿ ಆಡಳಿತ ನಡೆಸುತ್ತಿರುವ ಪಕ್ಷಕ್ಕೆ ಸಹಕಾರ ಕೊಡತಕ್ಕದ್ದು ಅಗತ್ಯ. ಪ್ರತಿಯೊಂದು ಪಕ್ಷವೂ ತನ್ನ ಸಹಕಾರವನ್ನು ಈ ದಿಸೆಯಲ್ಲಿ ಕೊಟ್ಟಿದೆ. ನಮ್ಮ ರ್‍ಾಜಪಾಲರು ಅಧಿಕ ಉತ್ಪಾದನೆಗಾಗಿ ಜನತೆಯ ಸಹಕಾರ ಹೆಚ್ಚು ಅವಶ್ಯಕವಾಗಿದೆ ಎಂದು ತಿಳಿಸಿದ್ದಾರೆ. ಆಡಳಿತ ಪಕ್ಷದವರು ಅಧಿಕ ಉತ್ಪಾದನೆಗೆ ವಿರೋಧಪಕ್ಷದ ಸದಸ್ಯರ ಹಾಗೂ ದೇಶದ ಜನತೆಯ ಸಹಕಾರವನ್ನು ಎಷ್ಟರಮಟ್ಟಿಗೆ ಬಯಸುತ್ತಾರೆಯೋ ಆ ರೀತಿಯಲ್ಲಿ ದೊರಕುತ್ತದೆಂದು ನಾನು ಹೇಳುತ್ತೇನೆ. ಈ ದಿಸೆಯಲ್ಲಿ ದೇಶಕ್ಕೆ ಆಪತ್ತು ಬಂದಾಗ ಪ್ರತಿಪ್ರಜೆಯೂ ತನ್ನಶಕ್ತಿಮೀರಿ ದೇಶದ ರಕ್ಷಣೆಗೆ, ದೇಶದ ಹಿತಕ್ಕಾಗಿ ದುಡಿಯತಕ್ಕದ್ದು ಪ್ರತಿಯೊಬ್ಬನಕರ್ತವ್ಯ. ಇಷ್ಟಾದರೂ 'ಊರು ದೋಚಿಕೊಂಡು ಹೋದಮೇಲೆ ದೊಡ್ಡಬಾಗಿಲು ಹಾಕಿದರು'. ಎಂಬಂತೆ ದೇಶದ ನಾಯಕರು ತಾತ್ಸಾರ ಮನೋಭಾವದಿಂದ ಜನತೆಯನ್ನು ರಕ್ಷಣಾನಿಧಿಗೆ ಹಣಕೊಡಿ, ಚಿನ್ನಕೊಡಿ, ಬೆಳ್ಳಿ ಕೊಡಿ ಎಂದು ಸುಲಿಗೆಯನ್ನು ಮಾಡತಕ್ಕ ವಿಷಾದಕರ ಪರಿಸ್ಥಿತಿಗೆ ಬಂತು. ದೇಶದ ಜನತೆ ಕಷ್ಟಪಟ್ಟು ದುಡಿದುದರಲ್ಲಿ ತಮ್ಮ ಪಾಲನ್ನು ಕೊಡಬೇಕಾದ ಸ್ಥಿತಿಗೆ ಬಂತು. ಈ ಒಂದು ಸ್ಥಿತಿಯಲ್ಲಿಯೂ ದೇಶದ ಜನತೆ ತಮ್ಮ ಶಕ್ತಿಮೀರಿ ಸಹಾಯಮಾಡಿದ್ದಾರೆ.

ಸಮಾಜ ವಿಕಾಸ ಮತ್ತು ಪಂಚಾಯಿತಿ ರಾಜ್ಯಗಳ ಮಟ್ಟಿಗೆ ಹೇಳಬೇಕಾದರೆ, ಪಂಚಾಯಿತಿ ರಾಜ್ಯ ಎನ್ನುವುದು ಸರಿಯಾದ ರೀತಿಯಲ್ಲಿ ಕೆಲಸಮಾಡುತ್ತಿಲ್ಲ. ಇವುಗಳಲ್ಲಿ ಹಣ ದುರ್ವಿನಿಯೋಗವಾಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದೇರೀತಿ ತಾಲ್ಲೂಕು ಬೋರ್ಡುಗಳಲ್ಲಿಯೂ ಆಗುತ್ತಿದೆ. ದೇಶದ ಜನತೆ ಕೊಟ್ಟಂಥ ತೆರಿಗೆಯಹಣ ಅನಾವಶ್ಯಕವಾಗಿ ಖರ್ಚಾಗಿ ಯಾವುದಕ್ಕೆ ಖರ್ಚುಮಾಡಬೇಕೋ ಅಂಥದಕ್ಕೆ ಖರ್ಚುಮಾಡದೆ, ಅನೇಕ ರೀತಿಯಲ್ಲಿ ದುಂದುವೆಚ್ಚವಾಗುತ್ತಿರುವುದನ್ನು ನಾವು ಕಾಣುತ್ತೇವೆ. ಅದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು. ಕುಣಿತಕ್ಕೆ, ನಾಟಕ ಆಡಿಸುವುದಕ್ಕೆ ಎಂದು ಅನೇಕರೀತಿಯಲ್ಲಿ ಸುಳ್ಳು ಸುಳ್ಳುಲೆಕ್ಕ ಬರೆದು ಹಣವನ್ನು ಪೋಲುಮಾಡುತ್ತಿದ್ದಾರೆ. ಈ ರೀತಿಯಾಗಿ ಕೋಟ್ಯಾಂತರ ರೂಪಾಯಿ ದುರ್ವಿನಿಯೋಗವಾಗುತ್ತಿದೆ. ಅದರಲ್ಲಿ ಸದ್ವಿನಿಯೋಗವಾಗತಕ್ಕದ್ದು ಬಹಳ ಕಡಮೆ. ಗ್ರಾಮಪಂಚಾಯಿತಿಗಳು ಅಲ್ಲಿಯ ಆಡಳಿತಗಾರರ ಕೈವಶವಾಗಿ ಅವುಗಳ ಹಣವೆಲ್ಲ ಪೋಲಾಗುತ್ತಿದೆ. ಅನೇಕ ಪಂಚಾಯಿತಿಗಳಲ್ಲಿ ಹಣ ದಿನನಿತ್ಯದ ಕಾರ್ಯಕ್ರಮಗಳ ಹೆಸರಿನಲ್ಲಿ ಲೂಟಿಯಾಗುತ್ತಿದೆ ಎಂದು ನಾನು ಈ ಸಂದರ್ಭ

ದಲ್ಲಿ ಹೇಳುತ್ತೇನೆ. ಮಾನ್ಯಮಂತ್ರಿಗಳು ಪಂಚಾಯಿತಿ ರಾಜ್ಯ ಬಹಳ ಚೆನ್ನಾಗಿ ನಡೆಯುತ್ತಿದೆ. ಆ ಬಗ್ಗೆ ಕೇಂದ್ರಮಂತ್ರಿಗಳಾದ ಶ್ರೀ ಎಸ್. ಕೆ. ಡೇ ಅವರು ಪ್ರಶಂಸೆ ಮಾಡಿದ್ದಾರೆಂದು ಹೇಳಿದರು. ಅವುಗಳ ಆಡಳಿತ ಅಷ್ಟು ಚೆನ್ನಾಗಿ ಸುವ್ಯವಸ್ಥಿತವಾಗಿ ನಡೆಯುತ್ತಿಲ್ಲವೆಂದು ನಾನು ಹೇಳುತ್ತೇನೆ. ಒಬ್ಬ ಮಂತ್ರಿಗಳಾದವರು ಸಮಾರಂಭಗಳಿಗೆ ಹೋಗಿ ಹೂವಿನ ಹಾರಹಾಕಿಸಿಕೊಂಡು ಬಂದು ಪಂಚಾಯಿತಿ ಕೆಲಸಕಾರ್ಯಗಳು ಚೆನ್ನಾಗಿ ನಡೆಯುತ್ತಿವೆ ಎಂದು ಹೇಳುವುದು ಸರ್ವಥಾ ನ್ಯಾಯವಲ್ಲ. ಇವೊತ್ತು ಪಂಚಾಯಿತಿಗಳಲ್ಲಿ ನಡೆಯತಕ್ಕ ಕೆಲಸಕಾರ್ಯಗಳಲ್ಲಿ ಲಕ್ಷಾಂತರ ರೂಪಾಯಿ ದುರ್ವಿನಿಯೋಗವಾಗಿ ಅನೇಕ ಜನರ ಪಾಲಾಗುತ್ತಿದೆಎಂದು ನಾನು ವಿಷಾದದಿಂದ ಹೇಳುತ್ತಿದ್ದೇನೆ. ಎಲ್ಲ ಕೆಲಸ ತಾಲ್ಲೂಕ್ ಬೋರ್ಡುಮಾಡಬೇಕು ಅದಕ್ಕೆ ಸರ್ವ ಹಕ್ಕು ಇದೆ, ಸರ್ವ ವಿಧವಾದ ಅಧಿಕಾರ ಕೊಟ್ಟಿದ್ದೇವೆ ಎಂದು ತಾಲ್ಲೂಕ್ ಬೋರ್ಡು ಆಡಳಿತದ ಬಗ್ಗೆ ಹೇಳುತ್ತಾರೆ. ಆದರೆ ಅವುಗಳ ಆರ್ಥಿಕ ಪರಿಸ್ಥಿತಿ ಹೇಗಿದೆ, ಆದಾಯ ಏನಿದೆ, ಯಾವ ಯಾವ ಕೆಲಸ ನಿರ್ವಹಿಸಬಲ್ಲವು ಎಂಬುದನ್ನು ಸರಕಾರ ಯೋಚನೆ ಮಾಡಿಲ್ಲ. ಆಸ್ಪತ್ರೆ ನಡೆಸಬೇಕು, ಸ್ಕೂಲ್ ನಡೆಸಬೇಕು, ಶಾಲಾ ಕಟ್ಟಡ ಕಟ್ಟಿಸಬೇಕು, ಬಾವಿ ತೋಡಿಸಬೇಕು ಎಂದು ಹೇಳಿ ಐವತ್ತು ಸಾವಿರ ರೂಪಾಯಿ ಕೊಟ್ಟು, ಐದು ಲಕ್ಷ ರೂಪಾಯಿ ಕೆಲಸದ ವಿವರ ಕೊಟ್ಟರೆ ಅದನ್ನು ನಿರ್ವಹಿಸುವುದು ಹೇಗೆ ? ಇದಲ್ಲದೆ ತಾಲ್ಲೂಕ್ ಬೋರ್ಡುಗಳಲ್ಲಿ ಪಕ್ಷದ ಮನೋಭಾವ ಬೆಳೆದು ತಿಕ್ಕಾಟ ಪ್ರಾರಂಭವಾಗಿದೆ. ಆದುದರಿಂದ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲ. ಅರ್ಧದಷ್ಟು ತಾಲ್ಲೂಕ್ ಬೋರ್ಡುಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂದು ಹೇಳುತ್ತೇನೆ. ಅನೇಕ ನ್ಯೂನತೆಗಳು ಇವೆ. ಎಂಟು ವರ್ಷಗಳಾದರೂ ಒಂದು ಶಾಲಾ ಕಟ್ಟಡ ರಿಪೇರಿ ಮಾಡುವುದು ಆಗಿಲ್ಲ. ಶಾಲಾ ಕಟ್ಟಡ ಬಿದ್ದು ಹೋಗುವ ಪರಿಸ್ಥಿತಿ ಬಂದಿದೆ. ಇದೇ ರೀತಿ ಬಾವಿ ಕೆಲಸ ಸಹ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಅರ್ಧದವರೆಗೆ ನಡೆದ ಬಾವಿ ಕೆಲಸ ಪೂರ್ತಿಯಾಗದೆ ಬಿದ್ದು ಹೋದ ದುಸ್ಥಿತಿ ಬಂದಿದೆ. ಇದೇ ರೀತಿ ಆಸ್ಪತ್ರೆ ನಡೆಸುವ ಕೆಲಸ ಸಹ ಸಮಾಧಾನಕರವಾಗಿಲ್ಲ. ಇಂಥ ಸನ್ನಿವೇಶವನ್ನು ನಾನು ಕಣ್ಣಿಂದ ನೋಡಿದ್ದೇನೆ. ಸಾಕಷ್ಟು ಹಣ ಇಲ್ಲದೆ ಕೆಲಸ ಹಾಳಾಗಿ ಹೋಗತಕ್ಕ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆ. ಆದುದರಿಂದ ಸರಕಾರ ಇದನ್ನು ಕೂಲಂಕಷವಾಗಿ ವಿಚಾರ ಮಾಡಿ ಅವುಗಳಿಗೆ ಸೂಕ್ತ ಅಧಿಕಾರ ವ್ಯಾಪ್ತಿ ಕೊಡಬೇಕು. ಕೆಲಸ ಮಾಡತಕ್ಕ ಶಕ್ತಿ ಇದೆಯೇ ಎಂಬುದನ್ನು ಯೋಚನೆ ಮಾಡಿ ಅಂಥ ಕೆಲಸ ವಹಿಸಿ ಕೊಟ್ಟರೆ ಕೆಲಸ ಸಮರ್ಪಕವಾಗಿ ನಡೆಯುತ್ತದೆ ಎಂದು ಹೇಳುತ್ತೇನೆ.

ಇನ್ನು ಸಹಕಾರ ಸಂಸ್ಥೆಗಳು. ಅನೇಕ ಸಹಕಾರ ಸಂಸ್ಥೆಗಳು ಹುಟ್ಟಿದ ಕೆಲವೇ ವರ್ಷಗಳಲ್ಲಿ ಅವಸಾನ ಕಾಲ ಬಂದಂಥ ಪರಿಸ್ಥಿತಿ ಇವತ್ತಿನ ದಿವಸ ದೇಶದಲ್ಲಿ ಬಹಳ ಎದ್ದು ಕಾಣುತ್ತದೆ. ಕೆಲವರು ತಮ್ಮ ತಮ್ಮ ಜನರ ಹೆಸರಿನಲ್ಲಿ ಮಕ್ಕಳ ಹೆಸರಿನಲ್ಲಿ ಮೊಮ್ಮಕ್ಕಳ ಹೆಸರಿನಲ್ಲಿ ಷೇರ್ ಬಂಡವಾಳ ಹಾಕಿ, ತಮ್ಮ ಹಿತಕ್ಕಾಗಿ ತಮ್ಮದೇ ಆದ ಸೊಸೈಟಿ ಮಾಡಿಕೊಂಡು ಸರಕಾರದಿಂದ ದೊರೆಯುವ ಹಣವನ್ನು ಕಬಳಿಸಿ, ಹಣ ವಾಪಸ್ ಕೊಡದೇ ಇರತಕ್ಕ ನೂರಾರು ಸೊಸೈಟಿಗಳು ಹುಟ್ಟಿವೆ. ಅಂಥ ಸೊಸೈಟಿಗಳ ಅವಸಾನ ಕಾಲ ಸಹ ಬಂದಿವೆ ಎಂದು ಹೇಳಬಹುದು. ಏಕೆಂದರೆ ವಿದ್ಯಾವಂತರಲ್ಲದ ಸದಸ್ಯರುಗಳ ಹೆಸರಿನಲ್ಲಿ ಅರ್ಜಿಗಳನ್ನು ಹಾಕಿ ಹಣ ತಾವೇ ಪಡೆದುಕೊಳ್ಳುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಮೋಸ ನಡೆಯುತ್ತಿದೆ. ಇದನ್ನು ಸರಿಪಡಿಸತಕ್ಕದ್ದು ಮಂತ್ರಿಗಳ ಆದ್ಯ ಕರ್ತವ್ಯವಾಗಿದೆ.

ಇನ್ನು ಮಳೆ ಬೆಳೆಗಳ ಪರಿಸ್ಥಿತಿಯನ್ನು ಪ್ರಸ್ತಾಪಿಸಿ, ಮುಖ್ಯವಾಗಿ ಚಿತ್ರದುರ್ಗ, ತುಮಕೂರು, ಕೋಲಾರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆ ಬೆಳೆಗಳು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ ಎಂದು ರಾಜ್ಯಪಾಲರವರು ಭಾಷಣದಲ್ಲಿ ಹೇಳಿದ್ದಾರೆ. ಯಾವದೇ ವಿಧವಾದ ಶಾಶ್ವತ ಪರಿಹಾರ ಕ್ರಮವನ್ನು ತುಮಕೂರು ಜಿಲ್ಲೆಯಲ್ಲಿ ಸರಕಾರ ತೆಗೆದುಕೊಂಡಿಲ್ಲ. ಹೇಮಾವತಿ ಅಣೆಕಟ್ಟಿನ ಯೋಜನೆಯಿಂದ ಸುಮಾರು ಆರರಿಂದ ಎಂಟು ತಾಲ್ಲೂಕುಗಳಿಗೆ ಅನುಕೂಲವಾಗಿ ಶಾಶ್ವತ ಪರಿಹಾರ ದೊರೆಯುವಂತೆ ಇದೆ. ಈ ಹೇಮಾವತಿ ಯೋಜನೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ನಾವು ಅನೇಕಸಲ ಸರಕಾರಕ್ಕೆ ಮನವಿ ಮಾಡಿಕೊಂಡಿದ್ದೇವೆ. ಆದರೆ ಸರಕಾರ ಸರಿಯಾಗಿ ನಿಗಾ ಕೊಟ್ಟಂತೆ ಕಾಣುವುದಿಲ್ಲ. ಚೆನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೂಕುಗಳಿಗೆ ಅನ್ವಯಿಸುವಂತೆ ಕೆಲಸ ನಡೆಸಲು ಪ್ರಯತ್ನ ಮಾಡುತ್ತಿದ್ದಾರೆ. ಯಾವ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಕೆಲಸ ನಡೆಸುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಇದು ಸರಿಯಲ್ಲ. ಎಂಟು ತಾಲ್ಲೂಕುಗಳಿಗೆ ಅನ್ವಯಿಸುವಂತೆ ಮಾರ್ಪಡಿಸಿ ಯೋಜನೆಯನ್ನು ಆದಷ್ಟು ಕಾರ್ಯಗತ ಮಾಡಬೇಕು. ಈ ಯೋಜನೆಯಿಂದ ಈ ಪ್ರದೇಶದಲ್ಲಿರತಕ್ಕಂಥ ಕ್ಷಾಮ ಪ್ರದೇಶಕ್ಕೆ ಶಾಶ್ವತ ಪರಿಹಾರ ಒದಗಿಸಿಕೊಟ್ಟಂತಾಗುತ್ತದೆ. ಆದುದರಿಂದ ಬೇಗ ಇದನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಈ ಮೂಲಕ ಸರಕಾರಕ್ಕೆ ಒತ್ತಾಯಪಡಿಸುತ್ತೇನೆ.

(ಶ್ರೀ ಬಿ. ಹೆಚ್. ಬೈರಪ್ಪಾಜಿ)

ಈ ಹಿಂದೆ ರಾಜ್ಯಪಾಲರವರು ಭಾಷಣ ಮಾಡಿದ ಕಾಲದಲ್ಲಿ ಏನೇನು ಆಶ್ವಾಸನೆಗಳನ್ನು ಕೊಟ್ಟಿದ್ದಾರೆಯೋ ಅವುಗಳನ್ನು ಈಡೇರಿಸಿದ್ದಾರೆಯೇ ? ಈ ಭಾಷಣದಲ್ಲಿ ಕೊಟ್ಟಿರುವ ಆಶ್ವಾಸನೆಗಳನ್ನು ಇನ್ನು ಮುಂದೆ ಈಡೇರಿಸುತ್ತಾರೆಯೇ ಎನ್ನುವುದನ್ನು ಸರಿಯಾಗಿ ತಿಳಿಸಿದ್ದರೆ ಚೆನ್ನಾಗಿತ್ತು. ಈ ಸಲದ ರಾಜ್ಯಪಾಲರವರ ಭಾಷಣ ಒಂದು ಸೊಸೈಟಿಯ ವಾರ್ಷಿಕ ಆಡಳಿತ ವರದಿಯ ಹಾಗೆ ಇದೆ. ಯಾವ ಯಾವ ಕೆಲಸ ಸಾಧಿಸಿದ್ದಾರೆ, ಏನೇನು ನ್ಯೂನತೆಗಳು ಇವೆ, ಹೇಗೆ ಸರಿಪಡಿಸಿದ್ದಾರೆ ಎಂಬುದನ್ನು ಅನುಮಾನ ಆಗದಂತೆ ಸ್ಪಷ್ಟವಾಗಿ ಈ ಮಹಾ ಸಭೆಗೆ ತಿಳಿಸಬೇಕಾದುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಇನ್ನು ಮುಂದೆಯಾದರೂ ಸರಿಯಾದ ರೀತಿಯಲ್ಲಿ ತಿಳಿಸಬೇಕೆಂದು ಈ ಮೂಲಕ ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟಿರುವ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† **Sri J. P. SARWESH** (Serum).—Mr. Speaker, while welcoming the Address of the Governor, I wish to say a few words regarding the welfare of the backward classes of State. In his speech the Governor was pleased to state :

"It is the endeavour of the Government to raise the level of these Backward Classes to the level of the general community as quickly as possible and the various schemes that are being implemented for their benefit are oriented to achieve this object." We are quite aware of the schemes that are implemented in the villages and talukas of our State. In Taluks with a lakh of population we are distributing to one or two families, one or two bullocks and some chickens. By that we cannot say that we can solve the problem of the Harijans. The Harijans and the Backward Classes are people who are economically enslaved. The first object of the Government should be to release these enslaved people from enconomic exploitation. I want the Government to give proper attention to this problem. My suggestion is that Government must formulate such schemes by which these Harijans and the weaker section of the community will be able to stand on their own legs. In a Taluka, Government should choose ten villages and in those ten villages all the cultivable land should be purchased by Government and entrusted to co-operative societies of which these weaker sections of the community should be the members. By that, Government will be permanently relieving them from exploitation and will bring them to the level of other communities. If that is not done, by merely giving Rs. 50 or 60 we cannot solve this problem and this problem of the economic emancipation of these people will remain as a permanent problem. The schemes that the Government have at present are not at all beneficial to them. These are poor people when they get a grant at the taluk level, even before they reach home they sell away whatever they get and spend the money. Some of us have experience of this. So I suggest that serious attention should be paid to the solution of this problem and such schemes should be adopted which will really help to raise these weaker sections from their present poor condition

Then, Sir, the Scheduled Caste Hostels run by the Social Welfare Department are in a very pitiable condition. There is the Education Department spending crores of rupees on the education of the people. I ask why should the Education Department not provide from their own

budget for the education of Scheduled Castes ? Also the maintenance of these hostels should be handed over to the Education Department from the Social welfare Department which is spending only a very meagre amount on these hostels. Last year they spent only Rs. 50 lakhs and out of that they spent Rs. 38 lakhs for the maintenance of these hostels. That is why I say that it is necessary that these hostels should be taken over from the Social Welfare Department and run by the Education Department.

Then, Sir in my area which happens to be a very backward area, there are no industries at all. The one main industry is the M. S. K. Mills which the Government have financed recently and posted a Managing Director. A majority of the members of the Board have passed a resolution that the present Managing Director should be removed, but I find the same man is kept as Managing Director. He comes to Bangalore and goes back in his own car. He makes very frequent trips to Bangalore and back in his own car and he gets the highest T. A and D. A. in the whole State. Even the Managing Director of Bhadravathi Works does not get so much T. A. and D. A. as the Managing Director of the M. S. K. Mills. There is a motor car belonging to the M. S. K. Mills. They spent nearly Rs. 40,000 for its repair, but he does not use it for his trips to Bangalore and he uses his personal car. The Mills have asked for another loan of Rs. 50 lakhs from Government. In this connection I would suggest that Government should ask them to set things right before giving any loan. Otherwise all the amounts advanced to them would be a waste.

Regarding the cement company at Wadi for which licence has been given to A. C. C. we hear that the company has not come up till now.

In the field of minor irrigation, our area is very backward and it needs special attention. Several times whenever the Minister for Public Works visited the area he said that the Government would give special attention to our area, but unfortunately the roads are in the same primitive condition. As regards irrigation facilities, there are several tanks which need repair. The Deputy Minister promised that he would see that proper attention was given and that funds were provided, but up till now things are as they were and nothing has been done .

Regarding the milk supply scheme sanctioned by Government it is not implemented up till now. Milk schemes were sanctioned for Gulbarga and two other Districts and we hear that the scheme has been implemented in those districts but in Gulbarga it has not yet been implemented.

Regarding hospitals, out of 21 hospitals in our district, 17 hospitals do not have doctors and those hospitals are run by compounders and nurses. We can very well imagine the pitiable condition of the patients in those hospitals . I want that Government should see that prompt attention is given to this problem.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಮೂರುದಿನದಿಂದ ಕಾದದ್ದಕ್ಕೆ ಸಮಯ ಸಿಕ್ಕಿತಲ್ಲ ಸಂತೋಷ * * *

ರಾಜ್ಯಪಾಲರು ಭಾಷಣವನ್ನು ಕನ್ನಡದಲ್ಲಿ ಮಾಡಿದರು, ರಾಜ್ಯಪಾಲರು ದೇಶದ ಆಗುಹೋಗುಗಳನ್ನು ಈ ಸ್ವಾತಂತ್ರ್ಯ ಪಡೆದ ಬಳಿಕ ಒಳ್ಳೆಯ ಕೆಲಸಗಳ ಬಗ್ಗೆ ಭಾಷಣ ಮಾಡಿದ್ದಾರೆಂದು ನನ್ನ ಅನೇಕ ಜನ ಸ್ನೇಹಿತರು ಹೇಳಿದರು. ರಾಜ್ಯಪಾಲರ ಭಾಷಣದ 35 ಪೇಜುಗಳನ್ನು ತಿರುವಿ ಹಾಕಿ ನೋಡಿದರೆ ರಾಜ್ಯದ ಉನ್ನತಿ ಗೋಸ್ಕರವಾಗಿ, ಜನತೆಯ ಕಲ್ಯಾಣಕ್ಕೋಸ್ಕರವಾಗಿ ಒಂದು ವಿಷಯವನ್ನೂ ಮಾತನಾಡಿಲ್ಲ. ಎಲ್ಲಿಯಾದರೂ ಹೊಸ ಕಾರ್ಖಾನೆಗಳನ್ನು ತೆರೆಯುತ್ತಾರೆ, ಹೊಸ ಉದ್ಯಮ ಹೊಂದುವ ದಾರಿಯಲ್ಲಿದ್ದಾರೆ, ಇದರಿಂದ ಜನತೆಯ ಕಲ್ಯಾಣವಾಗುತ್ತದೆ ಎಂದು ಎಲ್ಲಿಯಾದರೂ ಹೇಳಿದ್ದಾರೆಯೆ ?

ಕೆಲವರು ಹೇಳಿದರು : ಇದೊಂದು ಸೊಸೈಟಿ ಬ್ಯಾಲನ್ಸು ಷೀಟು ಎಂದು ಇನ್ನೊಬ್ಬರು ಇನ್ನೊಂದು ತರಹ ಹೇಳಿದರು. ನನ್ನ ಸ್ನೇಹಿತರಾದ ಶ್ರೀ ಗೋಪಾಲಗೌಡರು ಇದು ಒಂದು ಕರಟು ಪುರಾಣ ಎಂದು ಹೇಳಿದರು. ನಾನು ಇನ್ನು ಒಂದು ಹೆಜ್ಜೆ ಮುಂದಕ್ಕೆ ಹೋಗಿ ಹೇಳುತ್ತೇನೆ : ರಾಜ್ಯಪಾಲರು 55 ನಿಮಿಷ ಕಷ್ಟಪಟ್ಟು ಓದಿದ ಭಾಷಣವನ್ನು ನಾನು ಕೇಳಿದೆ; ಕೇಳುತ್ತಾ ಕೇಳುತ್ತಾ ಕೆಲವರು ಅಲ್ಲಲ್ಲಿ ಹಾಗೆ ಕಣ್ಣುಮುಚ್ಚಿ ನಿದ್ದೆ ಮಾಡಿಬಿಟ್ಟರು, ಅಷ್ಟು ಅಪ್ಯಾಯಮಾನವಾಗಿತ್ತು. ಜತ್ತಿಯವರ ಭಾಷಣ ಕೇಳಿ ಹೃದಯ ವಿಘಾತವಾಗಿ ಹೋಯಿತು.

5-00 P. M.

[MR. SPEAKER in the Chair]

ಏಕೆಂದರೆ ಇವರು ಹೇಳಿದ್ದರಲ್ಲೂ ಸ್ವಾರಸ್ಯವಿಲ್ಲ, ನೀರಸವೂ, ನಿರಾಧಾರವೂ ಇದ್ದದರ ಜೊತೆಗೆ ಜನತೆಯನ್ನು ನಿರ್ಲಕ್ಷದಿಂದ ಕಂಡಂಥ ಭಾವನೆಯಿಂದ ಕೂಡಿತ್ತು. ಹೊಕ್ಕು ತಿನ್ನುತ್ತಾ ಇದ್ದವನನ್ನು ಹಳೆಯ ಹಣಸೆಹಣ್ಣು ಕೊಡು ಎಂದು ಕೇಳುವುದಕ್ಕೆ ಹೋದರು ಎಂದು ಹೇಳುತ್ತಾರೆ. ಬಯಕೆ ಆಗುತ್ತದೆ ಎಂದು ಹೊಕ್ಕು ತಿನ್ನುತ್ತಾ ಇರತಕ್ಕ ಈ ಸರಕಾರದ ಮುಂದೆ ಎರಡು ಕೋಟಿ ಜನ ಹಳೆ ಹುಣಸೆಹಣ್ಣನ್ನು ಕೇಳುತ್ತಾ ಇದ್ದಾರೆ. ಅಂತಹ ಬಯಕೆ ಆಗುತ್ತಾ ಇದೆ, ಇದು ನಾಚಿಕೆಗೇಡು. ಇದನ್ನು ಏಕೆ ಹೇಳುತ್ತೇನೆ ಎಂದರೆ ಈ ದೇಶದಲ್ಲಿ ನಡೆದು ಹೋದ ಮುಖ್ಯಾಪಾರದುರವ್ಯವಹಾರ ಒಂದನ್ನೂ ಗಮನದಲ್ಲಿಟ್ಟುಕೊಳ್ಳದೇ ಆಡುವವರು ಆಡಿಕೊಂಡರೂ ಚಿಂತೆ ಇಲ್ಲ ಹೋಗುವ ದಾರಿಯಲ್ಲಿ ಹೋಗಿ, ಮಾಡಿಕೊಳ್ಳಬೇಕಾದ್ದನ್ನು ಮಾಡಿಕೊಳ್ಳಬೇಕೆಂದು ಸರಕಾರ ಹೊರಟರೆ ದೇಶದ ಜನತೆಯ ಕಲ್ಯಾಣ ಹೇಗೆ ಆಗುತ್ತದೆ ಎಂದು ಕೇಳುತ್ತೇನೆ. ಸ್ವಾಮಿ, ನಮ್ಮ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದ್ಯಾದಂತ ಕುಡಿತದಿಂದ ಜನ ಕೆಟ್ಟಿದ್ದಾರೆ ಅದರಿಂದ ಭಟ್ಟಿ ಶರಾಬು ಕುಡಿದು ಪ್ರಾಣ ಹಾನಿ ಆಗುತ್ತಿದೆ ಆದ್ದರಿಂದ ಪಾನನಿರೋಧವನ್ನು ಸ್ವೀಕರಿಸಿ ಮಾಡಿ ಎಂದು ಹೇಳಿದರೆ ನನ್ನ ಸರಕಾರ ಪಾನನಿರೋಧದ ವಿಚಾರದಲ್ಲಿ ಈ ನೀತಿ ಅನುಸರಿಸುತ್ತದೆ ಎಂದು ಎಲ್ಲಾದರೂ ಇದೆಯೇ ?

ಆಮೇಲೆ ಅವರ ಭಾಷಣದಲ್ಲಿ ಭೂಸುಧಾರಣೆ ಈ ಸಭೆಯಲ್ಲಿ ತೀರ್ಮಾನವಾಯಿತು ಎಂದು ಬರೆದಿದ್ದಾರೆ. ಏನು ತೀರ್ಮಾನವಾಯಿತು ? ಯಾರು ಏನಾದರು ? ಏನೂ ಗೊತ್ತಿಲ್ಲ. ಕನ್ನಡ ಭಾಷೆ ಏನೋ ಬಂತು. ಅವರು ಮಾಡಿದ ಭಾಷಣ ಏನು ? ಅದನ್ನು ಏನೆಂದು ತಿಳಿದುಕೊಂಡು ಅದರ ಮೇಲೆ ಭಾಷಣ ಮಾಡಲಿ, ಜನತೆ ಏನೆಂದು ತಿಳಿದುಕೊಂಡಿದೆ ಎಂಬುದು ಒಂದೂ ಗೊತ್ತಾಗುತ್ತಾ ಇಲ್ಲ.

Mr. SPEAKER.—Did the Hon'ble Member make any personal allegation against the Governor or any insinuation against him ?

Sri C. J. MUCKANNAPPA.— Absolutely nothing, Sir.

Mr. SPEAKER.—I will have it examined.

Sri C. J. MUCKANNAPPA.—Where? * * *

Mr. SPEAKER.—The Hon'ble Member must remember that the Governor is a constitutional head and reflection should not be made against the Governor.

Sri C. J. MUCKANNAPPA.—It is not a reflection. I am just telling what is going on.

---

* * * Expunged as ordered by the Chair.

Mr. SPEAKER.—If the Hon. member says the Government is so, I do not mind because the Government will defend itself and the tradition of very good House is that no reflection should be made upon the Governor. * * *

Sri C. J. MUCKANNAPPA.—Please go through the proceedings as to what I have said.

Mr SPEAKER.—That is why I called upon the member first to say if he has done so.

Sri C. J. MUCKANNAPPA.—The Chair must see in what context I have said.

Mr. SPEAKER.—Whatever might be the context, I can conceive of no context wherein personal motive could be attributed to Governor.

Sri C. J. MUCKANNAPPA.—* * * *

Mr. SPEAKER.—* * * *

Sri C J. MUCKANNAPPA.—As head of the State.

Mr. SPEAKER.—As Head of the State he is a Constitutional Head.

Sri C. J. MUCKANNAPPA.—There is nothing personal against Sri Jayachamaraja Wadiyar.

Mr. SPEAKER.—Nor do the member hold any such feelings against him ?

Sri C. J. MUCKANNAPPA.—I cannot say that here. I cannot say what I am feeling. My feelings may be different.

Mr. SPEAKER.—I have no concern about the feelings the member expresses outside.

Sri C. J. MUCKANNAPPA.—I have not expressed anything against the Constitutional Head.

ಸ್ವಾಮಿ, ಇಷ್ಟಾದಮೇಲೆ ಈ ರಾಜ್ಯಪಾಲರ ಭಾಷಣದಲ್ಲಿ ಯಾವುದಾದರೂ ಒಂದು ವಲಯದ ಬಗ್ಗೆ ಒಂದು ಹೊಸ ಬೆಳಕನ್ನು ಚೆಲ್ಲಿದೆಯೇ, ಅಂತಹ ಯಾವುದಾದರೂ ಒಂದು ಹೊಸ ಕಾರ್ಯ ಮಾಡುತ್ತೇವೆ, ಹೊಸ ನೀತಿಯನ್ನು ಅನುಸರಿಸುತ್ತೇವೆ ಹೊಸರೀತಿಯನ್ನು ಅನುಸರಿಸುತ್ತೇವೆ ಎಂಬುದನ್ನು ಏನಾದರೂ ಹೇಳಿದ್ದಾರೆಯೇ ಎಂದರೆ ಏನೇನೂ ಇಲ್ಲ. ಇದಕ್ಕೆ ಏನೆಂದು ಕರೆಯಬೇಕು ? ಈ ಭಾಷಣವನ್ನು ರಾಜ್ಯಪಾಲರಿಂದ ಮಾಡಿಸುವುದಕ್ಕೆ ಮುಂಚೆ, ಇದಕ್ಕೆ ನಾಲ್ಕು ದಿನ ಕಳೆಯುವುದಕ್ಕೆ ಮುಂಚೆ ಇದನ್ನು ಬೇಕಾದರೆ ಸರಕಾರದವರು ತಿದ್ದುಪಡಿಮಾಡಿ ಬಡ್ಜೆಟ್ ಮೇಲೆ ಏನು ಭಾಷಣ ಮಾಡುತ್ತೀರಿ ಅದರ ಮೇಲೆ ಈ ವಿಷಯಗಳನ್ನು ಚರ್ಚೆಮಾಡಿ ಎಂದು ಹೇಳಿ ಆಗಲೇ ಒಂದು ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಇದರಲ್ಲಿ ಯಾವುದಾದರೂ ಒಂದುಕಡೆ ಈ ರೀತಿ ಮಾಡಬೇಕೆಂದಿದ್ದೇವೆ ಎಂದು ಹೇಳಿರುವುದನ್ನು ತೋರಿಸಿ ಕೊಡುತ್ತೀರಾ ? ನನ್ನ ಸರಕಾರ ಇಂತಹ ಒಳ್ಳೆಯ ಕೆಲಸ ಮಾಡಿದೆ ಎಂಬುದನ್ನು ಹೇಳುವುದೇ ಇದರ ಉದ್ದೇಶವಾಗಿದ್ದ ಪಕ್ಷದಲ್ಲಿ, ಕೇರ್ ಸಂಸ್ಥೆಯವರು ಮಾಡಿದ ಸಹಾಯವನ್ನು ವಿದ್ಯಾ ಮಂತ್ರಿಗಳು ಅವರ ಉತ್ತರದಲ್ಲಿ ಹೇಳುತ್ತಾರೆ. ಹಣಕಾಸಿನ ವಿಚಾರದಲ್ಲಿ ಹಣಕಾಸಿನ ಮಂತ್ರಿಗಳು ಹೇಳುತ್ತಾರೆ. ಸೊಸೈಟಿಗಳ ವಿಷಯ ಕೋ-ಆಪರೇಟೀವ್ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳುತ್ತಾರೆ. ಇದಕ್ಕೆ 3-4 ದಿವಸ ಕಾಲಹರಣ ಮಾಡುವುದಕ್ಕಿಂತ ಮುಂಚೆ ಇದರ ರೀತಿ ನೀತಿಯನ್ನು ಬದಲಾವಣೆ ಮಾಡುವುದು ಸರಿಯೆಂದು ಕಾಣುತ್ತದೆ. ಇದನ್ನು ಯೋಚನೆ ಮಾಡಬೇಕೆಂದು ಸರಕಾರದವರನ್ನು ತಮ್ಮ ಮುಖಾಂತರ ಕೇಳುತ್ತಾ ಇದ್ದೇನೆ.

ಪಾನನಿರೋಧದ ವಿಚಾರವನ್ನು ತೆಗೆದುಕೊಳ್ಳೋಣ, ಅಲ್ಲಿ ಏನು ಮಾಡಿದ್ದಾರೆ ಎಂದರೆ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಓಡಾಡುತ್ತಾ ಇದ್ದಾರೆ. ಶರಾವತಿಯಲ್ಲಿ ಹಣ ಪೋಲಾಗಿದೆ ಎಂದರೆ ಕೆ. ಎಲ್. ರಾವ್ ಅವರ ಹತ್ತಿರ ಹೋಗಿ ಎಲ್ಲಾ ಸರಿಯಾಗಿದೆ ಎಂದು ಹೇಳಿ ಅವರಿಂದ ಸರ್ಟಿಫಿಕೇಟ್ ತೆಗೆದುಕೊಂಡು ಬರುತ್ತೀರಿ. ಖಾದಿ ಬೋರ್ಡಿನಲ್ಲಿ ಹಣ ಪೋಲಾಗಿದೆ ಎಂದು

---

* * * Expunged as ordered by the Chair.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹೇಳಿದರೆ ಖಾದಿ ಕಮಿಷನ್ ಅವರ ಹತ್ತಿರ ಹೋಗಿ ಎಲ್ಲಾ ಸರಿಯಾಗಿದೆ ಎಂದು ಹೇಳಿ ಪ್ರೆಸ್ ಸ್ಟೇಟ್‌ಮೆಂಟ್ ಕೊಡಿಸುತ್ತೀರಿ, ಅಲ್ಲಿ ನಡೆಯುವುದಕ್ಕೆ ಯಾವುದಕ್ಕೂ ಲೆಕ್ಕಪತ್ರಗಳೇ ಇಲ್ಲ ಎಂದರೆ ನಾಯಿ ಕೊಂಡುಕೊಂಡಿದ್ದೇವೆ, ಕತ್ತೆ ಕೊಂಡುಕೊಂಡಿದ್ದೇವೆ ರಶೀತಿ ಇದೆ ಎಂದು ಹೇಳುತ್ತೀರಿ. ಇದಕ್ಕೆ ತಕ್ಕ ಸಾಕ್ಷಿ, ಸಾಹಿತ್ಯ ಹೇಳಬೇಕಾದರೆ ಒಂದು ಪಬ್ಲಿಕ್ ಕೋರ್ಟ್ ಕಾನ್‌ಸ್ಟಿಟ್ಯೂಟ್ ಮಾಡಿ ಆಗ ಅಲ್ಲಿ ಏನೇನು ಅನ್ಯಾಯ ನಡೆದಿದೆ ಎಂಬುದು ಅರ್ಥವಾಗುತ್ತದೆ. ಕೇಂದ್ರ ಸರಕಾರದವರು ತಮ್ಮ 17 ವರ್ಷಗಳ ಅನುಭವದಲ್ಲಿ ರಾಜ್ಯದಲ್ಲೆಲ್ಲಾ ಭ್ರಷ್ಟಾಚಾರ ಜಾಸ್ತಿಯಾಗಿದೆ, ಅದನ್ನು ಏನಾದರೂ ಮಾಡಿ ಮೂಲೋತ್ಪಾಟನೆ ಮಾಡಬೇಕು ಎಂದು ಹೇಳ ಹೊರಟಿದ್ದಾರೆ. ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳನ್ನೇ ಮನೆಗೆ ಕಳುಹಿಸಿದ್ದಾರೆ. ಅವರ ಪ್ರೈವೇಟ್ ಸೆಕ್ರೆಟರಿಗಳ ಮೇಲೆ ಕಾನೂನಿನ ಪ್ರಕಾರ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಒರಿಸ್ಸಾ ಮಂತ್ರಿಮಂಡಲವೇ ಬದಲಾವಣೆಯಾಯಿತು. ಕೇರಳದ ಗೃಹ ಮಂತ್ರಿ ಚಾಕೋ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋದರು. ಎಲ್ಲಿ ಯಾವ ಕೆಲಸವನ್ನು ಚೆನ್ನಾಗಿ ಮಾಡುತ್ತಾ ಇದ್ದೀರಿ ಎಂಬುದನ್ನು ತೋರಿಸಬೇಕಾದರೆ ಯಾವ ಕನ್ನಡಿ ಮುಂದೆ ತೋರಿಸಬೇಕು ಎಂಬುದು ಗೊತ್ತಾಗುತ್ತಾ ಇಲ್ಲ. ನಾಲ್ಕು ಕೋಟಿ ರೂಪಾಯಿಗಳ ಲೆಕ್ಕ ಖಾದಿ ಬೋರ್ಡಿನಲ್ಲಿ ಇಲ್ಲ ಎಂದರೆ ಅದನ್ನು ಹೊಸದಾಗಿ ಬರೆಸುತ್ತೇವೆ ನಿಮ್ಮ ಕೈಯಲ್ಲಿ ಕೊಡುತ್ತೇವೆ ಎಂದು ಹೇಳಿದ ಸರಕಾರದಲ್ಲಿ ಎಷ್ಟು ಮಟ್ಟಿಗೆ ನೀತಿ ಪತನವಾಗಿದೆ ಎಂಬುದನ್ನು ತಾವೇ ಅರ್ಥಮಾಡಿಕೊಳ್ಳಿ. ಶರಾವತಿಯಲ್ಲಿ ಹಣ ದುರ್ವ್ಯಯವಾಗಿದೆ, ಅದನ್ನು ಒಪ್ಪಿಕೊಳ್ಳಿ, ಕಾನ್‌ಫಿಡೆನ್‌ಷಿಯಲ್ ಆಗಿ ನೋಡಿ ಎಂದು ಹೇಳಿದರೆ ಅದಕ್ಕೆ ಒಂದು ವೈಟ್ ಪೇಪರ್ ಕೊಡುತ್ತೇವೆ ಎಂದು ಹೇಳಿ ಮೂರು ದಿವಸ ಆದಮೇಲೆ ವೈಟ್ ಪೇಪರ್ ವಿತ್ ಬ್ಲೂ ಕಲರ್ ಕೊಟ್ಟಿದ್ದೀರಲ್ಲಾ; ಏನು ಮಾಡಿದ್ದೀರಿ ಎಂದು ಕೇಳುತ್ತೇನೆ? ಶ್ರೀಮಾನ್ ಜತ್ತಿಯವರು ಭಾಷಣ ಮಾಡುತ್ತಾ,

> "We may go before the Government of India for a temporary accommodation of money".

ಎಂದು ಹೇಳಿದರು. ಬ್ಯಾಂಕ್ ಬ್ಯಾಲೆನ್ಸ್ ಎಷ್ಟಿದೆ, ಬೇಕಾದ ಹಣ ಎಷ್ಟು ಎಂಬುದನ್ನು ಕೇಳಿದರೆ ಪ್ಲಾನ್‌ಗೆ ಖರ್ಚುಮಾಡುವುದಕ್ಕೆ ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಪ್ಲಾನ್‌ಗಾಗಿ ಖರ್ಚು ಮಾಡುವುದಕ್ಕೆ ನಮ್ಮ ಹತ್ತಿರ ಹಣ ಇದ್ದಿದ್ದರೆ ಯಾವತ್ತೂ ಓವರ್ ಡ್ರಾಫ್ಟ್ ಮಾಡುತ್ತಾ ಇರಲಿಲ್ಲ.

Mr. SPEAKER.—Do as the member propose to participate in the Debate on the Budget?

Sri C. J. MUCKANNAPPA.—I do not want to develop the point further. Regarding, why I was compelled to mention that point regarding Finances was that he was so jubilant when he was reading out the longest speech possible. ಖಾದಿ ಬೋರ್ಡ್ ಹಣ ಏನಾಯಿತು? ಶರಾವತಿ ಹಣ ಏನಾಯಿತು? ಇನ್‌ಫೆಂಟ್ರಿ ರೋಡ್‌ನಲ್ಲಿ ಒಂದು ಉಣ್ಣೆ ಕಂಪೆನಿ ಇದೆ ಅದರ ಯಜಮಾನರು ಒಬ್ಬರು ಮುಂಧ್ರಾ ಇದ್ದಾರೆ ಅವರ ಹತ್ತಿರ ಏನು ವ್ಯವಹಾರ ಮಾಡಿದ್ದೀರಿ ಎಂದರೆ ಅದಕ್ಕೆ ಉತ್ತರವೇ ಇಲ್ಲ. ಆ ಸೊಸೈಟಿಯವರು ಏನು ಅಬ್‌ಜೆಕ್ಷನ್ ಇದೆಯೋ ಅದಕ್ಕೆ ಉತ್ತರ ಕೊಡುತ್ತಾರೆಯೇ ಹೊರತು, ಆಡಿಟ್ ರಿಪೋರ್ಟನ್ನು ಕೊಡುವುದೇ ಇಲ್ಲ. ಇಂಡಿಯಾ ಸರಕಾರದವರ ಗ್ರ್ಯಾಂಟ್ ಬರುತ್ತದೆ, ಮೈಸೂರು ಸರಕಾರದವರು ಹಣ ಕೊಡುತ್ತಾರೆ, ಖಾದಿ ಕಮಿಷನ್ ಅವರು ಹಣ ಕೊಡುತ್ತಾರೆ ಅದಕ್ಕೆ ಅಧ್ಯಕ್ಷರು ಯಾರು ಎಂದರೆ ಮೈಸೂರು ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರು, ಯಾರಿಗೂ ಯಾವುದರಲ್ಲೂ ಕಡಿಮೆ ಇಲ್ಲದವರು, ಮೈಸೂರು ಕಾಂಗ್ರೆಸ್‌ನ ಆಡಳಿತದಲ್ಲಿ ಇರತಕ್ಕ ಪಕ್ಷದ ಆ ಸಂಸ್ಥೆಯ ಉಪಾಧ್ಯಕ್ಷರಾದ ಒಬ್ಬರು ಅಲ್ಲಿ ಇದ್ದುಕೊಂಡು ನಾಲ್ಕು ವರ್ಷಗಳಿಂದ ಎರಡು ಲಕ್ಷ ಹದಿನಾರು ಸಾವಿರ ರೂಪಾಯಿಗಳನ್ನು ಅನಾಮತ್ತು ಲೆಕ್ಕದಿಂದ ಹೊರಗೆ ಇಟ್ಟು ಖರ್ಚು ಮಾಡಿದ್ದಾರೆ.

ಸೆಂಟ್ರಲ್ ವುಲನ್ ಕೋಆಪರೇಟಿವ್ ಸೊಸೈಟಿ ತಮಗೆ ಹಣ ಕೊಟ್ಟಿಲ್ಲ ಎಂದು ಪೋಲೀಸಿಗೆ ದೂರು ಕೊಟ್ಟು ಮೋಸ ಮಾಡಿದ್ದಾರೆಂದು ಹೇಳಿಕೆ ಕೊಟ್ಟಿದ್ದಾರೆ. ಇದಕ್ಕೆಲ್ಲಾ ಅವಕಾಶ ಕೊಟ್ಟಿರುವ ಕಾಂಗ್ರೆಸ್ಸಿನವರನ್ನು ಏನೆಂದು ಕರೆಯಬೇಕು? ಇವರು ದೊಡ್ಡ ಕ್ರಿಮಿನಲ್ಸ್, ಕ್ರೈಮ್ಸ್ ಮಾಡುವುದಕ್ಕೆ ಅಬೆಟ್ ಮಾಡುತ್ತಿದ್ದಾರೆ; ಆದುದರಿಂದ ಇವರನ್ನು ಅಬೆಟರ್ಸ್ ಎಂದು ಕರೆಯಬೇಕು. ಈ ವಿಚಾರದಲ್ಲಿ ಇವರು ಕ್ರಮವೇನು ಕೈಕೊಂಡಿದ್ದಾರೆ? ಎರಡು ಸಾವಿರ ರೂಪಾಯಿಗಳನ್ನು ತಿಂದು ಸುಳ್ಳು ರಶೀತಿ ಕೊಟ್ಟವನನ್ನು ಹಿತ್ತಿಲು ಬಾಗಿಲಿನಿಂದ ಮೆಂಬರು ಮಾಡಬೇಕೆಂದು ಹೊರಟಿದ್ದಾರೆ.

ಹಿಂದೆ ಹಣಕಾಸಿನ ಸಚಿವರು ಒಬ್ಬ ಅಡಿಟರನ್ನು ನೇಮಿಸುತ್ತೇವೆ, ಸಬ್ಸಿಡಿ, ರಿಬೇಟ್ ನಿಲ್ಲಿಸುತ್ತೇವೆ ಎಂದು ಹೇಳಿದರು. ಯಾರಿಗೆ ರಿಬೇಟು ಕೊಡುತ್ತಾರೆ, ಯಾರಿಗೆ ಸೌಲತ್ತು ಕೊಡುತ್ತಾರೆ ಎಂದು ಯಾರು ನೋಡುತ್ತಾರೆ? ಇನ್ನೊಂದೇನೆಂದರೆ ನೆಯ್ಗೆಯವರಿಗೆ ಯಾವ ಸೊಸೈಟಿ ಮಾಡಿದರೂ ಅದರಿಂದ ಅವರಿಗೆ ಅನುಕೂಲವಾಗುತ್ತಿಲ್ಲ. ಆಂಧ್ರ ಪ್ರದೇಶದಿಂದ ಲಕ್ಷಾಂತರ ರೂಪಾಯಿಗಳ ಕಂಬಳಿ ಕೊಂಡರೆ ಅವರ ಗತಿಯೇನು ? ಇದಕ್ಕೆಲ್ಲಾ ಖಾದಿ ಬೋರ್ಡ್‌ಗೆ ಕೇಂದ್ರ ಸರ್ಕಾರ ಹಣ ಕೊಡುವುದಾದರೆ ಅದಕ್ಕಿಂತ ಬೇರೆ ಅಪರಾಧವಿದೆಯೆ ? ಇಂಥ ಜಯಪ್ರಕಾಶ ನಾರಾಯಣರಂಥವರನ್ನು ತಡೆಯದಿದ್ದರೆ ದೇಶಕ್ಕೆ ನಿಜವಾಗಿಯೂ ಹಾನಿ. ಅವರನ್ನು ತಡೆಗಟ್ಟದೆ ಅವರಿಗೆ ಹೆದರುವುದಾದರೆ ಬಹಳ ಅನಾಹುತವಾಗುತ್ತದೆ. ಸೊಸೈಟಿಗಳಲ್ಲಿರುವ ಹಗ್ಗಣಗಳನ್ನು ಸದೆಬಡಿಯದಿದ್ದರೆ, ಮರ್ದನಮಾಡದಿದ್ದರೆ ಈ ದಿವಸ ಮಂತ್ರಿಗಳೆಲ್ಲಾ ಭಾಷಣಮಾಡುವುದು ಬರೀ ಭಾಷಣವಾಗುತ್ತದೆಯೇ ಹೊರತು ದೇಶಕ್ಕೆ ಕಲ್ಯಾಣವಾಗುವುದಿಲ್ಲವೆಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ಒಂದು ಬ್ಯಾಂಕಿನಲ್ಲಿ ತಿಮ್ಮನ ಆಸ್ತಿಯಮೇಲೆ ಬೊಮ್ಮನಿಗೆ ಸಾಲ ಕೊಟ್ಟಿದ್ದಾರೆ. ಒಂದು ಲಕ್ಷ ಹದಿನಾಲ್ಕು ಸಾವಿರ ರೂಪಾಯಿಗಳ ಕ್ಯಾಷ್ ಒಂದು ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ ಕಡಮೆಯಿರುವಾಗ ಸಹಕಾರ ತತ್ವ ಹೇಗೆ ಬೆಳದೀತು ? ರೈತರಿಗೆ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲ ಎಂದು 18 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಸಾಲ ಕೊಡಲು ಹಣ ಎಲ್ಲಿ ತಂದಿರಿ ? ನಿಮ್ಮ ಪಂಚಾಯಿತಿಗಳಿಗೆ, ಬ್ಯಾಂಕುಗಳಿಗೆ ಹಂಚಿಕೆ ಮಾಡಲು ಹಣ ತಂದು ಲಕ್ಷಾಂತರ ರೂಪಾಯಿಗಳನ್ನು ಪೋಲುಮಾಡಿದರೆ ಸರ್ಕಾರಕ್ಕೆ ಜವಾಬ್ದಾರಿಯಿಲ್ಲವೇ ? ಅಪೆಕ್ಸ್ ಬ್ಯಾಂಕ್, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್, ಡಿಸ್ಟ್ರಿಕ್ಟ್ ಬ್ಯಾಂಕ್, ಖಾದಿಬೋರ್ಡ್ ಮುಂತಾದುವುಗಳಿಗೆ ಕೊಡುವ ಹಣದಮೇಲೆ ಈ ಸಭೆಗೆ ಅಧಿಕಾರವಿದೆ. ಆ ಸಂಸ್ಥೆಗಳು ಸರಿಯಾಗಿ ಕೆಲಸಮಾಡದಿದ್ದರೆ ತಕ್ಕ ಬಂದೋಬಸ್ತು ಮಾಡಬೇಕು. ಹಾಗೆ ಮಾಡದಿದ್ದರೆ ಸರ್ಕಾರಕ್ಕೆ ಕೀರ್ತಿ ಬರುವುದಿಲ್ಲ. ಇವತ್ತು ರಾಜ್ಯಪಾಲರ ಭಾಷಣದಲ್ಲಿ ಸಹಕಾರ ಸಂಘಗಳು ಸಕ್ಕರೆಯನ್ನು ಹಂಚುತ್ತಿವೆ ಎಂದು ತಿಳಿಸಿದ್ದಾರೆ. ಆದರೆ ಬೆಳಗಾದರೆ ಇಂಥ ಸೊಸೈಟಿ ಇಷ್ಟು ಮೊಬಲಗು ದುರುಪಯೋಗ ಮಾಡಿದೆ ಎಂದು ಹೇಳುತ್ತಿರುತ್ತಾರೆ. ಸಕ್ಕರೆ ವ್ಯವಹಾರ, ಸ್ಟೇಟ್ ಮಾರ್ಕೆಟಿಂಗ್ ಕಮಿಟಿ ವ್ಯವಹಾರ, ಹ್ಯಾಂಡ್‌ಲೂಂಬೋರ್ಡಿನ ಸ್ಥಿತಿ ಏನಾಗಿದೆ ಎಂಬುದನ್ನು ಗಮನಿಸಬೇಕು. ನೆಯ್ಗೆಯವರಿಗೆ ಸಹಾಯ ನೀಡಬೇಕಾದ್ದು ಅವಶ್ಯಕ. ಆದರೆ ಮಧ್ಯವರ್ತಿ ಜನರು ಹಣ ತಿನ್ನುತ್ತಿದ್ದಾರೆ. ಅದನ್ನು ಹಿಡಿದು ಬಂದೋಬಸ್ತು ಮಾಡಿದರೆ ನಾವು ಹೇಳುವುದಕ್ಕೆ ಗಮನ ಕೊಟ್ಟರೆ ಸಹಕಾರ ಮಾಡಬಹುದು. ಹಾಗೆ ಮಾಡದೆ ಸುಮ್ಮನೆ ಮಾತನಾಡುತ್ತಿದ್ದರೆ ನಾವು ಹೇಗೆ ಸಹಕಾರ ನೀಡುವುದು ? ದೇಶದಲ್ಲಿ ಕ್ರೆಡಿಟ್ ಸೊಸೈಟಿ, ಸರ್ವಿಸ್ ಸೊಸೈಟಿ, ಮಲ್ಟಿಪರ್ಪಸ್ ಸೊಸೈಟಿ, ಕನ್‌ಸ್ಯೂಮರ್ ಸೊಸೈಟಿ ಮುಂತಾದುವೆಲ್ಲಾ ಇವೆ. ಬಾರ್ಬರ್ಸ್‌ಗಾಗಿ ಒಂದು ಸೊಸೈಟಿ ಏಕೆ ಮಾಡಬಾರದು ? ಒಂದೊಂದು ಪಂಚಾಯಿತಿಗೆ ಸಂಬಂಧಪಟ್ಟಂತೆ ಒಂದು ಕೋಆಪರೇಟಿವ್ ಷೇವಿಂಗ್ ಸೆಲೂನ್ ಏಕೆ ಮಾಡಬಾರದು ? ಒದಗಿಸುವ ಹಣ ಎಲ್ಲಿ ಹಾಳಾಗಿಹೋಗುತ್ತಿದೆ? ಕೆ. ಎಚ್. ರಾಮಯ್ಯನವರು ಒಳ್ಳೆಯ ಬುನಾದಿಯಿಂದ ಸಹಕಾರ ಕಟ್ಟಬೇಕೆಂದು ತಾವು ಯೋಚನೆ ಮಾಡುವುದಕ್ಕೆ ಮುಂಚೆ ಸಹಕಾರ ಪದ್ಧತಿಯನ್ನು ಜಾರಿಗೆ ತಂದರು. ಅದನ್ನು ಬೃಹದಾಕಾರವಾಗಿ ಬೆಳೆಸಿದಮೇಲೆ ನ್ಯೂನತೆಯಿರುವುದನ್ನು ಸರಿಪಡಿಸಬೇಕು ಎಂದು ಕಟುವಾಗಿ ಹೇಳಬೇಕಾಗಿದೆ. ನಾನು ಯಾವುದೇ ವಿಚಾರದಲ್ಲಿ ವೈಯಕ್ತಿಕವಾಗಿ ಟೀಕೆ ಮಾಡುತ್ತಿಲ್ಲ. ಬಳ್ಳಾರಿ ಜಿಲ್ಲೆಯ ಒಂದು ಸ್ಪಿನಿಂಗ್ ಪ್ಲಾಂಟ್ ತಂದು ರಾಯಚೂರಿನಲ್ಲಿ ಇನ್‌ಸ್ಟಾಲ್ ಮಾಡಿ 6 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಡ ಕಟ್ಟಿ 50 ಸಾವಿರ ರೂಪಾಯಿ ಸಬ್ಸಿಡಿ ಕೊಟ್ಟರು. ಅದಕ್ಕೆ ಅಂದಾಜಿಲ್ಲ, ಬ್ಲೂಪ್ರಿಂಟಿಲ್ಲ. ಈ ಕಂಪನಿಯಲ್ಲಿ ಒಬ್ಬರು ಡೆಪ್ಯುಟಿ ರಿಜಿಸ್ಟ್ರಾರರಿದ್ದಾರೆ, ಅವರು ನೋಡಿಕೊಳ್ಳುತ್ತಾರೆಯೆ ಎಂದರೆ ಅದಕ್ಕೆ ಉತ್ತರವಿಲ್ಲ. ಎಂ.ಪಿ.ಸಿ.ಸಿ. ಅಧ್ಯಕ್ಷರನ್ನು ಎದುರಿಸಲು ಸರ್ಕಾರಕ್ಕೆ ಸಾಧ್ಯವಿಲ್ಲ ಎಂದು ತೋರುತ್ತದೆ. ರಾತ್ರಿ 12 ಗಂಟೆಯಲ್ಲಿ ಒಂದು ಡ್ರಾಫ್ಟ್ ಬರೆದುಕೊಂಡು ಬನ್ನಿ ಎಂದರೆ ಬರೆದುಕೊಂಡು ಹೋಗಬೇಕು. ಮುಂಧ್ರ ವ್ಯವಹಾರವನ್ನೇ ಬಿಡದಿರುವಾಗ ಈ ಸಣ್ಣ ರಾಜ್ಯದಲ್ಲಿ ಟೋಪಿ ಹಾಕುವವರಿಗೆ ಹೆದರಿದರೆ ಹೇಗೆ ? ಇದನ್ನೆಲ್ಲಾ ಸರಿಯಾಗಿ ನೋಡದೆ ಲಕ್ಷಾಂತರ ರೂಪಾಯಿಗಳನ್ನು ಚರಂಡಿಗೆ ಹಾಕುವುದು ಸರಿಯೆ ? ಸರ್ಕಾರ ಇದನ್ನು ಯೋಚನೆ ಮಾಡಬೇಕು.

ರಾಷ್ಟ್ರೀಕರಣ ಮಾಡಬೇಕೆಂದು ಪದೇ ಪದೇ ಹೇಳುತ್ತಾರೆ. ಅದಾಗಬೇಕು. ವೆಸ್ಟೆಡ್ ಇಂಟರೆಸ್ಟ್ ಇರುವವರು ಇಲ್ಲೂ ದೆಹಲಿಯಲ್ಲೂ ಇದ್ದಾರೆ. ಅವರು ಎಲ್ಲಾದರೂ ಇರಲಿ, ಸಂಚಾರ ಹತೋಟಿಯನ್ನು, ರಾಷ್ಟ್ರೀಕರಣವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು. ರಾಜ್ಯಭಾರವನ್ನು ಸರಿಯಾಗಿ ನಡೆಸದಿದ್ದರೆ, ಡ್ರೈವರುಗಳು, ಕಂಡಕ್ಟರುಗಳು ಮನಸ್ಸು ಬಂದಹಾಗೆ ನಡೆಯುತ್ತಿದ್ದರೆ, ಸ್ಟ್ರೈಕ್ ಮಾಡಿ, ಮಧ್ಯೆ ಗಾಡಿ ನಿಲ್ಲಿಸಿದರೆ ಜನರಿಗೆ ತೊಂದರೆಯಾಗುವುದಿಲ್ಲವೆ ? ಸರ್ಕಾರಕ್ಕೆ ದಕ್ಷತೆಯಿಲ್ಲದಿದ್ದರೆ ಏನು ತಾನೆ ನಡೆಸುವುದೋ ಅರ್ಥವಾಗುವುದಿಲ್ಲ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನೀವು ಸರಿಯಾದ ಆಡಳಿತ ಮಾಡುವ ಹಾಗಿದ್ದರೆ ಆಡಳಿತ ಮಾಡಿ, ಇಲ್ಲವೇ ಹೋದರೆ ನಿಮ್ಮ ಮನೆಗೆ ಹೋಗಿ, ನಿಮ್ಮ ಕುಟುಂಬದವರೊಡನೆ ನಮ್ಮ ಕೈಯ್ಯಲ್ಲಿ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿಬಿಡಿ. ಅದಕ್ಕಾಗಿ ಮಂತ್ರಿ ಪದವಿಯನ್ನು ಬಿಟ್ಟು, ಬೇರೆ ಯಾರಾದರೂ ಬಂದು ಯಾವ ರೀತಿ ಆಡಳಿತ ಮಾಡುತ್ತಾರೆನ್ನುವುದನ್ನು ಹಿಂದಿನ ಬೆಂಚಿನಲ್ಲಿ ಕುಳಿತುಕೊಂಡು ನೋಡಿ. ನಾನು ಆಗಲೇ ಹೇಳಿದಂತೆ ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿ ಎಂದು ನಾನು ಹೇಳುತ್ತಿಲ್ಲ ಮತ್ತು ಹಾಗೆ ಹೇಳಲು ನನಗೆ ಅಧಿಕಾರವೂ ಇಲ್ಲ. ನಿಮ್ಮ ಮಂತ್ರಿ ಸ್ಥಾನವನ್ನು ಬಿಟ್ಟು ಹೊರಗೆ ಬನ್ನಿ ಎಂದು ಹೇಳುತ್ತಿದ್ದೇನೆ.

ಸ್ವಾಮೀ, ಮಾನ್ಯ ಅಧ್ಯಕ್ಷರ ಕ್ಷೇತ್ರದಿಂದಲೇ ಒಂದು ಸಾರಿ ರೋಡು ಟ್ರಾನ್ಸ್‌ಪೋರ್ಟ್ ಇಲಾಖೆಗೆ ಸೇರಿದ ಬಸ್ಸಿನಲ್ಲಿ ಬರುವಾಗ ಮಂಗಳೂರಿನಿಂದ ನಿಮ್ಮ ಕಾನ್ಸ್‌ಟಿಟುಯೆನ್ಸಿ ಮೂಲಕ ಬಂದು ಹಾಸನದ ಬಸ್ ಸ್ಟ್ಯಾಂಡಿಗೆ ಬಂದೆ. ಅದನ್ನು ನೋಡಿದಾಗ ಅದಕ್ಕಿಂತ ದೊಡ್ಡದಾದ ಬೇರೊಂದು ನರಕ ಇನ್ನೆಲ್ಲೂ ಇಲ್ಲ ಎಂದು ಹೇಳಬಹುದು. ಅಲ್ಲಿರುವ ಸಣ್ಣಪುಟ್ಟ ಅಧಿಕಾರಿಗಳೇ ಸರ್ವಾಧಿಕಾರಿಗಳಾಗಿರುತ್ತಾರೆ, ಇವರು ಯಾರ ಮಾತನ್ನೂ ಕೇಳುವುದಿಲ್ಲ. ಇಂತಹ ಅವ್ಯವಸ್ಥೆ ಹಾಗೂ ದುರ್ವ್ಯವಹಾರಗಳನ್ನು ಮಾಡುವುದಕ್ಕಿಂತ ಈ ರಾಷ್ಟ್ರೀಕರಣವನ್ನು ಮಾಡದೇ ಇರುವುದೇ ಸರಿಯೆಂದು ತೋರುತ್ತದೆ. ಇಂತಹ ರಾಷ್ಟ್ರೀಕರಣದ ವಿಚಾರದಲ್ಲಿ ಸುಪ್ರೀಂ ಕೋರ್ಟಿನವರು ಒಂದು ತೀರ್ಮಾನವನ್ನು ಕೊಟ್ಟರು ಎನ್ನುವ ಕಾರಣದ ಮೇಲೆ ಆಂಧ್ರದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಸಂಜೀವರೆಡ್ಡಿಯವರು ತಮ್ಮ ಮಂತ್ರಿ ಸ್ಥಾನವನ್ನು ಬಿಟ್ಟು ತಮ್ಮ ಸ್ಥಾನಕ್ಕೆ ಧೈರ್ಯದಿಂದ ರಾಜೀನಾಮೆ ಕೊಟ್ಟರು. ಅಲ್ಲದೆ ಆಂಧ್ರದ ಜನತೆಯಲ್ಲಿ ಅಷ್ಟು ಪಟ್ಟಿನ ವಿಶ್ವಾಸಗಳಿಸಿದ್ದವರೂ ಅಧಿಕಾರ ಬಿಟ್ಟು ಹೊರಗೆ ಬಂದರು. ಹಾಗೆ ಇಲ್ಲಿರುವ ಮಂತ್ರಿಗಳಿಗೆ ತಮ್ಮ ಸ್ಥಾನ ಬಿಡುವುದಕ್ಕೆ ಧೈರ್ಯವೆಲ್ಲಿಂದ ಬರಬೇಕು ? ಆದುದರಿಂದ ತಾವು ಈಗಿರುವ ರೋಡು ಟ್ರಾನ್ಸ್‌ಪೋರ್ಟ್ ಸಂಚಾರ ವ್ಯವಸ್ಥೆಯನ್ನು ಸುವ್ಯವಸ್ಥೆಯಿಂದ ನಡೆಸಲು ಯೋಚನೆ ಮಾಡಬೇಕು ಎಂದು ಸಲಹೆ ಮಾಡುತ್ತಿದ್ದೇನೆ.

ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದು ನಮ್ಮ ವಿದ್ಯಾ ಮಂತ್ರಿಗಳ ವಿಚಿತ್ರ ನೀತಿಯ ಬಗ್ಗೆ ಹೇಳಬೇಕಾಗಿದೆ. ವಿದ್ಯಾ ಮಂತ್ರಿಗಳು ಮಾನ್ಯ ಸದಸ್ಯರಾದ ಅಪ್ಪಣ್ಣನವರ ಕ್ಷೇತ್ರಕ್ಕೆ ಹೋಗಿದ್ದಾಗ ಅವರೊಡನೆ ಈಗ ಹೆಚ್ಚಿಸಿರುವ ಫೀಸನ್ನು ಕಡಿಮೆ ಮಾಡಲು ನಾನು ಒಪ್ಪುವುದಿಲ್ಲ. ಆದರೆ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರು ಒಪ್ಪಬೇಕು ಎಂದು ಹೇಳಿದರೂ ನಾನು ಅದಕ್ಕೆ ಸಮ್ಮತಿಸುವುದಿಲ್ಲ ಮತ್ತು ಕಡಿಮೆ ಮಾಡುವುದಿಲ್ಲ ಎಂದು ಹೇಳಿದ್ದವರು ಈಗ......

The Government which has yielded to threats is not worth continuing in office for a moment. I requested the Hon'ble Minister for Education, my dearest friend Sri S. R. Kanthi, to quit the ministership at once and get out of office and to say "I am here, another soldier who has sacrificed."

ಹೀಗೆ ಊರಿಂದೂರಿಗೆ ವಿದ್ಯಾ ಮಂತ್ರಿಗಳು ಹೋಗುವುದು ಅಲ್ಲಿ ಜನ ಕೊಡುವ ಹೂವಿನ ಹಾರಗಳನ್ನು ಹಾಕಿಸಿಕೊಳ್ಳುವುದು ಅಲ್ಲಿ ಭಾಷಣಗಳನ್ನು ಮನಸ್ಸಿಗೆ ಬಂದಂತೆ ಮಾತನಾಡುವುದು ; ಹೀಗೆ ಮಾತನಾಡತಕ್ಕ ಮಂತ್ರಿಗಳು ಯಾರಾದರೂ ಇದ್ದರೆ ನಿಜವಾಗಿಯೂ ಅವರು ಮಂತ್ರಿಗಳಾಗಿ ಮಂತ್ರಿಮಂಡಲದಲ್ಲಿರಲು ಲಾಯಕ್ಕಿಲ್ಲ ಎಂದು ಜನರು ಇತ್ತೀಚೆಗೆ ಅಡಿಕೊಳ್ಳುತ್ತಿದ್ದಾರೆ ಎಂದು ನಾನು ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ವಿಶ್ವವಿದ್ಯಾನಿಲಯದ ಪರಂಪರೆಗಳನ್ನು ನೋಡುತ್ತ ಹೋದರೆ ಅದರದೇ ಒಂದು ದೊಡ್ಡ ಕತೆಯಾಗಿದೆ. ಇವೊತ್ತಿನ ದಿವಸ ನಮ್ಮ ಶರಣ ಸಾಹಿತ್ಯದ ಸಂಪಾದಕರಾದ ಶ್ರೀಮಾನ್ ಶಿವಮೂರ್ತಿ ಶಾಸ್ತ್ರಿಗಳನ್ನು ಕರೆದು, ಇಲ್ಲಿ ನಡೆದಿರುವಂತಹ ಎಲ್ಲಾ ವಿಚಾರಗಳನ್ನು ಕುರಿತು ಒಂದು ಚರಿತೆಯನ್ನು ಬರೆಯುವಂತೆ ಏರ್ಪಾಟು ಮಾಡಿದರೆ ಅವರೂ ಸ್ವಲ್ಪ ಅನುಭವ ಪಡೆದುಕೊಂಡಂತಾಗುತ್ತದೆ. ಈ ರಾಜ್ಯದಲ್ಲಿ ಯಾರೂ ಗತಿಯಿಲ್ಲ ಎಂದು ಶ್ರೀಮಾನ್ ಮಾದಪ್ಪಗೌಡರು ಹೇಳಿದ ಹಾಗೆ, ದೆಹಲಿಯಲ್ಲಿದ್ದವರಿಗೆ ಶ್ರೀಮಾನ್ ಮಾಲಯವರು ಬೇಡ ಎಂದಿದ್ದವರಿಗೆ ಮೈಸೂರು ಯೂನಿವರ್ಸಿಟಿಯ ಉಪಕುಲಪತಿಗಳಾಗುವಂತೆ ಆದೇಶ ಕೊಟ್ಟಿದ್ದಾರೆಂದು ಪ್ರಕಟಣೆ ಬಂದಿದೆ. ನಾನಾದರೂ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡುವುದೇನೆಂದರೆ, ತಮಗೆ ಈ ಮಂತ್ರಿ ಮಂಡಲದಲ್ಲಿ ಸ್ಥಾನವಿಲ್ಲದಿದ್ದರೂ ಪರವಾಗಿಲ್ಲ, ತಮ್ಮನ್ನೇ ಈ ರಾಜ್ಯದಲ್ಲಿ ಉಪಕುಲಪತಿಗಳನ್ನಾಗಿ ಮಾಡಿಸಿದ್ದರೆ ನನಗೆ ಬಹಳ ಸಂತೋಷವಾಗುತ್ತಿತ್ತು. (ನಗು) ಈ ಸ್ಥಾನಕ್ಕೆ ತಾವು ಭೂಷಣಪ್ರಾಯರಾದವರು ಎಂದು ನಾನಾದರೂ ಹೇಳುತ್ತೇನೆ.

ತಮ್ಮಂಥವರೂ ಎಂದರೆ ಏನು ? Please conclude the idea. An offer to me like that is an insult.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂತಹ ಅನಿಶ್ಚಯತೆಯ ದುರ್ವ್ಯವಹಾರಗಳನ್ನು ಕಡಮೆಮಾಡುವುದಕ್ಕೆ ತಮ್ಮಂತಹವರು ಎಂದರೆ ಮಾನ್ಯ ವಿದ್ಯಾಮಂತ್ರಿಗಳವರು a great educationist, a great lawyer, ಇಂತಹ ಸ್ಥಾನದಲ್ಲಿರಬೇಕಾಗಿತ್ತು ಎಂದು ಇಲ್ಲಿ ತಮ್ಮ ಮೂಲಕ ಅರಿಕೆ ಮಾಡುತ್ತಿದ್ದೇವೆ. ಹೀಗೆ ಜನ ಪಿಸುಮಾತಿನಲ್ಲಿ ಹೇಳುತ್ತಿದ್ದುದನ್ನು ಇಲ್ಲಿ ಸಭೆಗೆ ಅರಿಕೆಮಾಡುತ್ತಿದ್ದೇನೆ. ತಾವು ಈ ಸಭೆಯಲ್ಲಿ ಅಧ್ಯಕ್ಷರಾಗಿಯೇ ಇರಬೇಕೆಂದು ದೇವರಲ್ಲಿ ಪ್ರಾರ್ಥನೆಮಾಡುತ್ತೇನೆ ಮತ್ತು ಹಾಗೇ ತಾವೇ ಇಲ್ಲಿ ಇದ್ದುಬಿಡಿ.

ವಿದ್ಯಾಖಾತೆಯಲ್ಲಿ ಈ ಹಿಂದೆ ನಡೆದ ದುರಂತಗಳ ಬಗ್ಗೆ, ಈಗಾಗಲೇ ನನ್ನ ಮಿತ್ರರಾದ ಶ್ರೀಮಾನ್ ಕೃಷ್ಣಪ್ಪನವರೂ ಹಾಗೂ ಶ್ರೀಮಾನ್ ಮಾದಪ್ಪ ಗೌಡರವರೂ ಹೇಳಿದಂತೆ, ಇದನ್ನು ಪರಿಶೀಲನೆ ಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆಂದು ಹೇಳಿದರು. ಮದರಾಸಿನ ವಿಶ್ವವಿದ್ಯಾನಿಲಯದ ಉಪಕುಲಪತಿಗಳು, ಆದ ಶ್ರೀ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು, ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಆದ ಶ್ರೀಮಾನ್ ಪಾವಟೆಯವರು, ಗುಲ್ಬರ್ಗಾ ಕಾಲೇಜಿನ ಪ್ರಿನ್ಸಿಪಾಲರವರು ಮತ್ತು ಈಗ ತಾತ್ಕಾಲಿಕ ಉಪಕುಲಪತಿಗಳಾಗಿರುವ ಶ್ರೀಮಾನ್ ದಾವರ್ ಅವರು ಈ ಕಮಿಟಿಯಲ್ಲಿ ಸದಸ್ಯರಾಗಿದ್ದಾರೆ. ಹಳೆಯ ಮೈಸೂರಿಗೆ ಸೇರಿದ ಒಬ್ಬ ಪ್ರತಿನಿಧಿಗಳೂ ಇದ್ದಾರೆಯೇ ಎಂದರೆ ಯಾರೂ ಇದರಲ್ಲಿ ಇಲ್ಲ. ನಮ್ಮಲ್ಲಿ ವಿದ್ಯಾ ಕ್ಷೇತ್ರದಲ್ಲೆಲ್ಲ ಪರಿಣತರಾದ ಶ್ರೀಮಾನ್ ಮಲ್ಲಾರಾಧ್ಯರವರು ಇರಲಿಲ್ಲವೇ ? ಶ್ರೀಮಾನ್ ಕಸ್ತೂರಿರಾಜಚೆಟ್ಟಿಯವರು ಇರಲಿಲ್ಲವೇ ? ಶ್ರೀಮಾನ್ ನಿಕ್ಕಂ ಅವರು ಇರಲಿಲ್ಲವೇ? ಹಿಂದೆ ಡಿ. ಪಿ. ಐ. ಆಗಿದ್ದವರು ಶ್ರೀಮಾನ್ ಗುರುದತ್ತ ಅವರು ಇರಲಿಲ್ಲವೇ ಇಂತಹ ಕಮಿಟಿ ಮಾಡುವಾಗ ಅವರ್‍ಯಾರೂ ತಮ್ಮ ಕಣ್ಣಿಗೆ ಬೀಳಲಿಲ್ಲವೇ? ಇಂತಹ ಏಕ ಪಕ್ಷೀಯವಾದ ಒಂದು ಕಮಿಟಿಯನ್ನು ಮಾಡಿಕೊಂಡು ಇವತ್ತು ತಾವೆಲ್ಲಾ ಹೋಗಿ ನಿಮ್ಮ ಖರ್ಚಿನಲ್ಲೇ ಮದರಾಸಿಗೆ ಹೋಗಿ ಎವಿಡೆನ್ಸ್ ಕೊಡಬೇಕು ಎಂದರೆ ಏನರ್ಥ ? ಇವೊತ್ತು ಚಿಕ್ಕಮಗಳೂರಿನಿಂದ ಬರುವವರು, ಮಂಗಳೂರಿನ ಕಡೆಯಿಂದ ಬರುವವರು ಹಾಗೂ ಮೈಸೂರು ಕಡೆಯಿಂದ ಬರುವವರು ಅಲ್ಲಿಗೆ ಹೋಗಿ ರುಜುವಾತು ಕೊಡಬೇಕೆಂದರೆ ಹೇಗೆ? 'bankruptcy of intelligence and bankruptcy of any other thing. ಮದರಾಸಿಗೆ ಹೋಗಿ ರುಜುವಾತು ಕೊಡು ಎಂದು ಜನಕ್ಕೆ ಹೇಳಿದ್ದರೂ ಯಾರು ಒಂದು ಸರಿಯಾದ ರುಜುವಾತು ಕೊಡಲಿಲ್ಲ ಆದರಿಂದ ನಮ್ಮ ಮುಂದೆ ಇದ್ದ ದಾಖಲೆಗಳಂತೆ ಹಾಗೂ ಇತರ ಮೆಟೀರಿಯಲ್ಲುಗಳ ಆಧಾರದ ಮೇಲೆ ಒಂದು ರಿಪೋರ್ಟನ್ನು ಸರಕಾರಕ್ಕೆ ಕೊಟ್ಟಿದ್ದೇವೆಂದು ಹೇಳಿದರೆ ಅಂತಹ ರಿಪೋರ್ಟನ್ನು ಸರಕಾರ ಒಪ್ಪುವುದು ನ್ಯಾಯವೂ ಅಲ್ಲ. ಅದಕ್ಕೋಸ್ಕರ ಈಗಲಾದರೂ ಸರ್ಕಾರ ಒಂದು ಪ್ರೆಸ್ಸ್ ನೋಟನ್ನು ಹೊರಡಿಸಿ ಈಗ ಹೇಳಿರುವ ಹೇಳಿಕೆಗಳನ್ನು ವಾಪಸು ಪಡೆದರೂ ಚಿಂತೆ ಇಲ್ಲ, ಈಗಿರುವ ಕಮಿಟಿಯವರು ದೇಶದ ಎಲ್ಲ ಕಡೆಗಳಲ್ಲಿಯೂ ಸಂಚಾರಮಾಡಿ ಅಲ್ಲಿರುವ ಜನಗಳ ಕಡೆಯಿಂದ ವಿಚಾರಗಳನ್ನೆಲ್ಲಾ ಶೇಖರಿಸಿ, ಆ ನಂತರ ಬೊಂಬಾಯಿಯಲ್ಲಿರುವ ಸ್ಪೆಷಲಿಸ್ಟರು, ಮದರಾಸಿನಲ್ಲಿರುವ ನಮೂನೆ, ಆಂಧ್ರದಲ್ಲಿ ಹಾಗೂ ದೆಹಲಿಯಲ್ಲಿರುವ ಪ್ಯಾಟರ್ನುಗಳನ್ನೆಲ್ಲಾ ಯೋಚನೆ ಮಾಡಿ ಒಂದು ವಾಸ್ತವವಾದ ತೀರ್ಮಾನವನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಈ ಕಮಿಟಿಯಲ್ಲಿ ಹಳೆಯ ಮೈಸೂರಿನ ಒಬ್ಬರು ಪ್ರತಿನಿಧಿಗಳನ್ನಾದರೂ ಈಗಲಾದರೂ ನೇಮಕ ಮಾಡುವುದು ಒಳ್ಳೆಯದು ಎಂದು ಹೇಳಿ ನಾನು ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಎಸ್. ಗೋಪಾಲ ಸಾಲೆನ್ನ (ಮೂಡಬಿದ್ರಿ).—ಸ್ವಾಮಿ ರಾಜ್ಯಪಾಲರ ಭಾಷಣದಲ್ಲಿರುವ ಎಲ್ಲ ವಿಚಾರಗಳನ್ನು ನೋಡಿದರೆ ಅದರಲ್ಲಿ ಜನೋಪಯುಕ್ತವಾದ ವಿಚಾರಗಳು ಯಾವುದೂ ಇರುವಂತೆ ಕಾಣಿಸುವುದಿಲ್ಲ ಎನ್ನುವುದನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಈ ಭಾಷಣದಲ್ಲಿ ಹೇಳಿರುವಂತೆ ಯೋಜನೆಗಳಿಗಾಗಿ ಶೇಕಡಾ 44ರಷ್ಟು ಮಾತ್ರ ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಇನ್ನು ಉಳಿರುವ ವರ್ಷಗಳಲ್ಲಿ ಎಂದರೆ ಯೋಜನೆಗಳ ಅವಧಿಯು ಪೂರ್ತಿಯಾಗುವುದರೊಳಗಾಗಿ ಹಣ ಖರ್ಚು ಮಾಡಲು ಸಾಧ್ಯವಾಗುತ್ತದೆಯೇ ಎನ್ನುವುದನ್ನು ವಿಮರ್ಶೆ ಮಾಡಬೇಕಾಗಿದೆ. ಶೇಕಡ 44ರಷ್ಟು ಎಂದರೆ ಈ ದೇಶದ ಜನರಿಗೆ ಅರ್ಧದಷ್ಟು ಉಪಯೋಗವಾಗುತ್ತದೋ ಇಲ್ಲವೋ ಅದು ಸ್ಪಷ್ಟವಾಗುವುದಿಲ್ಲ. ದೊಡ್ಡದಾಗಿ ಯೋಜನೆಗಳನ್ನು ಮಾಡುತ್ತೇವೆ; ಇದರಿಂದ ಜನಗಳಿಗೆ ಪ್ರಯೋಜನವಾಗುತ್ತದೆ ಎಂದು ಹೇಳುತ್ತ ಇಷ್ಟು ಕಡಿಮೆಯಾಗಿ ಖರ್ಚು ಮಾಡಿದರೆ ಏನು ಪ್ರಯೋಜನ; ಮತ್ತು ಇಂತಹ ಪಟ್ಟಿಯನ್ನು ಕೊಡುವುದರಿಂದ ಜನರಿಗೇನೂ ಉಪಯೋಗವಾಗುತ್ತದೆಯೇ ಇಲ್ಲವೇ ಎನ್ನುವುದನ್ನು ನಾವು ವಿಮರ್ಶೆ ಮಾಡಬೇಕಾಗಿದೆ. ಈ ವಿಚಾರದಲ್ಲಿ ಸರಿಯಾದ ರಚನಾತ್ಮಕವಾದ ಟೀಕೆಗಳನ್ನು ಕೊಡುತ್ತಿದ್ದರೂ ಅಧಿಕಾರದಲ್ಲಿರುವವರು ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಆದರ ಇದರಲ್ಲಿ

(ಶ್ರೀ ಎಸ್. ಗೋಪಾಲ ಸಾರೆನ್ನ)

ಪ್ರತಿಪಕ್ಷದವರು ಆಡಳಿತ ಪಕ್ಷದಲ್ಲಿರತಕ್ಕ ದೋಷದೋಷಗಳನ್ನೆತ್ತಿ ತೋರಿಸಿ ಅವುಗಳನ್ನು ತಿದ್ದಿಕೊಳ್ಳಿ ಎಂದರೆ ಆಡಳಿತ ಪಕ್ಷಕ್ಕೆ ಅದು ಸಮಾಧಾನಕರವಾಗಿಲ್ಲ. ಆಡಳಿತ ಪಕ್ಷಕ್ಕೆ ಈ ದಿವಸ ಅಂಥ ಒಂದು ಜಡ್ಡು ಅಥವಾ ದಡ್ಡತನ ಬಂದುಹೋಗಿದೆ. ಕೆಲವು ರೋಗಿಗಳಿಗೆ ಇಂಜಕ್ಷನ್ ಕೊಟ್ಟ ಹಾಗೆಲ್ಲಾ ರೋಗ ಬಲವಾಗಿ ಅಂಟಿಕೊಳ್ಳುವಂತೆ ಈ ಆಡಳಿತ ಪಕ್ಷಕ್ಕೆ ಅವರ ದೋಷದೋಷಗಳನ್ನು ತಿದ್ದಿಕೊಳ್ಳಲಿ ಎಂದು ನಾವು ಹೇಳಿದಂತೆಲ್ಲಾ ಅವರ ಜಡ್ಡು ಜಾಸ್ತಿಯಾಗುತ್ತಲೇ ಇದೆ. ಅಂಥ ಒಂದು ದೊಡ್ಡ ರೋಗ ಬಂದಿದೆ, ಆಡಳಿತ ಪಕ್ಷಕ್ಕೆ. ತಿದ್ದಲಿಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿ ಆಡಳಿತ ನಡೆದುಕೊಂಡು ಬರುತ್ತಿದೆ. ಕಾಂಗ್ರೆಸ ಪಕ್ಷ ಆಡಳಿತಕ್ಕೆ ಅಷ್ಟು ಅಂಟಿಕೊಂಡಿದೆ.

5-30 P.M.

ರಾಜ್ಯದಲ್ಲಿ ಅಧಿಕಾರವಿಕೇಂದ್ರಿಕರಣ ಮಾಡಲೆಂದು ಪಂಚಾಯಿತಿ ರಾಜ್ಯಸ್ಥಾಪನೆಗೆ ನಾವು ಒಪ್ಪಿಗೆ ಕೊಟ್ಟೆವು. ಸರ್ಕಾರದವರು ಈಗ ಇದನ್ನು ಜಾರಿಗೆ ತಂದಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಆ ಪಂಚಾಯಿತಿಗಳಿಗೆ ಜೀವ ಇದೆಯೋ, ಅವುಗಳಿಗೇನಧಿಕಾರವಿದೆ ಎಂಬುದೊಂದೂ ಗೊತ್ತಾಗುವುದಿಲ್ಲ. ಹೀಗಾಗಿ ಈ ದಿವಸ ಈ ಗ್ರಾಮಪಂಚಾಯಿತಿಗಳು ಕೇವಲ ಒಂದು ಪಟ್ಟಿಯಲ್ಲಿ ಹೆಸರಿಗೆ ಮಾತ್ರ ಉಳಿದಿರುತ್ತವೆಯೇ ವಿನಾ ಅವುಗಳಿಗೆ ಯಾವ ಸೌಲಭ್ಯವೂ ಇಲ್ಲ.

ಇದರಂತೆಯೇ ವ್ಯವಸಾಯದ ಯೋಜನೆಗಳ ಒಂದು ಪಟ್ಟಿಯನ್ನೂ ತಯಾರು ಮಾಡಿದ್ದಾರೆ. ಆದರೆ ವ್ಯವಸಾಯಾಭಿವೃದ್ಧಿ ಮಾತ್ರ ಆಗಿಲ್ಲ. ಯೋಜನೆಗಳನ್ನು ತಯಾರು ಮಾಡಿ ಅದನ್ನು ಒಂದು ಪುಸ್ತಕದಲ್ಲಿಟ್ಟಿದ್ದಾರೆ. ಆದರೆ ಆ ಪುಸ್ತಕದಲ್ಲಿ ಹೇಳಿರುವಂತೆ ಜನರಿಗೆ ಅನುಕೂಲ ಕಲ್ಪಿಸಲು ಸರ್ಕಾರಕ್ಕೆ ಸಾಧ್ಯವಿಲ್ಲವಾಗಿದೆ.

ಇನ್ನು ದೊಡ್ಡ ದೊಡ್ಡ ಕೈಗಾರಿಕೆಗಳ ಬಗ್ಗೆ ರಾಜ್ಯಪಾಲರು ಹೇಳಿದ್ದಾರೆ. ಈ ಹಿಂದೆ ಒಂದು ಗೊಬ್ಬರದ ಮತ್ತು ಅಲ್ಯೂಮಿನಿಯಂ ಕಾರ್ಖಾನೆಗಳನ್ನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವುವಾಗಿ ಹೇಳಲಾಗಿತ್ತು. ಆದರೆ ಈಗ ಅವು ಅಲ್ಲಿ ಯಾವ ರೀತಿಯಲ್ಲಿ ಮುಂದುವರಿಯುತ್ತಿವೆಯೆಂಬ ವಿಚಾರ ಇದರಲ್ಲಿ ಕಾಣುತ್ತಿಲ್ಲ. ನಮ್ಮ ವೆಸ್ಟ್‌ಕೋಸ್ಟಿನಲ್ಲಿ ಅಲ್ಯೂಮಿನಿಯಂ ಕಾರ್ಖಾನೆಯನ್ನು ಸ್ಥಾಪಿಸುವುದಾಗಿ ಹೇಳಿದ್ದರು. ಈ ವರ್ಷದ ಭಾಷಣದಲ್ಲಿ ಅದರ ಹೆಸರೇ ಇಲ್ಲ. ಇನ್ನು ಮುಂದಿನ ವರ್ಷಕ್ಕೆ ಇದರ ಜ್ಞಾಪಕವು ಉಳಿಯುದಂತಾಗುತ್ತದೆ.

ಇನ್ನು ಸಹಕಾರ ಸಂಘಗಳ ವಿಚಾರವನ್ನು ಬಹಳವಾಗಿ ಹೇಳಿದ್ದಾರೆ. ಆದರೆ ಇವು ಅಷ್ಟು ಚುರುಕಾಗಿ ಕೆಲಸ ಮಾಡುತ್ತಿಲ್ಲ. ಎಲ್ಲಿ ಹಣದ ಅಗತ್ಯವಿಲ್ಲವೋ ಅಲ್ಲಿಗೆ ಹಣವನ್ನು ಒದಗಿಸಿ ಎಲ್ಲಿಗೆ ಹಣದ ಅಗತ್ಯ ಬಹಳವಾಗಿರುತ್ತದೆಯೋ ಅಲ್ಲಿಗೆ ಹಣವನ್ನೊದಗಿಸುತ್ತಿಲ್ಲ. ಇಂಥ ಸಹಕಾರ ಸಂಘಗಳಿವು. ರೈತರಿಗೆ ವಿದ್ಯುಚ್ಛಕ್ತಿ ಸೌಲಭ್ಯ ಕೂಡ ಸಿಗುತ್ತಿಲ್ಲ. ಆದ್ದರಿಂದ ಇವುಗಳನ್ನೆಲ್ಲಾ ಬರಿ ಒಂದು ಅಂಕಿ ಸಂಖ್ಯೆಗಳಲ್ಲಿ ತೋರಿಸಿದರೆ ಪ್ರಯೋಜನವಿಲ್ಲ.

ಇನ್ನು ಹರಿಜನ ಗಿರಿಜನರ ಶೋಷಣೆ ಎಷ್ಟರಮಟ್ಟಿಗೆ ನಡೆಯುತ್ತಿದೆಯೆಂಬುದನ್ನು ನೋಡೋಣ: ಇವರ ಯೋಗಕ್ಷೇಮ ನೋಡಿಕೊಳ್ಳಲು ರಚಿಸಿರತಕ್ಕ ಆ ಸೋಷಿಯಲ್ ವೆಲ್‌ಫೇರ್ ಇಲಾಖೆಯೆಂಬುದಿದೆಯೋ ಇಲ್ಲವೋ ಅದು ನನಗೆ ಗೊತ್ತಾಗುವುದಿಲ್ಲ. ಈ ಹಿಂದೆ ನಮ್ಮ ರಾಜ್ಯದಲ್ಲಿರತಕ್ಕ ಸಮಗ್ರ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬಿನವರ ಹೆಸರುಗಳನ್ನು ಬರೆದು ಅದನ್ನು ಕೇಂದ್ರ ಸರ್ಕಾರದವರ ಅನುಮತಿಗಾಗಿ ಕಳುಹಿಸಲಾಗಿದೆಯೆಂದು ಹೇಳಿದ್ದರು. ಈಗ ಅದೇನಾಗಿದೆ ಎಂಬುದು ತಿಳಿಯುದಂತಾಗಿದೆ. ಆದಾಗ್ಗೂ ಹೆಸರಿಗೆ ಮಾತ್ರ ಇರಲಿ ಎಂದು ಈಗಿನ ರಾಜ್ಯಪಾಲರ ಭಾಷಣದಲ್ಲೂ ಸೋಷಿಯಲ್ ವೆಲ್‌ಫೇರ್ ಇಲಾಖೆಯನ್ನು ಸೇರಿಸಿದ್ದಾರೆ. ಆದರೆ ಅಲ್ಲಿ ಯಾವ ಒಂದು ಇಲಾಖೆಯೂ ಇಲ್ಲದೆ ಅಲ್ಲಿ ಒಂದು ಬೋರ್ಡ್ ಮಾತ್ರ ಇರುತ್ತದೆ. ಷೆಡ್ಯೂಲ್ಡ್ ಟ್ರೈಬಿನವರನ್ನು ಕಂಡು ಅವರಿಂದ ವಿಚಾರ ತಿಳಿಯುವ ಮುಗಿಂತ ಆಗಿ ಆ ಜನಾಂಗದ ಹೆಸರನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಕಾರಣವೇನು ? ಇದರಿಂದ ಆ ಜನಾಂಗಕ್ಕೆ ಬಹಳ ಅನ್ಯಾಯವಾಗಿದೆ. ಈ ವಿಚಾರವನ್ನು ಈ ಹಿಂದೆಯೇ ಶ್ರೀ ಸುಬ್ಬಯ್ಯನಾಯುಡುರು ಇದೇ ಸಭೆಯಲ್ಲಿ ತಿಳಿಸಿದ್ದಾರೆ. ಅವರ ಜನಾಂಗಕ್ಕೆ ಪಲ್ಲಕ್ಕಿ ಹೊರಿಸುತ್ತಾ ಅವರ ಹೆಣ್ಣುಮಕ್ಕಳಿಗೆ ತುಂಬಾ ಅನ್ಯಾಯ ಮಾಡಿದ್ದಾರೆಂದು ಅವರು ಹೇಳಿದ್ದಾರೆ. ಹರಿಜನರನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿ ಒಂದು ಬೋರ್ಡನ್ನು ಹಾಕಿ ಅವರನ್ನು ಅಸ್ಪೃಶ್ಯರೆಂದು ಹೇಳುತ್ತಿರುವಾಗ ಆ ಬೋರ್ಡನ್ನಾದರೂ ಏಕೆ ಹಾಕಬೇಕಾಗಿತ್ತು ? ಇದನ್ನೆಲ್ಲಾ ನೋಡಿದರೆ ಹರಿಜನ ಗಿರಿಜನರನ್ನು ಇತರ ಸವರ್ಣೀಯರ ಮಟ್ಟಕ್ಕೆ ತರತ್ತೇವೆಂದು ಒಪ್ಪಿರತಕ್ಕದ್ದು ಕೇವಲ ಒಂದು ದಾಕ್ಷಿಣ್ಯಕ್ಕೆ ಎಂದು ಕಾಣುತ್ತಿದೆ. ಆದರೆ ಅವರ ಅಂಥ ದಾಕ್ಷಿಣ್ಯ ನಮಗೆ ಬೇಡ ಇದು ಘಟನಾತ್ಮಕವಾಗಿ ನಮಗೆ ಬರಬೇಕಾದ ಒಂದು ಹಕ್ಕು. ಈ ಹೊತ್ತು ಸರ್ಕಾರ ಆ ರಾಜ್ಯಾಂಗಕ್ಕೆ ಅಪಮಾನ ಮಾಡಿದೆ. ಕೆಲವು ಹರಿಜನ ಅಧಿಕಾರಿಗಳನ್ನು ಮನೆಗೆ ಕಳಿಸಿದ್ದಾರೆ. ಯಾರದೋ

ಅನ್ಯಾಯಕ್ಕೆ ಯಾರನ್ನೋ ಶಿಕ್ಷೆಮಾಡಿದ್ದಾರೆ. ಹೀಗೆ ಈ ದಿವಸ ಹರಿಜನರಿಗಾಗಿರತಕ್ಕ ಅನ್ಯಾಯವನ್ನು ಕೇಳತಕ್ಕವರೇ ಇಲ್ಲ. ಮೊದಲೇ ನೌಕರಿಯಲ್ಲಿ, ಗೆಜೆಟೆಡ್ ಹುದ್ದೆಯಲ್ಲಿ ಹರಿಜನರಿರುವುದು ಬಹಳ ಕಡಮೆ. ಇದನ್ನು ಕೇಳತಕ್ಕವರೇ ಇಲ್ಲ. ಈಗ ತಾನೆ ಶ್ರೀ ಸಿದ್ದಯ್ಯ ಕಾಶೀಮಠ ಅವರು 4 ಜನ ಹರಿಜನರನ್ನು ಕಂಬಕ್ಕೆ ಕಟ್ಟಿ ಹೊಡೆದು ಕೊಂದು ಹಾಕಿದರೆಂದು ಹೇಳಿದರು. ಅವರನ್ನು ಕೇಳತಕ್ಕವರೇ ಇಲ್ಲ. ದಲಿತವರ್ಗದವರಿಗೆ ಹೀಗೆಲ್ಲಾ ಅನ್ಯಾಯವಾಗುತ್ತಿರುವಾಗ, ಅವರು ಬದುಕುವುದಕ್ಕೇ ಕಷ್ಟವಾಗುತ್ತಿರುವಾಗ ಅಧಿಕಾರದಲ್ಲಿರತಕ್ಕ ನಾಯಕರು ಇವರಿಗೇನು ರಕ್ಷಣೆ ಕೊಟ್ಟಿದ್ದಾರೆ? ಎಷ್ಟೋ ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ತೋರಿಸುತ್ತಾರೆ. ಯೋಜನಗಳಲ್ಲಿಯೂ ತೋರಿಸುತ್ತಾರೆ. ಅದರ ಪ್ರಕಾರ ಇಲ್ಲಿಯವರೆಗೂ ಎಷ್ಟು ಪ್ರಯೋಜನ ಸಿಕ್ಕಿದೆಯೆಂದರೆ ಸರಿಯಾದ ಉತ್ತರವಿಲ್ಲ. ಮಧ್ಯಮ ವರ್ಗದ ಜನರು ಹರಿಜನ ಸೇವಕರಾಗಿ ಮತ್ತು ಜನತೆಯ ಸೇವಕರಾಗಿ ಮುಂದೆ ಮುಂದೆ ಬಂದಿದ್ದಾರೆಂದೇನೋ ಹೇಳುತ್ತಿದ್ದಾರೆ. ಇದಕ್ಕಾಗಿ ಹಣ ಖರ್ಚಾಗಿರಬಹುದು. ಆದರೆ ಎಷ್ಟು ಜನ ದಲಿತವರ್ಗದವರು ಆರ್ಥಿಕ ದೃಷ್ಟಿಯಿಂದ ಮುಂದೆ ಬರುವಂತಾಗಿದೆ ಎಂಬ ಬಗ್ಗೆ ಸರ್ಕಾರದವರು ಲೆಕ್ಕ ಕೊಡಬೇಕು. 500ರರಿಂದ 2,500ರ ರವರೆಗೆ ವಿದ್ಯಾವಂತ ದಲಿತವರ್ಗದವರಿಗೆ ಸರ್ಕಾರದವರು ಹೆಚ್ಚು ಸಹಾಯ ಮಾಡಿ ಅವರ ಜೀವನಕ್ಕೆ ಅನುಕೂಲ ಮಾಡಿಕೊಡಬೇಕು. ಬೇರೆ ಬೇರೆ ಕೈಗಾರಿಕೆಗಳ ಯೋಜನೆಗಳಲ್ಲಿ ಕೆಲಸ ಮಾಡಲು ಎಷ್ಟೋ ಜನರನ್ನು ಕಳುಹಿಸಿದ್ದೀರಿ. ಆದರೆ ನಮ್ಮ ಜಿಲ್ಲೆಯಲ್ಲಿ ಒಬ್ಬರಿಗೂ ಅದರ ಅವಕಾಶ ಸಿಗಲಿಲ್ಲ. ಬಾಕಿ ಜಿಲ್ಲೆಗಳಲ್ಲಿ ಆಗಿದ್ದಂಥ ಪ್ರಯೋಜನ ನಮಗೆ ಸಿಕ್ಕಲಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಬೇಸಾಯ ಕಾಲೋನಿಗಳನ್ನು ಬೇರೆ ಮಾಡಿದ್ದಾರೆ.

ಅಧ್ಯಕ್ಷರು.—ಇನ್ನು ಹೊಸ ವಿಷಯಗಳನ್ನು ಡೆವಲಪ್ ಮಾಡುವುದು ಸರಿಯಲ್ಲ. ಅವರ ಪಕ್ಷದವರು ಇದ್ದಾರೆ. ಅವರ ಹತ್ತಿರ ಬೇಕಾದರೆ ಟೈಂ ಮತ್ತೆ ಕೇಳಿ ತೆಗೆದುಕೊಳ್ಳಿ. ನಮಗೆ 10 ನಿಮಿಷಗಳನ್ನು ಅವರೇ ಕೊಟ್ಟಿದ್ದಾರೆ. ತಮ್ಮ ಪಕ್ಷದ ನಾಯಕರಿಂದ ಬೇಕಾದಷ್ಟು ಕಾಲಾವಕಾಶವನ್ನು ತೆಗೆದುಕೊಂಡು ಮಾತನಾಡುವುದು ಸರಿಯೇ ಹೊರತು ನನ್ನ ಹತ್ತಿರ ಸದಸ್ಯರು ಈ ರೀತಿ ಚರ್ಚೆ ಮಾಡುವುದರಿಂದ ಬಹಳ ಕಷ್ಟವಾಗುತ್ತದೆ. ಇನ್ನೂ ಹೊಸ ವಿಷಯಗಳೇನಾದರೂ ಇದ್ದರೆ ಬಡ್ಜೆಟ್ ಚರ್ಚೆಯ ಕಾಲದಲ್ಲಿ ಮಾತನಾಡಬಹುದು ಎಂಬ ಅಂಶವನ್ನು ಮಾನ್ಯ ಸದಸ್ಯರು ಗಮನಿಸಬೇಕು. ಆದ್ದರಿಂದ ಮಾನ್ಯ ಸದಸ್ಯರು ಆದಷ್ಟು ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಗೋಪಾಲ ಸಾಲೆನ್ನ.—ಕಾಲಾವಕಾಶವನ್ನು ಕೊಡುವ ಅಧಿಕಾರ ತಮಗೇ ಪೂರ್ತಿಯಾಗಿ ಇದೆ.

ಅಧ್ಯಕ್ಷರು.—ಒಂದು ಘಂಟೆಗೆ 60 ನಿಮಿಷಗಳಿರುವ ಬದಲು 65 ನಿಮಿಷಗಳಿದ್ದರೆ ಖಂಡಿತವಾಗಿ ಪ್ರತಿಯೊಬ್ಬರಿಗೂ ಕೇಳುವಷ್ಟು ಕಾಲಾವಕಾಶವನ್ನು ಕೊಡುತ್ತಿದ್ದೆ.

ಶ್ರೀ ಎಸ್. ಗೋಪಾಲ ಸಾಲೆನ್ನ.—ನನ್ನ ಪಕ್ಷದ ನಾಯಕರನ್ನು ನಾನು ಒಪ್ಪಿಸಿಕೊಳ್ಳುತ್ತೇನೆ. ಆದಷ್ಟು ಜಾಗ್ರತೆ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಈಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರನ್ನು ವರ್ಗ ಮಾಡುವುದಾಗಿ ಅದರಿಂದ ಸ್ವಲ್ಪ ಹಣ ಖರ್ಚಾಗಿದೆ. ಕಳೆದ ಸಾರಿ ಹೊಸದಾಗಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಡೈರೆಕ್ಟರಾಗಿ ಬಂದವರನ್ನು ಈಗ ಪುನಃ ಬದಲಾವಣೆ ಮಾಡಿ ಇನ್ನೊಬ್ಬರನ್ನು ತಂದಿದ್ದಾರೆ. ಇದು ಒಂದು ಕ್ರಮದಲ್ಲಿ ನಡೆಯಬೇಕು ಎಂಬ ಉದ್ದೇಶ ಸರ್ಕಾರಕ್ಕಿಲ್ಲವೆಂದು ನಾನು ಹೇಳುತ್ತೇನೆ. ಮೊದಲು ಎಷ್ಟೋ ವಿದ್ಯಾಮಂದಿರಗಳಿಗೆ, ಹಾಸ್ಟಲುಗಳಿಗೆ ಮತ್ತು ಸಮಾಜ ಮಂದಿರಗಳಿಗೆ ವಿದ್ಯಾ ಸೌಲತ್ತುಗಳ ಬಗ್ಗೆ ಸಾಲವನ್ನು ಕೊಡುತ್ತಿದ್ದರು. ಈಗ ಹೊಸದಾಗಿ ಇವರು ಮಾಡುವಂತಹದೇನೂ ಕಾಣುವುದಿಲ್ಲ. ಏನೋ ಸಂಶೋಧನೆಗಾಗಿ ಎಕ್ಸ್‌ಪೆರಿಮೆಂಟಿಗಾಗಿ ಕೆಲವು ಸಮಾಜ ಸೇವಾಕಾರ್ಯಗಳನ್ನು ಕೈಗೊಳ್ಳುತ್ತಿದ್ದೇವೆಂದು ಹೇಳುತ್ತಿದ್ದಾರೆಯೇ ಹೊರತು ಸಮಾಜ ಕಲ್ಯಾಣ ಮಂತ್ರಿಗಳಾಗಿರತಕ್ಕವರು ಈ ಬಗ್ಗೆ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಪಂಗಡದವರಿಗೆ ಯಾವ ಒಂದು ಅನುಕೂಲತೆಯನ್ನೂ ಸಂಬಂಧಪಟ್ಟ ಇಲಾಖೆಯಿಂದ ಕಲ್ಪಿಸಿಕೊಡುತ್ತಾ ಇಲ್ಲವೆಂಬ ಅಂಶವನ್ನು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಈ ಇಲಾಖೆಯ ಪೂರ್ಣಾಧಿಕಾರವನ್ನು ಮುಖ್ಯ ಮಂತ್ರಿಗಳು ವಹಿಸಿಕೊಳ್ಳುವುದು ಮತ್ತು ಅವರ ಕೈಗೆ ಬಿಟ್ಟುಕೊಡುವುದು ಒಳ್ಳೆಯದೆಂದು ನನ್ನ ಸಲಹೆ. ನಮ್ಮ ಪ್ರತಿನಿಧಿಯೊಬ್ಬರು ಈಗಾಗಲೇ ಒಂದು ಕಡೆಯಲ್ಲಿ ಕಾಡುಗಳ ರಕ್ಷಣೆ ಮತ್ತು ಸಮುದ್ರದ ಮೀನಿನ ಸಂಪತ್ತಿನ ರಕ್ಷಣೆ ನೋಡುತ್ತಾ ಇದ್ದಾರೆ. ನಮ್ಮ ವಿಷಯವನ್ನು ಯಾರೂ ನೋಡುತ್ತಿಲ್ಲ. ಮಾನ್ಯ ಶ್ರೀಮಾನ್ ಪ್ರಭಾಕರ್ ಅವರು ಸೋಷಿಯಲ್ ವೆಲ್‌ಫೇರಿನ ಉಪಮಂತ್ರಿಗಳಾಗಿದ್ದರೂ ನಮ್ಮ ದಲಿತವರ್ಗದವರಿಗೆ ಯಾವ ಪ್ರಯೋಜವೂ ಇಲ್ಲ. ಮಾನ್ಯ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ಯೋಜನಾ ಶಾಖೆಯ ಉಪಸಚಿವರಾಗಿದ್ದಾರೆ. ಇವರೆಲ್ಲರೂ ಎಲ್ಲಿದ್ದಾರೆಂಬುದು ಅವರಿಗೇ ಗೊತ್ತಿಲ್ಲವೆಂದು ಕಾಣುತ್ತದೆ. ಏನೇನು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೆಂಬುದೇ ನನಗೆ ಗೊತ್ತಿಲ್ಲ.

(ಶ್ರೀ ಎಸ್. ಗೋಪಾಲ ಸಾಲಿನ್ನ)

ಸುಮಾರು 3 ಲಕ್ಷ ಜನ ದಲಿತವರ್ಗದವರ ಪರವಾಗಿ ಕೇವಲ ಮೂರು ಜನ ಮಂತ್ರಿಗಳಿದ್ದಾರೆ. ಅದರಲ್ಲಿ ಇಬ್ಬರು ಉಪಮಂತ್ರಿಗಳಿದ್ದಾರೆ. ಈ ಮೂರು ಜನರೂ ದಲಿತವರ್ಗದವರ ಹಿತರಕ್ಷಣೆಯನ್ನು ನೋಡದೇ ಇದ್ದರೆ ಇವರು ಏತಕ್ಕೆ ಇರಬೇಕು ? ಈಗ ಈ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಆ ಜನರು ಮುಂದೆ ಬಂದಿದ್ದಾರೆ. ಅವರು ಇವರನ್ನು ಸುಮ್ಮನೆ ಬಿಡುವ ಕಾಲ ಹೋಯಿತು. ಅವರಂತೆಯೇ ಬಿಡುವ ಕಾಲವಿಲ್ಲ. ಮದ್ರಾಸಿನಲ್ಲಿ ಹಿಂದೆ ಒಂದು ಸಾರಿ ಅಲ್ಲಿನ ಜನ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಪ್ರಕಾಶಂ ಅವರ ಮನೆ ಬಾಗಿಲಿನಲ್ಲಿ ಸತ್ಯಾಗ್ರಹ ಚಳವಳಿಯನ್ನು ಹೂಡಿದಂತೆ ಇಲ್ಲಿಯೂ ದಲಿತವರ್ಗದವರೊಡನೆ ಜನ ಮಾನ್ಯ ಮಂತ್ರಿಗಳ ಮನೆಯ ಬಾಗಿಲಿನ ಮುಂದೆ ಸತ್ಯಾಗ್ರಹವನ್ನು ಹೂಡುವ ಕಾಲ ಈಗ ಬಂದಿದೆ. ಜನರು ಆ ಪ್ರಕಾರ ಚಳುವಳಿಯನ್ನು ಆರಂಭಿಸಬಹುದೆಂಬುದನ್ನು ನಾನು ಈಗಲೇ ಆಡಳಿತ ಪಕ್ಷದವರಿಗೆ ಎಚ್ಚರಿಸುತ್ತೇನೆ.

ಅಧ್ಯಕ್ಷರು.—ತಮ್ಮ ವೇಳೆಯಾಯಿತು. ಆದಷ್ಟು ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಎಸ್. ಗೋಪಾಲ ಸಾಲಿನ್ನ.—ಆದ್ದರಿಂದ ಸರ್ಕಾರದವರು ನಮ್ಮ ನಿಮ್ನವರ್ಗದವರ ಅಭಿವೃದ್ಧಿ ಹೆಚ್ಚಿಗೆ ಗಮನ ಕೊಡಬೇಕು. ಅದರಲ್ಲೂ ಈ ನಮ್ಮ ದಲಿತವರ್ಗದವರ ಅಭಿವೃದ್ಧಿಗೆ ಹೆಚ್ಚಿಗೆ ಪ್ರಾಧಾನ್ಯತೆ ಕೊಡುವುದು ರಾಷ್ಟ್ರದ ಒಂದು ಮಹತ್ವದ ಕಾರ್ಯವೆನ್ನುವುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಪ್ರತ್ಯೇಕವಾಗಿ ಸೂಚನೆಯನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

(Chair's Ruling *re*: Expunction of Certain Remarks)

MR. SPEAKER.—Now, before I call upon another member, I must deal with a very important matter. I wish the hon'ble member who spoke about the Governor was present here. He raised a very serious matter and I drew his attention to it. He mentioned to me that he had not said anything which was objectionable. I have got a copy of that portion which relates to the matter. I am sorry the member is not here now. I sent a messenger to find out whether he was in the lobby so that he might be requested to come in and hear it himself.

I am sorry, a few sentences which I read are not only objectionable but highly objectionable. I am dealing with it to-day only because I do not want the Press to report it. I direct that these sentences will be expunged. I am making this very clear to the House and those who are here to record the proceedings * * * *

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಸಭಾಪತಿಯವರೇ, ನನಗೆ ಕನ್ನಡದಲ್ಲಿ ಮಾತನಾಡುವ ಅಭ್ಯಾಸ ಅಷ್ಟಾಗಿ ಇಲ್ಲ. ಆದರೂ ನನಗೆ ತಿಳಿದಮಟ್ಟಿಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯಪಾಲರು ಕನ್ನಡದಲ್ಲಿ ಏನು ಮಾತನಾಡಿದರು ಅದಕ್ಕಾಗಿ ನಾನು ಅವರಿಗೆ ಅಭಿನಂದನೆ ಮಾಡಿ ಮುಂದೆ ರಾಜ್ಯಪಾಲರ ಭಾಷಣದ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ.

1956ನೇ ಇಸವಿಗಿಂತ ಮೊದಲು ಈ ಕರ್ನಾಟಕ ರಾಜ್ಯ ಬೇರೆ ಬೇರೆ ಭಾಗಗಳಲ್ಲಿ ಇತ್ತು. 1956ನೇ ಇಸವಿಯಲ್ಲಿ ಕನ್ನಡ ನಾಡು ಒಂದಾಗಿ ನವಕರ್ನಾಟಕ ರಾಜ್ಯ ನಿರ್ಮಾಣವಾಯಿತು. ಅನಂತರ ಈ ಸಭೆಯಲ್ಲಿ ಒಂದು ಠರಾವನ್ನು ತಂದು ಈ ರಾಜ್ಯಕ್ಕೆ ಈಗಿರುವ ಹೆಸರನ್ನು ಬದಲಾವಣೆ ಮಾಡಿ ಕರ್ನಾಟಕ ಎಂದು ಹೆಸರಿಡಬೇಕೆಂದು ಪ್ರಯತ್ನಪಟ್ಟರು. ಅದರ ಮುಖಾಂತರ ಒಂದು ಸುಲಭವಾದ ರೀತಿಯಿಂದ ಭಾವೈಕ್ಯತೆಯನ್ನು ನಿರ್ಮಾಣಮಾಡಬೇಕೆಂದು ಪ್ರಯತ್ನಪಟ್ಟರು. ಆ ಠರಾವಿನ ಮೇಲೆ ಪೂರ್ಣವಾದ ಚರ್ಚೆ ನಡೆದು ಈ ಸಭೆಯ ಮಾನ್ಯ ಸದಸ್ಯರ ಪೈಕಿ ಸುಮಾರು $\frac{3}{4}$ಭಾಗ ಸದಸ್ಯರು ಆ ಠರಾವನ್ನು ಅನುಮೋದಿಸಿ ಈ ದೇಶಕ್ಕೆ ಕರ್ನಾಟಕ ಎಂದು ಹೆಸರಿಡ

* * * * Expunged as ordered by the Chair.